

ನಮ್ಮ ಮಾನಸ

ಸಂಪುಟ: 4 ಆಗಸ್ಟ್ 2010 ಸಂಚಿಕೆ : 4

ಇಂದು ಮುದಿಯಾಗಿ
ಬೋಳು ಬೋಳಾಗಿ
ಬೀದಿಗಳಲ್ಲಿ ಬೇಡುತ್ತಾ
ಸೆರಗೊಡ್ಡಿದ ಜೋಗಿತಿಯ
ಬಿಂಬ ಪ್ರತಿ ಬಿಂಬಗಳು
ನಮ್ಮೊಳಗಿನ ಅಣಕುಗಳೆ?

ಚಿಕುಂಗುನ್ಯ : ಗಾಬರಿ ಬೇಡ : ನಿಮಗಿದು ತಿಳಿದಿರಲಿ

ಇದು ಒಂದು ವೈರಸ್ ಕಾಯಿಲೆಯೆಂದು ಖಚಿತಪಟ್ಟಿರುತ್ತದೆ. ಈ ಕಾಯಿಲೆಯಿಂದ ನರಳುವವರು ಇದ್ದಕ್ಕಿದ್ದಂತೆ ಸಾಧಾರಣದಿಂದ ತೀವ್ರ ಜ್ವರಕ್ಕೊಳಗಾಗಿ ಮೈ ಕೈ ನೋವು, ತಲೆನೋವು, ಸ್ನಾಯು ಮತ್ತು ಕೀಲುಗಳಲ್ಲಿ ತೀವ್ರತರವಾದ ನೋವು, ಕಣ್ಣುಗಳು ಕೆಂಪಾಗುವಿಕೆ, ನಿಶ್ಶಕ್ತಿಗೀಡಾಗಿ ಓಡಾಡಲು ಸಹ ಅಶಕ್ತರಾಗುತ್ತಾರೆ. ಕ್ರಮೇಣ 8–10 ದಿವಸಗಳಲ್ಲಿ ತಾವಾಗಿಯೇ ಗುಣಮುಖರಾಗಿರುತ್ತಾರೆ. ಈ ರೋಗ ಮಾರಣಾಂತಿಕವಲ್ಲವೆಂಬುದನ್ನು ಮರೆಯಬಾರದು.

ಮೇಲೆ ತಿಳಿಸಿರುವ ಚಿಕುಂಗುನ್ಯ ಜ್ವರದ ಚಿಹ್ನೆಗಳು ಕಾಣಿಸಿದಲ್ಲಿ ಕೂಡಲೇ ಹತ್ತಿರದ ಸರ್ಕಾರಿ ಆಸ್ಪತ್ರೆ ಸಂಪರ್ಕಿಸಿ ಚಿಕಿತ್ಸೆ ಪಡೆಯಬೇಕು.

ಈ ರೋಗ ಹರಡಲು ಈಡಿಸ್‌ಈಜಿಪ್ಟೈ ಸೊಳ್ಳೆಗಳು ಕಾರಣವಾಗಿರುವುದರಿಂದ ಈ ಸೊಳ್ಳೆಗಳು ಉತ್ಪತ್ತಿಯಾಗುವ ತಾಣಗಳಾದ ನೀರು ಶೇಖರಣಾ ತೊಟ್ಟಿ, ಡ್ರಮ್‌ಗಳು, ಬ್ಯಾರಲ್‌ಗಳು ಮುಂತಾದವುಗಳಲ್ಲಿನ ನೀರನ್ನು ವಾರಕ್ಕೊಮ್ಮೆ ಖಾಲಿ ಮಾಡಿ ಒಣಗಿಸಿ ಮತ್ತೆ ಭರ್ತಿ ಮಾಡಿಕೊಳ್ಳಬೇಕು ಹಾಗೂ ಇವುಗಳನ್ನು ಭದ್ರವಾದ ಮುಚ್ಚಳದಿಂದ ಮುಚ್ಚಬೇಕು. ಒಡೆದ ಟೈರು, ಪ್ಲಾಸ್ಟಿಕ್ ಕಪ್ಪು, ಒಡೆದ ಬಾಟಲಿ, ಟಿನ್ನು, ತೆಂಗಿನ ಚಿಪ್ಪುಗಳಲ್ಲಿ ನೀರು ಸಂಗ್ರಹವಾಗದಂತೆ ನೋಡಿಕೊಳ್ಳಬೇಕು. ಏರ್ ಕಂಡೀಷನರ್, ರೆಫ್ರಿಜಿರೇಟರ್‌ಗಳಲ್ಲಿನ ನೀರನ್ನು ವಾರಕ್ಕೊಮ್ಮೆ ಬದಲಾಯಿಸುತ್ತಿರಬೇಕು. ನೂತನ ಕಟ್ಟಡ ಕಟ್ಟುತ್ತಿರುವವರು ನೀರಿನ ತೊಟ್ಟಿಗಳನ್ನು ಪ್ರತಿ ವಾರ ಖಾಲಿ ಮಾಡಿ ಮನೆಯ ಸುತ್ತಮುತ್ತ ನೀರು ನಿಲ್ಲದಂತೆ ಎಚ್ಚರಿಕೆ ವಹಿಸಬೇಕು. ಹಗಲಿನಲ್ಲಿ ಕಚ್ಚುವ ಈ ಸೊಳ್ಳೆಗಳು ಚಿಕುಂಗುನ್ಯ ಜ್ವರವನ್ನು ಹರಡುತ್ತವೆ. ಮಲಗುವ ವೇಳೆಯಲ್ಲಿ ಸೊಳ್ಳೆಯ ಪರದೆಯನ್ನು ಉಪಯೋಗಿಸುವುದರಿಂದ ರೋಗ ಹರಡುವುದನ್ನು ನಿಯಂತ್ರಿಸಬಹುದು.

ಆರೋಗ್ಯ ಇಲಾಖೆಯು ಕೈಗೊಂಡಿರುವ ಜ್ವರ ನಿಯಂತ್ರಣ ಕ್ರಮಗಳಿಗೆ ಸಾರ್ವಜನಿಕರು ಸಹಕರಿಸಬೇಕಾಗಿ ವಿನಂತಿ.

ಸೊಳ್ಳೆಗಳ ನಿಯಂತ್ರಣ ನಮ್ಮ ನಿಮ್ಮೆಲ್ಲರ ಕರ್ತವ್ಯ.

ಕರ್ನಾಟಕ ವಾರ್ತೆ

ನಮ್ಮ ಮಾನಸ

ಆಗಸ್ಟ್ 2010

ಸಂಪುಟ : 4 ಸಂಚಿಕೆ : 4

Editor, Printer and Publisher
Rajeshwari H.S.,
No. 114/5, 9th Cross, 2nd Main
Chamarajpet, Bangalore - 560 018.
Mobile : 9449345698

Printed at
ILA Mudrana
No. 36, 40 Ft. Road, Raghavanagara,
New Timberyard Layout
Bangalore-26.
✆ : 26757159

ಸಂಪಾದಕ ಮಂಡಳಿ
ಚಂಪಾವತಿ ಹೆಚ್.ಎಸ್., ಸವಿತಾ ಎ.
ವೆಂ. ವನಜಾ, ಗೀತಾ, ಎಚ್.ಎಸ್. ಪುಷ್ಪಾ,

ಸಲಹೆ – ಸಹಕಾರ
ಇಳಾ ವಿಜಯಾ, ಸುಮಿತ್ರಾಬಾಯಿ ಬಿ.ಎಸ್.

ಮಾನಸ ಬಳಗ
ತಸ್ಲೀಂ ತಾಜ್, ವೇದವಲ್ಲಿ ಜಿ.ವಿ.
ವತ್ಸಲ ವೈ.ಎಸ್., ಶ್ಯಾಮಲ, ತಾಜುಮಾ

ಚಂದಾ ವಿವರ

ಬಿಡಿಪ್ರತಿ	**8–00 ರೂ.**
ವಾರ್ಷಿಕ ಚಂದಾ	**100–00 ರೂ.**
(ವಿಶೇಷ ಸಂಚಿಕೆಯೊಂದಿಗೆ)	
ಸಂಸ್ಥೆಗಳಿಗೆ	**150–00 ರೂ.**

ನಮ್ಮ ಮಾನಸ

114/5, 9ನೇ ತಿರುವು, 2ನೇ ಮುಖ್ಯರಸ್ತೆ,
ಚಾಮರಾಜಪೇಟೆ, ಬೆಂಗಳೂರು – 560 018

ಚಂದಾಹಣವನ್ನು ಈ ವಿಳಾಸಕ್ಕೆ ಚೆಕ್ ಅಥವಾ ಡಿ.ಡಿ. ಮೂಲಕ ಕಳಿಸಬಹುದು

– – –

ಮೈಸೂರಿನಲ್ಲಿ ಓದುಗರು ಪ್ರತಿಗಳಿಗೆ ಹಾಗೂ ಚಂದಾ ನವೀಕರಣಕ್ಕೆ ಸಂಪರ್ಕಿಸಿ

ವೆಂ. ವನಜ
2329, 12ನೇ ಮೈನ್, 2ನೇ ಹಂತ,
ವಿಜಯನಗರ, ಮೈಸೂರು – 570 017

ಪ್ರಾರಂಭ : 'ಮಾನುಷಿ' (1985ರಲ್ಲಿ),
ಅನಂತರ 'ಮಾನಸ',
ಈಗ 'ನಮ್ಮ ಮಾನಸ'

ಸಂಪಾದಕೀಯ

ಕೊಲೆಗಡುಕ ಮನಸ್ಸುಗಳು ಬಯಸಿದ್ದೆಲ್ಲ ಕಾನೂನೆ!

'ಮರ್ಯಾದಾ ಹತ್ಯೆ' ಪ್ರಕರಣಗಳು ಹರಿಯಾಣ, ಪಂಜಾಬ್, ಉತ್ತರ ಪ್ರದೇಶಗಳಲ್ಲಿಯೇ ವರ್ಷಕ್ಕೆ 900ರಷ್ಟು ನಡೆದಿದ್ದರೆ, ಇತರ ಪ್ರದೇಶಗಳಲ್ಲಿ ಒಟ್ಟು 200–300ರಷ್ಟು ನಡೆಯುತ್ತಿರುವದು ಆತಂಕದ ವಿಚಾರವಾಗಿದೆ ಎಂಬ ಅಂಶವನ್ನು ಚಂಡೀಘಡ್‌ನಲ್ಲಿ ವಾಸವಾಗಿರುವ ವಕೀಲರಾದ ಅನಿಲ್ ಮಲ್ಹೋತ್ರ ಹಾಗೂ ರಂಜಿತ್ ಮಲ್ಹೋತ್ರ ತಮ್ಮ ವರದಿಯಲ್ಲಿ ಪ್ರಚುರ ಪಡಿಸಿದ್ದಾರೆ. 'ಮರ್ಯಾದೆ'ಯ ಪ್ರಕರಣಗಳಲ್ಲಿ ಸಾರ್ವಜನಿಕವಾಗಿ ಅವಮಾನಕ್ಕೊಳಗಾದವರಿದ್ದಾರೆ. ಅಣ್ಣ–ತಂಗಿಯೆಂದು ಖಾಪ್ ಪಂಚಾಯಿತಿಗಳು (ಜಾತಿಗಳನ್ನು ಕಾಪಾಡಿಕೊಳ್ಳಲೆಂದೇ ಇರುವಂಥ ವ್ಯವಸ್ಥೆ) ಘೋಷಿಸಿ ಸಗೋತ್ರದ ಹಿನ್ನೆಲೆಯಲ್ಲಿ ಪ್ರತ್ಯೇಕಗೊಂಡವರಿದ್ದಾರೆ, ಸಾಮಾಜಿಕ ಬಹಿಷ್ಕಾರಕ್ಕೊಳಗಾದವರಿದ್ದಾರೆ, ಒತ್ತಾಯದಿಂದ ಬೇರ್ಪಟ್ಟವರಿದ್ದಾರೆ, ಒತ್ತಾಯದ ಮದುವೆಗಳಿಗೆ ಬಲಿಯಾದವರಿದ್ದಾರೆ, ಕೊನೆಗೆ ಭೀಕರವಾಗಿ ಹತ್ಯೆಯಾದವರಿದ್ದಾರೆ. ಇವೆಲ್ಲ ನಡೆಯುತ್ತಿರುವುದು ಅಂತರ್‌ಜಾತಿ ಹಾಗೂ ಸಗೋತ್ರ ಮದುವೆಯ ಹಿನ್ನೆಲೆಯಲ್ಲಿ ಕುಟುಂಬ, ಸಮುದಾಯದ ಮರ್ಯಾದೆ, ಗೌರವ, ಪ್ರತಿಷ್ಠೆಗಳನ್ನು ಕಾಯ್ದುಕೊಳ್ಳಲಿಕ್ಕಾಗಿ ಎಂಬಂತಹ ವಿಚಾರಗಳು ಸಾಮಾಜಿಕ ಮನ್ನಣೆ ಪಡೆದು ಇಂತಹ ಹಿಂಸೆಯನ್ನು ಪ್ರೋತ್ಸಾಹಿಸುತ್ತಿರುವುದು ಇನ್ನಷ್ಟು ಆತಂಕಕಾರಿಯಾದ ವಿಚಾರವಾಗಿದೆ.

ರೋಮಿಯೋ–ಜೂಲಿಯಟ್ ಪ್ರಸಂಗದಿಂದ ಇಲ್ಲಿಯವರೆಗೆ ಹೆಚ್ಚುತ್ತಿರುವ ಈ 'ಮರ್ಯಾದಾ ಹತ್ಯೆಯ' ಹಿನ್ನೆಲೆಯಲ್ಲಿ 'ಮರ್ಯಾದೆ' ಎಂಬ ಪರಿಕಲ್ಪನೆಯನ್ನು ಮರು ವ್ಯಾಖ್ಯಾನಕ್ಕೆ ಒಳಪಡಿಸುವ ಅಗತ್ಯವಿದೆ ಎಂಬ ಕಳಕಳಿಯ ಧ್ವನಿಗಳು ಈಗ ಎಲ್ಲೆಲ್ಲಿಯೂ ಕೇಳಿಬರುತ್ತಿವೆ. ಈ ಹಿಂಸೆಯನ್ನು ತಡೆಗಟ್ಟಲು 'ದಿ ಇಂಡಿಯನ್ ಸಿವಿಲ್ ಕೋಡ್ ಆ್ಯಕ್ಟ್', 'ದಿ ಇಂಡಿಯನ್ ಎವಿಡೆನ್ಸ್ ಆ್ಯಕ್ಟ್' ಹಾಗೂ 'ಸ್ಪೆಷಲ್ ಮ್ಯಾರೇಜ್ ಆ್ಯಕ್ಟ್'ನಲ್ಲಿ ಅನೇಕ ಮಾರ್ಪಾಟುಗಳನ್ನು ತರಲೇಬೇಕೆಂದು ಮಾನವ ಹಕ್ಕುಗಳ ಸಂಸ್ಥೆಗಳು, ಜನಪರ ಕಾಳಜಿಯುಳ್ಳ ವ್ಯಕ್ತಿ ಹಾಗೂ ಗುಂಪುಗಳು ಒತ್ತಾಯಿಸತೊಡಗಿವೆ. ಜೂನ್ 2007ರಲ್ಲಿ ಕೈತಾಲ್ ಜಿಲ್ಲೆಯ ಹರ್‍ಯಾಣ ರಾಜ್ಯದಲ್ಲಿ ಸಗೋತ್ರಕ್ಕೆ ಸೇರಿದ ಬಾಬ್ಲಿ–ಮನೋಜ್ ಮದುವೆಯಾಗಿ, ಕೊಲೆಯಾದ ಹಿನ್ನೆಲೆಯಲ್ಲಿ–ಖಾಪ್ ಪಂಚಾಯಿತಿಗಳ ಅಸ್ತಿತ್ವವನ್ನು ಪ್ರಶ್ನಿಸಲಾಗಿತ್ತು. ಕೊಲೆಗಾರರು ಮರಣದಂಡನೆ ಶಿಕ್ಷೆ ಪಡೆದರು. ಆದಾಗ್ಯೂ ಈ ಹಿನ್ನೆಲೆಯಲ್ಲಿ ಶಕ್ತಿವಾಹಿನಿ ಎಂಬ ಸರ್ಕಾರೇತರ ಸೇವಾ ಸಂಸ್ಥೆ 'ಮರ್ಯಾದಾ ಹತ್ಯೆ'ಯ ವಿರುದ್ಧ ಕ್ರಮ ಕೈಗೊಳ್ಳುವಲ್ಲಿ, ಈ ಹಿಂಸೆಯನ್ನು ತಡೆಗಟ್ಟುವಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ತಮ್ಮ ಪಾತ್ರವನ್ನು ನಿರ್ಲಕ್ಷಿಸಿವೆ ಎಂದು ಉಚ್ಚ ನ್ಯಾಯಾಲಯಕ್ಕೆ ಫಿರ್ಯಾದು ಮಾಡಿತ್ತು. ಉಚ್ಚ ನ್ಯಾಯಾಲಯ ಕೇಂದ್ರ ಸರ್ಕಾರಕ್ಕೂ ಒಳಗೊಂಡಂತೆ ಹರಿಯಾಣ, ಪಂಜಾಬ್, ಬಿಹಾರ್, ಉತ್ತರಪ್ರದೇಶ, ರಾಜಸ್ತಾನ್, ಮಧ್ಯಪ್ರದೇಶ, ಜಾರ್‌ಖಂಡ, ಹಿಮಾಲಯ ಪ್ರದೇಶಗಳಿಗೆ ನೋಟೀಸು ಜಾರಿ ಮಾಡಿ, 'ಮರ್ಯಾದಾ ಹತ್ಯೆ' ತಡೆಯಲು ಏನು ಕ್ರಮ ಕೈಗೊಂಡಿದ್ದಾರೆಂದು ವಿವರಿಸಬೇಕೆಂದು ಆದೇಶಿಸಿದೆ. ಈ ಹಿನ್ನೆಲೆಯಲ್ಲಿಯೇ ಕೇಂದ್ರ ಸರ್ಕಾರ ಕಾನೂನು ಸುಧಾರಣೆಗಳನ್ನು ಕುರಿತು ಸೂಚನೆ ನೀಡಲು ಮಂತ್ರಿಗಳ ನಿಯೋಗವೊಂದನ್ನು ರೂಪಿಸಿದೆ.

'ಮರ್ಯಾದಾ ಹತ್ಯೆ' ಇವತ್ತು ಅಂಟುಜಾಡ್ಯದ ರೀತಿ ಎಲ್ಲೆಡೆ ಹರಡಿಕೊಳ್ಳತೊಡಗಿದೆ. ಶತಮಾನದ ಹಿಂದಿನ ಊಳಿಗಮಾನ್ಯ ವ್ಯವಸ್ಥೆಯನ್ನು ಬಲಪಡಿಸುವ ಮನಸ್ಸುಗಳು ಇಂದು ಆಧುನಿಕತೆಗೆ ಡಿಕ್ಕಿ ಹೊಡೆಯತೊಡಗಿವೆ. ನಗರೀಕರಣ, ಪಟ್ಟಣ, ನಗರಗಳಲ್ಲಿ ವಲಸೆ ಹೆಚ್ಚಾದ ಹಾಗೆ 'ಸಂಸ್ಕೃತಿ'ಯ ಬೇರುಗಳು ಕವಲೊಡೆಯತೊಡಗಿವೆ. ಮಹಿಳೆಯರ ಆರ್ಥಿಕ ಸ್ವಾತಂತ್ರ್ಯದ ಹಿನ್ನೆಲೆಯಲ್ಲಿಯೂ ಕೂಡ ಸಂಪ್ರದಾಯಗಳು, ಟ್ಯಾಬೂಗಳು ಅನಿವಾರ್ಯವಾಗಿ ಸವಾಲುಗಳನ್ನು ಎದುರಿಸುತ್ತಿವೆ. ಬದಲಾಗುತ್ತಿರುವ ಕಾಲಮಾನದಲ್ಲಿ ಪ್ರತಿಯೊಬ್ಬ ವ್ಯಕ್ತಿಯ 'ಹಕ್ಕಿನ' ಪ್ರಜ್ಞೆಯಲ್ಲಿ

ಅನೇಕ ರೀತಿಯ ಮಾರ್ಪಾಡುಗಳು ಆಗುತ್ತಿರುತ್ತಿವೆ. ಈ ಹಕ್ಕು ಸಮುದಾಯದ ಹಕ್ಕಿನೊಡನೆ, ಕುಟುಂಬದ ಮರ್ಯಾದೆ, ಹಕ್ಕಿನೊಡನೆ ಘರ್ಷಣೆಗಳನ್ನು ಎದುರಿಸುತ್ತಲೇ ಇರುತ್ತದೆ. ಕುಟುಂಬದ ಮರ್ಯಾದೆ, ಹಕ್ಕು ಜಾತಿಯ ಸಂಪ್ರದಾಯದೊಡನೆ ತಳಕು ಹಾಕಿಕೊಂಡಿವೆ. ಮದುವೆಯ ಸಂಬಂಧದಲ್ಲಿ ಇವು ಹೆಚ್ಚಿನ ಮಟ್ಟಿಗೆ ಕಾಣಿಸಿಕೊಳ್ಳುತ್ತವೆ. ಅಂತರ್ಜಾತೀಯ ವಿವಾಹ ಜಾತಿಯ ಶುದ್ಧತೆಯನ್ನು ಹಾಳುಮಾಡುವ ಅಸ್ತ್ರವಾಗಿ ಕಾಣಿಸಿಕೊಳ್ಳುತ್ತಿದೆ. ಬದಲಾದ ಕಾಲಮಾನದಲ್ಲಿ ಹಕ್ಕಿನ ಪ್ರಶ್ನೆ ಕಾಲಮಾನಕ್ಕನುಗುಣವಾಗಿ ಬದಲಾಗುತ್ತಿದ್ದರೆ, ಮರ್ಯಾದೆಯ ಪ್ರಶ್ನೆ ಊಳಿಗಮಾನ್ಯ, ಮತಾಂಧತೆ, ಪಿತೃಪ್ರಾಧಾನ್ಯದೊಂದಿಗೆ, ಜಾತಿಯೊಂದಿಗೆ ತಳುಕು ಹಾಕಿಕೊಂಡೇ ಮುಂದುವರಿಯುತ್ತಿದೆ. ಇವುಗಳೇ ನಿರಂತರವಾಗಿ, ಅಮರವಾಗಿ ಇರುವಂತಹ ಮೌಲ್ಯಗಳಲ್ಲ. ಸಂಪ್ರದಾಯ, ಸಾಂಪ್ರದಾಯಿಕ ಸಾಂಸ್ಕೃತಿಕ ಮೌಲ್ಯಗಳೂ ಸಹ ಬದುಕಿನ ದಾರಿ, ರೀತಿ ನೀತಿಗಳಿಗೆ ಬದಲಾಗಲೇ ಬೇಕಾದ ಅಗತ್ಯ ಕೂಡಾ ಇದೆ.

'ಸತಿ ಪದ್ಧತಿ'–ಒಂದು ಕಾಲಕ್ಕೆ ಸಾಮಾಜಿಕ ಮರ್ಯಾದೆಯ ಪ್ರಶ್ನೆಯಾಗಿತ್ತು, ಎಂದು ಹೇಳಿದರೆ ಇಂದು ಅದು ಅಮಾನವೀಯ ಪದ್ಧತಿ ಮಾತ್ರವಲ್ಲ, ಕಾನೂನು ಬಾಹಿರ ಕೂಡಾ ಆಗಿದೆ. ಹಾಗೆ ಒಂದು ಕಾಲಕ್ಕೆ ಸಾಮಾಜಿಕ ಮೌಲ್ಯವಾಗಿದ್ದು ಸವಕಲು ನಾಣ್ಯವಾದಂತೆ ಭಿನ್ನ ಭಿನ್ನ ರಾಜಕೀಯ, ಸಾಮಾಜಿಕ, ಆರ್ಥಿಕ ವ್ಯವಸ್ಥೆಯಲ್ಲಿ ಹೊಸದಾದ ನಾಣ್ಯಗಳು ಚಲಾವಣೆಗೆ ಬರುತ್ತವೆ. ಇಂತಹ ಸಂದರ್ಭದಲ್ಲಿ ಮರ್ಯಾದೆಯ ರೆಜೀಮ್ ಪಿತೃಪ್ರಧಾನ, ಊಳಿಗಮಾನ್ಯ ಮೌಲ್ಯಗಳೊಂದಿಗೆ 'ಮರ್ಯಾದಾ ಹತ್ಯೆ' ನಡೆಸುತ್ತಾ ಸಾಮಾಜಿಕ ಮನ್ನಣೆಯೊಂದಿಗೇ ಹಿಂಸೆಯನ್ನು ಮುಂದುವರಿಸುತ್ತದೆ ಎಂದರೆ ಇದು ನಮ್ಮ ಸಮಾಜ ಇಂದು ನಿಂತಿರುವ ಕಾಲಮಾನವನ್ನು ಸೂಚಿಸುತ್ತದೆ.

ಖಾಫ್ ಪಂಚಾಯಿತಿಗಳಲ್ಲಿ ಮಹಿಳೆಯರಾಗಲೀ, ಯುವ ಜನರಾಗಲೀ ಸದಸ್ಯರಲ್ಲ. ಪಂಚಾಯಿತಿಗಳು ಸ್ವಯಂ ಆಗಿ ಜಾತಿ ಸಾಂಸ್ಕೃತಿಕ ವಕ್ತಾರರನ್ನಾಗಿ ಘೋಷಿಸಿಕೊಂಡಿದ್ದಾರೆ. ತಮ್ಮ ಜವಾಬ್ದಾರಿಯೆಂಬಂತೆ ಇವುಗಳನ್ನು ಮೀರಿದವರನ್ನು ದಂಡಿಸುತ್ತಾರೆ. ಜೊತೆಗೆ ಸಗೋತ್ರ ವಿವಾಹಗಳು, ಅಂತರ್ಜಾತೀಯ ವಿವಾಹಗಳ ಮೇಲೆ ನಿಷೇಧ ಹೇರಿದ್ದಾರೆ. ಅನೇಕ ರಾಜಕಾರಣಿಗಳು ಖಾಫ್ ಪಂಚಾಯಿತಿಯ ಬೇಡಿಕೆಗಳನ್ನು, ಕಾರ್ಯವಿಧಾನಗಳನ್ನು ಸಮರ್ಥಿಸಿದ್ದಾರೆ. ಸಗೋತ್ರ ಕೆಲವು ಸಲ ಗುರುಗಳ ಹಿನ್ನೆಲೆಯಲ್ಲಿ, ಇನ್ನೊಮ್ಮೆ ಉದ್ಯೋಗದ ಹಿನ್ನೆಲೆಯಲ್ಲಿ ಅಸ್ತಿತ್ವಕ್ಕೆ ಬಂದಿದೆ. ಬೇರೆ ಬೇರೆ ಜಾತಿಯಲ್ಲೂ ಇಂತಹ ಸಗೋತ್ರಗಳು ಇಂದು ಕಂಡುಬರುತ್ತಿವೆ. 10–12 ತಲೆಮಾರುಗಳಲ್ಲಿ ಈ ಅಂಶಗಳು ಅನೇಕ ರೀತಿಯ ಮಾರ್ಪಾಡುಗಳಿಗೂ ಒಳಗಾಗಿವೆ. ಒಂದೇ ಜೀನ್ಸ್‌ಗಳಿಂದ ಬಂದಿರುವ ಕುಟುಂಬಗಳ ಸದಸ್ಯರು ಅಣ್ಣ–ತಂಗಿಯರಾಗುತ್ತಾರೆ, ಜೊತೆಗೆ ಹುಟ್ಟುವ ಮಕ್ಕಳಲ್ಲಿ ವಿಕಲತೆಯ ಅಂಗವಿರುತ್ತದೆ ಎನ್ನುವ ಕಾರಣಗಳನ್ನೊಡ್ಡಿ ಸಗೋತ್ರ ವಿವಾಹದ ನಿಷೇಧವನ್ನು ಎತ್ತಿಹಿಡಿಯಲಾಗುತ್ತಿದೆ. ಆದರೆ ಕಾಲಾನುಕಾಲದಲ್ಲಿ ಮೌಲ್ಯಗಳು ಮಾರ್ಪಾಡು ಹೊಂದುತ್ತಿರುವ ಈ ಸಂದರ್ಭದಲ್ಲಿ ಸಗೋತ್ರ ವಿವಾಹಕ್ಕೆ ನಿಷೇಧ ಹೇರುವುದು ಸರಿಯಲ್ಲ.

'ಮರ್ಯಾದೆ'ಯ ಹೆಸರಿನಲ್ಲಿ ನಡೆಯುತ್ತಿರುವ ಇಂತಹ ಹಿಂಸೆ ಮನುಷ್ಯರ ಮೂಲಭೂತ ಹಕ್ಕಿಗೆ ಚ್ಯುತಿ ಒಡ್ಡುವ ತಂತ್ರ, ಇದನ್ನು ವಿರೋಧಿಸಬೇಕಾಗಿದೆ. ಹೆಂಗಸರ ಮೇಲೆ ನಡೆಯುತ್ತಿರುವ ಇಂತಹ ಮರ್ಯಾದಾ ಹತ್ಯೆಗಳನ್ನು ಮಹಿಳೆಯರ ಹಕ್ಕಿನ ಪ್ರಶ್ನೆಯ ಹಿನ್ನೆಲೆಯಲ್ಲಿ ನೋಡಿ, ವಿರೋಧಿಸುವ ಅಗತ್ಯವಿದೆ. ಅಂದರೆ ಮಹಿಳೆ ಸಮಾನ ಹಕ್ಕುಳ್ಳ ಪ್ರಜೆ ಎಂದು ಪರಿಗಣಿಸುವ ಅಗತ್ಯವನ್ನು ನಾವು ಎತ್ತಿ ಹಿಡಿಯಬೇಕಾಗಿದೆ.

'ಯೂನಿವರ್ಸಲ್ ಡಿಕ್ಲರೇಶನ್ ಆಫ್ ಹ್ಯೂಮನ್ ರೈಟ್ಸ್'ನ ಸದಸ್ಯತ್ವ ಹೊಂದಿರುವ ಭಾರತ ಇಲ್ಲಿಯ ಭಾರತೀಯರ ಹಕ್ಕು, ಸ್ವಾತಂತ್ರ್ಯಗಳನ್ನು ರಕ್ಷಿಸುವ ಜವಾಬ್ದಾರಿ, ಹೊಣೆಯನ್ನು ಹೊಂದಿದೆ. ಆದರೆ ಮರ್ಯಾದಾ ಹತ್ಯೆಯ ಹಿಂಸೆಯನ್ನು ತಡೆಗಟ್ಟುವಲ್ಲಿ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ವಿಫಲವಾಗುತ್ತಿರುವುದು ಸ್ಪಷ್ಟವಾಗಿದೆ. ಈ ಹಿಂಸೆಯ ನಿಯಂತ್ರಣಕ್ಕೆ ಒಂದು ರಾಜಕೀಯ ಇಚ್ಛಾಶಕ್ತಿ ಬೇಕು. ಆದರೆ ಓಟು ಬ್ಯಾಂಕಿನ ರಾಜಕಾರಣ ನಂಬಿಕೊಂಡಿರುವ ರಾಜಕಾರಣಿಗಳು 'ಅಧಿಕಾರ'ದ ಆಸೆಗೆ ಜಾತಿಯನ್ನೇ ಬೆನ್ನೆಲುಬಾಗಿಸಿಕೊಂಡಿರುವುದರಿಂದ ಹಿಂಸೆಯ ನಿಯಂತ್ರಣದಲ್ಲಿ ಸ್ಪಷ್ಟವಾದ ನಿಲುವನ್ನು ತಾಳುತ್ತಿಲ್ಲ. ರಾಜಕಾರಣಿಗಳ ಡೋಲಾಯಮಾನ ಸ್ಥಿತಿಯಲ್ಲಿ ಸರ್ಕಾರಗಳು ಹಿಂಸೆಯನ್ನು ಮೌನವಾಗಿ ವೀಕ್ಷಣೆ ಮಾಡುವಂತಾಗಿದೆ. ಇಂದು ಕಾನೂನುಗಳ ಮಾರ್ಪಾಡಿನ ಅಗತ್ಯ ಅತ್ಯಂತ ಜರೂರಿಯ ಬೇಡಿಕೆಯಾಗಬೇಕಿದೆ. ಕೇಂದ್ರ ಸರ್ಕಾರಕ್ಕೆ ಒತ್ತಡ ಹೇರುವುದರ ಜೊತೆಗೆ ಮರ್ಯಾದಾ ಹತ್ಯೆಯ ಪ್ರಕರಣಗಳು ಆಮೂಲಾಗ್ರವಾಗಿ ತನಿಖೆಯಾಗಬೇಕಿದೆ. ಪ್ರತಿ ಪ್ರಕರಣದಲ್ಲೂ ತಪ್ಪಿತಸ್ಥರನ್ನು ಶಿಕ್ಷೆಗೆ ಗುರಿಪಡಿಸಬೇಕಾಗಿದೆ. ಅಂತರ್ಜಾತಿ ಅಥವಾ ಸಗೋತ್ರದ 'ಆಯ್ಕೆ'ಯ ವಿವಾಹ ಮಾಡಿಕೊಳ್ಳುವವರನ್ನು ಸಂರಕ್ಷಿಸುವ ಹೊಣೆಯನ್ನು ಸರ್ಕಾರ ನಿಭಾಯಿಸಬೇಕೆಂಬುದನ್ನೂ ಕೂಡ ನಾವು ಒತ್ತಾಯಿಸಬೇಕಾಗಿದೆ. ❑

ಒಳಗಿನ ಪುಟಗಳಲ್ಲಿ....


ಸಾಂಪ್ರದಾಯಿಕತೆ ಮತ್ತು ಆಧುನಿಕತೆಗಳ ಸೇತು: ಜಯಶ್ರೀ ರಾಜಾರಾಂ

■ ಮಾನಸ

ಇತ್ತೀಚೆಗೆ ಬೆಂಗಳೂರಿನ ಸುಚಿತ್ರ ಸಂಸ್ಥೆಯ ಆವರಣದಲ್ಲಿ ನಾಡಿನ ಹಿರಿಯ ತಲೆಮಾರಿನ ಲೇಖಕಿ ಶ್ರೀಮತಿ ಜಯಶ್ರೀ ರಾಜಾರಾಂ ಅವರ ಮೂರು ಕೃತಿಗಳ ಲೋಕಾರ್ಪಣೆಯ ಸಮಾರಂಭ ಚಾರುಮತಿ ಪ್ರಕಾಶನದ ವತಿಯಿಂದ ನಡೆಯಿತು. ಜಯಶ್ರೀ ಚಿಕ್ಕವಯಸ್ಸಿನಿಂದಲೇ ಕತೆಗಳನ್ನು ಬರೆದವರು, ಮುಂದೆ ಹಲವಾರು ಕಾದಂಬರಿಗಳನ್ನು ರಚಿಸಿದ್ದಾರೆ. ಟಿ. ಸುನಂದಮ್ಮ ಎಂ.ಕೆ. ಇಂದಿರಾರಂಥವರ ಸಮಕಾಲದಲ್ಲಿ ಬರೆಯುತ್ತಿದ್ದರೂ ಅವರ ಹಾಗೆ ಸಾಮಾಜಿಕತೆಯ ಹೊನ್ನ ಬೆಳಕಿನಲ್ಲಿ ಹೊಳೆಯದೆ ತಮ್ಮ ಪಾಡಿಗೆ ತಾವು ಬರೆಯುತ್ತಾ ಬಂದವರು. ಅವರ ಬಗ್ಗೆ ನಮಗೆ ತಿಳಿವಳಿಕೆ ದೊರೆತದ್ದೇ ಈಚೆಗಿನ ಅವರ ಪುಸ್ತಕ ಬಿಡುಗಡೆಯ ಸಂದರ್ಭದಿಂದ.

ಕತೆಗಾರ, ಜೀವನಪ್ರಕಾಶ, ಸುಧಾ, ಸಂಯುಕ್ತ ಕರ್ನಾಟಕ, ಜನವಾಣಿ, ಯಾತ್ರಿಕ, ಸ್ತ್ರೀರತ್ನದಂಥ ಪ್ರಸಿದ್ಧ ಪತ್ರಿಕೆಗಳಲ್ಲಿ ಇವರ ಕತೆಗಳು, ಕಾದಂಬರಿ (ಧಾರಾವಾಹಿ)ಗಳು ಪ್ರಕಟವಾಗಿದ್ದರೂ, ಈಗ ಓದಿದರೂ ಅವುಗಳ ವೈಚಾರಿಕತೆ, ಸಂವೇದನಾಶೀಲತೆಗಳು ಮನಮುಟ್ಟುವಂತಿವೆ. ಇಂತಹ ಹಿರಿಯರು ಎಲೆಮರೆಯ ಹೂವಿನಂತೆ ಉಳಿದಿರುವುದು ನಿಜಕ್ಕೂ ಆಶ್ಚರ್ಯ ಮಾತ್ರವಲ್ಲ ಅವರ ಸ್ಥಿತಪ್ರಜ್ಞೆಗೂ ಒಂದು ಸೂಚನೆ ಎನ್ನಬಹುದು.

'ನಮ್ಮ ಮಾನಸ'ಕ್ಕಾಗಿ ಅವರನ್ನು ಸಂದರ್ಶಿಸಿದ್ದರ ಒಂದು ಚಿತ್ರ ಇಲ್ಲಿದೆ.



ಜಯಶ್ರೀ ಅವರೊಂದಿಗೆ ನಮ್ಮ ಮಾನಸದ ಮಾತುಕತೆ :

- ***ನಿಮ್ಮ ವೈಯಕ್ತಿಕ ಜೀವನದ ಬಗ್ಗೆ ಕೊಂಚ ವಿವರವಾಗಿ ಹೇಳ್ತೀರಾ?***

ಜಯಶ್ರೀ : ಜೀವನಾನೇ ಒಂದು ಪಾಠಶಾಲೆ. ಅದೇ ನಮಗೆ ಪಾಠ ಕಲಿಸತ್ತೆ. ಒಬ್ಬೊಬ್ರಿಗೆ ಒಂದೊಂದಿಷ್ಟು ಅಂತ ದೇವರು ಕೊಟ್ಟಿರ್ತಾನೆ. ಅದರಲ್ಲೇ ಸಂತೋಷ ಕಾಣಬೇಕಷ್ಟೇ. ಚಿಕ್ಕವಯಸ್ಸಿನಲ್ಲಿ ಅಂದರೆ 18ಕ್ಕೆ ಮದುವೆ ಆಯಿತು. ಯಜಮಾನರ ಜೊತೆ ಮಹಾರಾಷ್ಟ್ರ, ಬಾಗಲಕೋಟೆ ಅಂತ ಎಷ್ಟೋ ಸ್ಥಳದಲ್ಲಿ ನೆಲೆಸಲೂ ಬೇಕಾಯಿತು. ಕರ್ನಾಟಕ ಸರ್ಕಾರದ ನೀರಾವರಿ ಯೋಜನೆಗಳ ನಿರ್ವಹಣೆಯ ದೊಡ್ಡ ಹೊಣೆಗಾರಿಕೆ ವಹಿಸಿಕೊಂಡಿದ್ದವರು ಯಜಮಾನರು. ಮಹಾರಾಷ್ಟ್ರದಿಂದ ಕರ್ನಾಟಕ ಸರ್ಕಾರವೇ ಅವರನ್ನು ಕರೆಸಿಕೊಂಡಿತು. ಇಲ್ಲಿ ಕಾವೇರಿ ನದಿಯ ನೀರಾವರಿ ಯೋಜನೆಯನ್ನು ಪೂರ್ಣವಾಗಿ ರೂಪಿಸಿಕೊಟ್ಟ ಮಹನೀಯರು ಅವರು. ಸಾವೇ ಇಲ್ಲಿಗೆ ಕರೆದಿತ್ತೇನೋ! ಕಾವೇರಿ ಪ್ರಾಜೆಕ್ಟ್ ಮುಗಿಸಿಕೊಟ್ಟರು, ಹೋಗಿಯೇ ಬಿಟ್ಟರು. ನಾನು ಇಬ್ಬರು ಮಕ್ಕಳನ್ನು ಸಾಕಿ ಬೆಳೆಸುವ ಕಾಯಕ ಕೈಗೊಂಡೆ. ಅದಿದ್ದಂತೆಯೇ ಬದುಕನ್ನು ಸ್ವೀಕರಿಸ್ತಾ ಬಂದಿದ್ದೇನೆ.

- ***ನೀವು ಕತೆ ಬರೆಯಲು ತೊಡಗಿದ್ದು ಹೇಗೆ? ಯಾರದಾದರೂ ಪ್ರೇರಣೆ ಪ್ರೋತ್ಸಾಹ ಸಿಕ್ಕಿತ್ತೆ?***

ಜಯಶ್ರೀ : ಕತೆಗಾರಿಕೆ ನನಗೆ ಬಹುಶಃ ರಕ್ತದಿಂದಲೇ ಬಂದದ್ದು ಅನ್ನಬಹುದು. ನನ್ನ ಸೋದರಮಾವ ಹೆಸರಾಂತ ಕನ್ನಡ ಕತೆಗಾರ ಮಾಸ್ತಿಯವರು ಅವರ ತಾಯಿ ಅಂದರೆ ನಮ್ಮ ತಾತನ ಅಕ್ಕ ತುಂಬ ಸೊಗಸಾಗಿ ಕತೆ ಹೇಳ್ತಿದ್ದರು... ನನಗೆ ಸುಮಾರು ಏಳನೇ ವಯಸ್ಸಿನಿಂದಲೇ ಕಂಡದ್ದನ್ನು, ಅನ್ನಿಸಿದ್ದನ್ನೆಲ್ಲ ಕತೆಯಾಗಿಸೋ ಹುಚ್ಚು. ಹೈಸ್ಕೂಲಿನಲ್ಲಿ ನಮ್ಮ ಕನ್ನಡ ಮೇಷ್ಟ್ರು ಕೃಷ್ಣಮೂರ್ತಿ ಅನ್ನೋವ್ರು ನನ್ನ ಕತೆ ರಚನೆಗೆ ತುಂಬ ಪ್ರೋತ್ಸಾಹ ಕೊಟ್ಟರು. ಮಾವ ಮಾಸ್ತಿ ಕೂಡ ಬೇಕಾದಷ್ಟು ಪ್ರೀತಿಯ ಬೆಂಬಲ ಕೊಡ್ತಾ ಇದ್ದರು.

● *ಬೆಂಗಳೂರಿನ ಸುಪ್ರಸಿದ್ಧ ಲೇಖಕಿ ಆರ್. ಕಲ್ಯಾಣಮ್ಮನವರ ಪರಿಚಯ, ಪ್ರಭಾವ ಏನಾದರೂ ಇತ್ತೆ?*

ಜಯಶ್ರೀ : ಆರ್ ಕಲ್ಯಾಣಮ್ಮನವರನ್ನು ನಾವುಗಳು ಶಾಲಾ ಬಾಲಕಿಯರಾಗಿ ದೂರದಿಂದ ನೋಡ್ತಿದ್ದೆವು ಅಷ್ಟೆ. ಟಿನ್‌ಸ್ಕೂಲು ಅಂತ ಇತ್ತು. ಅದರಿಂದ ಅವರು ಬರ್ತಾ ಇರ್ತಿದ್ದರು. ನಮ್ಮ ಅಯ್ಯಂಗಾರ್ ಶೈಲಿಯಲ್ಲಿ ನೀಟಾಗಿ ಸೀರೆ ಉಟ್ಟು ಶಿಸ್ತಿನಿಂದ ನಡೆದು ಬರೋದನ್ನ ನೋಡಿ ಯಾರೋ ಟೀಚರ್ ಇರಬೇಕು ಅಂತ ಅಂದ್ಕೋತಿದ್ದೆ ಅಷ್ಟೆ. ಅದರಾಚೆಗೆ ಅವರ ಬಗ್ಗೆ ಬೇರೇನೂ ಗೊತ್ತಿರಲಿಲ್ಲ. 1942–43ರಲ್ಲಿ ನಮ್ಮ ಶಾಲೆಗೆ ಒಂದು ಸುತ್ತೋಲೆ ಬಂದಿತ್ತು. ಅದರಲ್ಲಿ ಆರ್. ಕಲ್ಯಾಣಮ್ಮನೋರ ಮಕ್ಕಳ ಕೂಟದ 'ತೊಟ್ಟಿಲ ಹಬ್ಬ'ದ ಸಮಾರಂಭ ಏರ್ಪಡಿಸಿದೆ. ಅದರಲ್ಲಿ ಭಾಗವಹಿಸಲು ಇಚ್ಛೆಯಿದ್ದವರು ಶಾಲೆಯ ಮಕ್ಕಳು ಹೆಸರು ಕೊಡಬಹುದು ಅಂತ ತಿಳಿಸಿದ್ದರು. ನನಗೂ ಆಸೆ ಆಯ್ತು. ನಾನೇ ತುಂಬ ಜಾಣೆ; ನನ್ನ ಬಿಟ್ರೆ ಜಗತ್ತೇ ಇಲ್ಲ ಅನ್ನೋ ಭಾವ. ನಾನು, ನನ್ನ ಮೂರು ಜನ ಸ್ನೇಹಿತೆಯರೂ ಹೋಗಿ ಹೆಸರು ಕೊಟ್ಟೆವು. ಉತ್ತರಾದಿ ಮಠದ ಆವರಣದಲ್ಲಿ ನಾವೇ ಏನೋ ಒಂದು ಮಾತಿಲ್ಲದ ನೃತ್ಯ ಪ್ರಾಕ್ಟೀಸು ಮಾಡಿದಿವಿ. ಒಂದು ಸೀರೆ ಉಟ್ಟರೆ ಅದೇ ಆಗಿನ ಮೇಕಪ್ಪು! ಹಾಗೆ ಅಭಿನಯಿಸಿದ್ದು, ಮೊದಲ ಬಾರಿಗೆ ಸ್ಟೇಜ್ ಹತ್ತಿದ್ದು ಒಂದು ಅನುಭವ. ಬಿಟ್ಟರೆ ಕಲ್ಯಾಣಮ್ಮನವರ ಸಂಪರ್ಕದ ಪ್ರಭಾವ ಏನೊಂದೂ ತಿಳಿಯೆ. ಅವರೆಲ್ಲ ನಮಗಿಂತ ತುಂಬ ಹಿರಿಯರು.

● *ಬಾಲ್ಯದ, ಶಾಲಾದಿನದ ಬೇರೆ ಅನುಭವ?*

ಜಯಶ್ರೀ : ನಮ್ಮ ತಾತ ಡಾಕ್ಟರಾಗಿದ್ದು. ಅವರ ಮನೆ ಬಸವನಗುಡಿ ಉತ್ತರಾದಿ ಮಠದ ಹತ್ತಿರವೇ ಇತ್ತು. ನಾನು ಓದಿದ್ದು ಆಚಾರ್ಯ ಪಾಠಶಾಲಾ ಸ್ಕೂಲಿನಲ್ಲಿ. ಲೇಖಕಿ ಎಲ್.ಜಿ. ಸುಮಿತ್ರಾ ನನಗಿಂತ ಒಂದು ತರಗತಿ ಮುಂದೆ ಇದ್ದರು. ಆಮೇಲೆ ತಾತನಿಗೆ ದೇವನಹಳ್ಳಿಗೆ ವರ್ಗವಾದ್ದರಿಂದ ನಾವೆಲ್ಲ ಅಲ್ಲಿಗೆ ಹೋದೆವು. ಅಲ್ಲಿ ಲೈಬ್ರರಿಯಿಂದ ಪುಸ್ತಕಗಳನ್ನು ತಂದು ಓದಲು ತುಂಬ ಅವಕಾಶ ಸಿಕ್ತು. ಮನೇಲಿ ನಮ್ಮನ್ನು ಹೆಚ್ಚು ಹೊರಗೆ ಹೋಗೋಕೆ ಬಿಡ್ತಿರಲಿಲ್ಲ.

ನಮ್ಮ ಮಾವ ಮಾಸ್ತಿ 'ನನ್ನ ಹಂಗೇ ನೀನೂ ಯಾಕೆ ಕತೆಗಾಗಿ ಹುಟ್ಟಿದೀ?' ಅಂತ ಅಂತಿದ್ದರು. 'ನಿಂದೇ ರಕ್ತ ತಾನೆ ನಂದೂನೂ, ನೀನು ತಾನೆ ಮೊದಲು ಹುಟ್ಟಿದ್ದು' ಅಂತ ನಾನೂ ಪ್ರತಿಯಾಗಿ ಉತ್ತರಿಸ್ತಿದ್ದೆ.

● *ನಿಮ್ಮ ಬರಹದ ಮೇಲೆ ಬೇರೆ ಬೇರೆ ಸಾಹಿತ್ಯಗಳು ಪ್ರಭಾವ ಬೀರಿದ್ದುಂಟೆ?*


ಜಯಶ್ರೀ : ಶಾಲೆ ಕಲಿಯುವಾಗ, ನಾನು ವಿಜ್ಞಾನದ ವಿದ್ಯಾರ್ಥಿನಿ. ಅದರಲ್ಲೂ ಫಿಸಿಕ್ಸ್, ಮ್ಯಾಥಮ್ಯಾಟಿಕ್ಸ್ ಅಂದ್ರೆ ನನಗೆ ತುಂಬ ಇಷ್ಟದ ವಿಷಯಗಳು. ವೈಜ್ಞಾನಿಕ ವಿಚಾರಗಳು ಮತ್ತು ವೈಜ್ಞಾನಿಕ ಮನೋಧರ್ಮ ನನ್ನ ಬರಹದಲ್ಲಿ ಉದ್ದಕ್ಕೂ ಸೇರಿಕೊಂಡುಬಿಡುತ್ತವೆ. ಕನ್ನಡ ಸಾಹಿತ್ಯವನ್ನು ಇಂಟರ್‌ಮೀಡಿಯೆಟ್‌ವರೆಗೂ ಅಷ್ಟಿಷ್ಟು ಓದಿದ್ದೆ. ಆದರೆ ಹಿಂದಿ ಭಾಷೇಲಿ ಪ್ರವೀಣ ಪರೀಕ್ಷೆ ಮಾಡಿದ್ದರಿಂದ ಹಿಂದಿಯ ಪ್ರಸಿದ್ಧ ಸಾಹಿತಿಗಳಾದ ಸುಮಿತ್ರಾನಂದನಪಂತ್, ಮಹಾದೇವಿವರ್ಮ, ಇಕ್ಬಾಲ್‌ಕವಿ, ಪ್ರೇಮಚಂದ್ ಮುಂತಾದೋರ ಬರಹಗಳು ಗಾಢವಾಗಿ ನನ್ನ ಮನಸ್ಸಿನ ಮೇಲೆ ಪರಿಣಾಮ ಬೀರಿದವು.

ಮುಂದೆ ಮದುವೆ ಆದಮೇಲೆ ಯಜಮಾನರೊಂದಿಗೆ ಮಹಾರಾಷ್ಟ್ರದಲ್ಲಿ 'ಧುಳೆ' ನಗರದಲ್ಲಿ ನೆಲೆಸಿದ್ದಾಗ ಮರಾಠಿ ಭಾಷೆಯ ಮೆಟ್ರಿಕ್ ಪರೀಕ್ಷೆ ಪಾಸ್ ಮಾಡಿದೆ. ಮರಾಠಿ ಓದೋಕೆ, ಬರೆಯೋಕೆ, ಮಾತಾಡೋಕೆ ಚೆನ್ನಾಗಿ ಬರುತ್ತೆ. ಆ ಭಾಷೆಯ ಸಾಹಿತ್ಯ ಕೂಡ ಸಾಕಷ್ಟು ಓದಿದ್ದೇನೆ.

● *ಚಿಕ್ಕವಯಸ್ಸಿಗೇ ಪತಿಯನ್ನು ಕಳೆದುಕೊಂಡು, ಮಕ್ಕಳ ಜವಾಬ್ದಾರಿ ಹೊತ್ತವರು ನೀವು. ಆಗ ಆರ್ಥಿಕವಾಗಿ ಜೀವನ ನಿರ್ವಹಣೆ ಹೇಗೆ?*

ಜಯಶ್ರೀ : ತುಂಬ ಕಷ್ಟವಾಯಿತು. ಎಷ್ಟೇ ಪ್ರೀತಿಯ ಕೌಟುಂಬಿಕ ಪರಿಸರ ಇದ್ದರೂ, ಕಷ್ಟ ಬಂದಾಗ ಮನುಷ್ಯರು ಅದನ್ನು ತಾವೇ ಹೊರಬೇಕು ತಾನೆ? ವೀರೇಂದ್ರ ಪಾಟೀಲರು ಆಗ ನಮಗೆ ತುಂಬ ಸಹಾಯ ಮಾಡಿದರು. ಸರ್ಕಾರಿ ಸಿವಿಲ್ ಇಂಜಿನಿಯರ್ ನನ್ನ ಗಂಡ, ಆದ್ದರಿಂದ ಅವರು ಹೋದ ಮೇಲೆ ಅನುಕಂಪದ ಆಧಾರದಿಂದ ಒಂದು ಸರ್ಕಾರಿ ಕೆಲಸ ಕೂಡ ಕೊಟ್ಟಿದ್ದರು. ಆದರೆ ನಮ್ಮ ತಂದೆಗೆ ಅದೆಲ್ಲ ಬೇಕಿರಲಿಲ್ಲ. ಅವರು ಆ ಕೆಲಸದ ಆರ್ಡರ್ ಅನ್ನು ನನಗೆ ತೋರಿಸಲೂ ಇಲ್ಲ. ದೇವರು ಹೇಗೋ ನಡೆಯಿಸಿದ. ಆಯಿತು ಅಷ್ಟೆ.

ಜೀವನದಲ್ಲಿ ಏನು ಕಳೆದುಕೊಂಡೆನೋ, ಅದನ್ನೆಲ್ಲ ನಾನು ಕಥೆಯಲ್ಲಿ ಕಲ್ಪನೆ ಮೂಲಕ ಅನುಭವಿಸಬಹುದು. ಆ ಶಕ್ತಿ, ನನ್ನ ಅದೃಷ್ಟ ಆದರೆ ನನ್ನ ಗಂಡನಿಗೆ ಇಂಥ ಅನುಕೂಲ ಇಲ್ಲ ನೋಡಿ. ಅವರು ಸುಮ್ಮನೆ ಏನೂ ಅನುಭವಿಸದೇ ಹೊರಟು ಹೋದರು. ನನಗೆ ಮರೆವು ಅನ್ನೋದು ಇಲ್ಲ.



ಜಯಶ್ರೀ ರಾಜಾರಾಂ ಡಾ. ವಿಜಯಾ ಡಾ. ಸುಮಿತ್ರಾಬಾಯಿ ಡಿ.ವಿ. ಪ್ರಹ್ಲಾದ್

ಮರೆವು ಒಂದು healing. ಒಂದು ವರ. ಆದರೆ ಎಂದೆಂದೋ ಜರುಗಿ ಹೋದ ಯಾವುದನ್ನೂ ಮರೆಯೋದು ನನಗೆ ಸಾಧ್ಯವಿಲ್ಲ. ಆದ್ದರಿಂದ ಅದೆಲ್ಲ ಕತೆ, ಕಾದಂಬರಿಗಳ ಒಳಗೆ ಹೊಮ್ಮಿ ಬರುವುದು ನನಗೆ ಒಂದು ಬಿಡುಗಡೆ.

• *ನಿಮ್ಮ 'ಸವತಿ' ಕಾದಂಬರೀಲಿ ಮನೋವಿಶ್ಲೇಷಣೆಯ ವಿಚಾರಗಳನ್ನು ಬಳಸಿದ್ದೀರಿ, ಅದರ ನಾಯಕನಿಗೆ ತೀರಿಹೋದ ಮೊದಲ ಹೆಂಡತಿ, ಅವನಿಗೇ ಒಬ್ಬ ಸವತಿ ಹಾಗೆ ಕಾಡುವ ಬಗೆಯನ್ನು ಚಿತ್ರಿಸಿದ್ದೀರಲ್ಲ, ಇದೊಂದು ನಿಮ್ಮದೇ ವಿಶೇಷ ಕಲ್ಪನೆಯೇ?*

ಜಯಶ್ರೀ : ಸತ್ಯ, ಅಸತ್ಯ ಹಾಗೂ ಕಲ್ಪನೆ – ಈ ಮೂರು ಸೇರಿದಾಗ ಸಾಹಿತ್ಯ ಸೃಷ್ಟಿ. ಕೆಲವು ಸಲ ಸತ್ಯದ ಭಾವನೆ ಹುಟ್ಟುವಂತೆ ಮಾಡುವುದೂ ಮುಖ್ಯವಾಗುತ್ತದೆ. ವರ್ಷ, ದಿನಾಂಕ, ಅಂಕಿ ಸಂಖ್ಯೆ ಮುಂತಾದವುಗಳನ್ನು ಕರಾರುವಾಕ್ಕಾಗಿ ಉಲ್ಲೇಖಿಸಿದರೆ ಓದುವ ನಿಮಗೆ ಎಷ್ಟು ಅಥೆಂಟಿಕ್ಕಾಗಿದೆ ಅಂತ ತೋರುತ್ತೆ ಅಲ್ವೆ? ಮನಸ್ಸಿನ ಮೇಲೆ ಇಂತಹ ವಾಸ್ತವ ವಿವರಗಳು ಪ್ರಭಾವ ಉಂಟು ಮಾಡುತ್ತವೆ. ಅದೇ ರೀತಿ ನಮಗೆ ತುಂಬ ಹತ್ತಿರದ, ಚೆನ್ನಾಗಿ ಪರಿಚಯ ಇರೋವಂಥ ಜೀವನ ವಿವರಗಳೂ 'ವಾಸ್ತವ' ಅನ್ನುವ ಹಾಗೆ ಒಂದು ಕೃತಿಯನ್ನು ಬರೆಯಲು ಸಹಾಯಕ. ನನ್ನ ಕಾದಂಬರಿಗಳಲ್ಲಿ ಸ್ವಜಾತಿ ಮದುವೆಗಳಿಗೇ ಅವಕಾಶ ಕೊಡ್ತೀನಿ ಅಂತ ಆಕ್ಷೇಪಣೆಗಳಿದ್ದವು. ನನ್ನ ಉದ್ದೇಶ ಇದು : ವಿಧವೆಯರಿಗೆ, ಅದರಲ್ಲೂ ಮಡಿ ಹೆಂಗಸನ್ನಾಗಿ ಮಾಡಿಬಿಡೋ ತರಹದೋರಿಗೆ ಬರೋ ಸಂಕಟ ಅಷ್ಟಿಷ್ಟಲ್ಲ. ಪಡಬಾರದ ಕಷ್ಟ ಪಡೋದನ್ನ ನಾನು ಕಂಡಿದ್ದೇನೆ. ಈಗ ಅಂಥ ಸ್ಥಿತಿ ಅಷ್ಟು ಇಲ್ಲ, ಕಾಲ ಬದಲಾಗ್ತಿದೆ ಬಿಡಿ. ಆದರೆ ಹೆಣ್ಣಾದವಳಿಗೆ ತನ್ನ ರೂಪ ಹೊರಗೆ ಚೆನ್ನಾಗಿ ತೋರ್ಸಿಕೊಳ್ಳೋ ಆಸೆ ಇರುತ್ತೆ. ಗಂಡಸಿಗೂ ಇರುತ್ತೇನೋ ಗೊತ್ತಿಲ್ಲ. ಆದ್ದರಿಂದ ಅಂಥ ಸಹಜ ಮಾನವೀ ಸಹಜ ಜೀವಿಸುವ ಆಸೆಯನ್ನು ಸಂಪ್ರದಾಯದ ಹೆಸರಿನಲ್ಲಿ ಕೊಲ್ಲಬಾರದು ಅಂತ ನನ್ನ ಉದ್ದೇಶ. ಸ್ವಜಾತಿ ಮದುವೇನೇ ನಾನು ಚಿತ್ರಿಸಿದ್ದೇನೆ ನಿಜ. ಆದರೆ ಅದರಲ್ಲಿ ತಪ್ಪೇನು? ತಪ್ಪಿದೆ ಅಂತ ನನಗೆ ಅನ್ನಿಸಿಯೇ ಇಲ್ಲ.

ಮುಸ್ಲಿಮರಲ್ಲಿ ಹೆಣ್ಣಿಗೆ ಬುರ್ಖಾ ತೊಡಿಸುವುದು ನೋಡಿದರೆ ಈ ಕಾರಣದಿಂದಲೇ ನನಗೆ ಸಿಟ್ಟು ಬರಿಸುತ್ತೆ.

• *'ಗಂಗಾತೀರ್ಥ' ಕಾದಂಬರಿಯಲ್ಲಿ ಅನಾಥ ಮಕ್ಕಳ ಸಮಸ್ಯೆಯ ದಾರುಣತೆಯನ್ನು ಅಷ್ಟು ಗಾಢವಾಗಿ ಚಿತ್ರಿಸಿದ್ದೀರಿ, ತುಂಬ ಆಧುನಿಕ ವಿಚಾರಗಳು ಅದರಲ್ಲಿವೆ.*

ಜಯಶ್ರೀ : ಅದೆಲ್ಲ ನಾನು ಕಣ್ಣಾರೆ ಕಂಡು ನೋವು ಅನುಭವಿಸಿದ್ದಮ್ಮಾ. ಪೂನಾದಲ್ಲಿದ್ದಾಗ ಮಹರ್ಷಿ ಕರ್ವೆ ಸ್ಥಾಪಿಸಿದ ವಿಧವಾಶ್ರಮ, ಅನಾಥಮಕ್ಕಳ ಆಶ್ರಮಗಳಿಗೂ ಭೇಟಿ ನೀಡಿದ್ದೆ. ತಂದೆ ತಾಯಿಗಳಿಗೆ ಬೇಡಾದರೂ ಹುಟ್ಟುವ ಮಕ್ಕಳು ಅನಾಥಾಶ್ರಮದಲ್ಲಿ ಪಡುವ ಪಾಡು, ಸಮಾಜದಿಂದ ಅವರು ಅನುಭವಿಸುವ ತಿರಸ್ಕಾರ, ನೋವು, ನಿಂದೆ, ಅವಮಾನ ಮನಸ್ಸು ಕಲಕುತ್ತದೆ. ಬರೀ ಇಂಡಿಯಾದಲ್ಲಷ್ಟೇ ಅಲ್ಲ, ಅಮೆರಿಕಾದಲ್ಲೂ, ಮಕ್ಕಳಿಲ್ಲದೋರು ದತ್ತುಮಕ್ಕಳನ್ನು ಬೆಳೆಸುತ್ತಾರಾದರೂ, ಬೇರೆ ಮಕ್ಕಳು ಅವರನ್ನು 'They are adopted' ಎಂದು ಹಂಗಿಸಿ, ತಿರಸ್ಕರಿಸೋದು ಇದ್ದೇ

ಜಯಶ್ರೀ

ಜಯಶ್ರೀ ಅವರು ಹುಟ್ಟಿದ್ದು ಮೈಸೂರು ಜಿಲ್ಲೆಯ ಹುಣಸೂರಿನಲ್ಲಿ ದಿನಾಂಕ 24.3.1933ರಂದು. ತಂದೆ: ಬಿ.ಎಸ್. ಆಳ್ವಾರ್ ಅಯ್ಯಂಗಾರ್, ತಾಯಿ ಜಯಮ್ಮ. ಓದಿದ್ದು ಇಂಟರ್‌ಮೀಡಿಯಟ್ ಮತ್ತು ಹಿಂದಿ ಪ್ರವೀಣ. ಹದಿನೆಂಟಕ್ಕೆ ಮದುವೆ ಆದದ್ದು, ಸಿವಿಲ್ ಇಂಜಿನಿಯರ್ ಆಗಿದ್ದ ಎಚ್.ಕೆ. ರಾಜಾರಾಂ ಅವರನ್ನು. ಭಾರತದ ಹಲವು ಪ್ರದೇಶಗಳಲ್ಲೂ, ಯುರೋಪು ಮತ್ತು ಅಮೆರಿಕಾದಲ್ಲೂ ಸುತ್ತಾಡಿ ವಿಶೇಷ ಅನುಭವ ಗಳಿಸಿರುವ ಜಯಶ್ರೀ ಈಗ ಅಮೆರಿಕಾದಲ್ಲೇ ನೆಲೆಸಿದ್ದಾರೆ.

ಮೊದಲ ಕಾದಂಬರಿ 'ಒಲವಿನ ಕರೆ' (1975, ಇದಕ್ಕೆ ನವದೆಹಲಿ, ವಿದ್ಯಾಸಚಿವಾಲಯದಿಂದ ಪ್ರಶಸ್ತಿ ಸಿಕ್ಕಿತ್ತು. 'ಕಣ್ಣು ತೆರೆದಾಗ' (1975), 'ಒಂದೇ ಬಟ್ಟು ಕುಂಕುಮ' (1981) 'ಬಯಕೆ' (1985) 'ಸವತಿ' (1985) ಇತರ ಕಾದಂಬರಿಗಳು. 'ಕೋಲು ಕೋಲಣ್ಣ ಕೋಲೆ' – ಜೋಗಿತಿಯರ ಬದುಕನ್ನು ಕುರಿತ ಕಾದಂಬರಿ, 'ಸುಧಾ'ದಲ್ಲಿ ಧಾರಾವಾಹಿಯಾಗಿ ಪ್ರಕಟವಾಯಿತು. ಈಚೆಗೆ ಬೆಂಗಳೂರಿನ ಚಾರುಮತಿ ಪ್ರಕಾಶನ ಜಯಶ್ರೀ ಅವರ 'ಗಂಗಾತೀರ್ಥ' 'ವಿಷ್ಣುಮೋಹಿನಿ' ಎಂಬ ಎರಡು ಕಾದಂಬರಿಗಳನ್ನೂ, 'ಡೈರಿಯ ಹಾಳೆಗಳು' ಎಂಬ ಒಂದು ಕಥಾಸಂಕಲನವನ್ನೂ ಹೊರತಂದಿದೆ.

ಕನ್ನಡ ಸಾಹಿತ್ಯ ಪರಿಷತ್ತಿನ 'ಮಕ್ಕಳ ಪುಸ್ತಕ ಮಾಲೆ'ಯಲ್ಲಿ ಇವರ ಎರಡು ಕೃತಿಗಳು ಪ್ರಕಟವಾಗಿವೆ. 'ಕುಡಿದು ಬಂದೈತಿ ನೋಡು' ಎಂಬ ಇವರ ನಾಟಕಕ್ಕೆ ಸರ್ಕಾರದ ಮದ್ಯಪಾನ ನಿರೋಧ ಮಂಡಲಿಯ ಪ್ರಶಸ್ತಿ ದೊರೆತಿತ್ತು.

ಇಂಗ್ಲಿಷ್ ಭಾಷೆಯಲ್ಲಿ ಇವರು ರಚಿಸಿರುವ ಕವಿತೆಗಳನ್ನು ಇಂಟರ್‌ನ್ಯಾಷನಲ್ ಪೊಯೆಟ್ರಿ ಕ್ಲಬ್ (USA) ಮತ್ತು ನೊಬೆಲ್ ಪಬ್ಲಿಕೇಷನ್ಸ್ (London) ಸಂಸ್ಥೆಗಳು ಪ್ರಕಟಿಸಿವೆ. ಇವರು ರಚಿಸಿರುವ 70ಕ್ಕೂ ಹೆಚ್ಚು ಮಕ್ಕಳ ನಾಟಕಗಳನ್ನು ಶಾಲಾ ಮಕ್ಕಳು ಅಭಿನಯಿಸುತ್ತಿದ್ದಾರೆ. ಸಾಹಿತ್ಯದ ಜೊತೆ ಸಂಗೀತದಲ್ಲೂ ಗಾಢವಾದ ಶ್ರದ್ಧೆಯುಳ್ಳ ಜಯಶ್ರೀ ವೈಣಿಕರೂ ಹೌದು.





ಇದೆ. ಹೀಗಾಗಿ 'ಗಂಗಾತೀರ್ಥ' ಹೇಳೋದು ಜಗತ್ತಿನಲ್ಲಿ ಎಲ್ಲಾ ಕಡೆಯೂ ಇರುವಂಥ ವಾಸ್ತವ ಸ್ಥಿತೀನೇ ಆಗಿದೆ. ಈ ಸಮಾಜಾನ ನಾನು ಒಂದು ಆದಿಶೇಷನ ಹೆಡೆ ಅಂತ ಭಾವಿಸ್ತೀನಿ. ಕೃಷ್ಣ ಹುಟ್ಟಿದಾಗ ಶೇಷನ ಹೆಡೆ ಅವನಿಗೆ ರಕ್ಷಕನಾಗಿ ಗೋಕುಲದವರೆಗೆ ಹಿಂಬಾಲಿಸಿತ್ತು. ಆದರೆ ನಾವ್ಯಾರೂ ಕೃಷ್ಣ ಅಲ್ಲವಲ್ಲ. ಆದರೂ ಸಮಾಜದ ವಿಷದ ಹೆಡೆ ಸದಾ ನಮ್ಮನ್ನು ಹಿಂಬಾಲಿಸುತ್ತೆ. ಯಾವಾಗ ಅದು ಕಡಿದೀತೋ ಅನ್ನೋ ಭೀತಿ ಸದಾ ಇರುತ್ತೆ. ಈ ಭಾವವೇ ನನ್ನ ಕಾದಂಬರಿಗೆ ಪ್ರೇರಣೆ.

- ***ಇಷ್ಟು ವರ್ಷ ಹೊರ ದೇಶಗಳಲ್ಲಿಯೇ ಉಳಿದಿದ್ದೀರಿ, ಅಲ್ಲಿನ ಜೀವನ ಕಂಡಿದ್ದೀರಿ. ಅಲ್ಲಿಯ ಹೆಣ್ಣುಮಕ್ಕಳ ಬದುಕಿನ ಬಗ್ಗೆ ನಿಮ್ಮ ಅಭಿಪ್ರಾಯ ಏನು?***

ಜಯಶ್ರೀ : ಎಲ್ಲ ಕಡೇನೂ ಜೀವನ ಅಂದ್ರೆ ಒಂದೇ ಭೂಮಿ. ಎಲ್ಲಾ ಕಡೆ ಕೆಂಪೇ. ಆಕಾಶ ನೀಲೀನೆ. ಗಿಡಮರಗಳು ಹಸಿರೇ ತಾನೆ. ಹಾಗೆ ಹೆಣ್ಣುಮಕ್ಕಳ ಜೀವನ ಅಲ್ಲೂ ಹೀಗೇ ಇರುತ್ತೆ. ಅತ್ತೆ-ಸೊಸೆಯರ ಜಗಳ. ತಾಯಿ ಆದರೆ ಜೊತೆಗೆ ಇರಬಹುದು, ಅತ್ತೆ ಮಾತ್ರ ಬೇಡ ಅನ್ನುವ ಧೋರಣೆ, ದತ್ತುಮಕ್ಕಳನ್ನು ಪಡೆದು ಸಾಕುವ ಪ್ರಜ್ಞೆ, ಇಂಥ ಸಮಸ್ಯೆಗಳೇ ಇಲ್ಲೂ ಇವೆ. ಅಲ್ಲಿನವರ ಜೀವನ ಕ್ರಮವೇ ಈಗ ಇಲ್ಲಿಗೂ ಬಂದಿದೆ. ಉದಾಹರಣೆಗೆ ಹೇಳ್ತೇನೆ. ರಾಮಾಯಣದಲ್ಲಿ ಸೀತೇನೆ ಒಂದು ಮಾದರಿ ಅಂತ ಏಕೆ ಮಾಡಿದಾರೆ? ಎಲ್ಲರೂ ಅವಳ ತರಹಾನೇ ಇದ್ದಿದ್ರೆ ಲೋಕದಲ್ಲಿ ಸಮಾನತೇನೇ ಇರ್ತಿತ್ತು. ಆದರೆ ಅವಳು ತುಂಬ ದೊಡ್ಡ ಮಾದರಿ ಅಂತ ಚಿತ್ರಿಸಿದಾರೆ. ಅಂದಮೇಲೆ ಅವಳ ಸುತ್ತ ಬೇರೆ ತರಹದವರೂ ಇದ್ರು ಅಂತ ತಾನೆ ಅರ್ಥ?

- ***'ಸವತಿ' ಕಾದಂಬರಿಯಲ್ಲಿ ಆಧುನಿಕ ಮನೋವೈಜ್ಞಾನಿಕ ವಿಚಾರಗಳನ್ನು ಈ ವಯಸ್ಸಿನಲ್ಲೂ ಸ್ವೀಕರಿಸಲು ತಯಾರಿದ್ದೀರಿ. ಆ ಕಾದಂಬರಿಯಲ್ಲಿ Bisexuality ಅನ್ನೋ ವಿಚಾರ ಬರುತ್ತಲ್ಲ ಆ ಬಗ್ಗೆ ವಿವರಿಸ್ತೀರಾ?***

ಜಯಶ್ರೀ : ನಾನು ವಿಜ್ಞಾನದ ವಿದ್ಯಾರ್ಥಿನಿ ಅಂತ ಹೇಳಿದೆನಲ್ಲ. ಹಾಗಾಗಿ ತುಂಬ ವೈಜ್ಞಾನಿಕ ಸಂಗತಿಗಳು ನನ್ನ ಕಥೆಗಳೊಳಗೆ ಸಹಜವಾಗಿ ಬರುತ್ತವೆ. ಅಲ್ಲಿ Earth worm ಹೇಗೆ bisexual ಅನ್ನೋದನ್ನ ಬಳ್ಸಿದ್ದೀನಿ. ಒಂದು ವೇಳೆ ಮನುಷ್ಯರಲ್ಲೂ ಅಂಥ ಸವಲತ್ತು ಇದ್ದಿದ್ದೆ, ಮದುವೆ-ಕುಟುಂಬ ಇತ್ಯಾದಿ ಎಲ್ಲಿರ್ತಿತ್ತು ಅಂತ ಒಂದು ಕಲ್ಪನೆ ಅಷ್ಟೆ ಅದು. ಯುರೋಪಿನ ಒಬ್ಬ ಲಾಯರ್, ತನ್ನ ಮಾನಸಿಕ ರೋಗವನ್ನು ಪರಿಹರಿಸಿ ಅಂತ Sigmand Fraud ಹತ್ತಿರ ಹೋಗಿ ಕೋರಿಕೊಂಡರು. ಆ ವ್ಯಕ್ತಿ ಸ್ವತಃ ತನ್ನ ಮೊದಲ ಪತ್ನಿಯ ಸಾವಿನಿಂದ ಬಾಧಿತನಾಗಿ ಇನ್ನೆಷ್ಟೋ ಮದುವೆ ಆದರೂ ಲೈಂಗಿಕವಾಗಿ ಆಕೆಯ ಜೊತೆ ಸಹಜವಾಗಿ ಸುಖಿಸಲಾರದೆ ಆಕೆಯನ್ನೇ ಮತ್ಸರಿಸಿ ದ್ವೇಷಿಸುತ್ತಿದ್ದರು. ಈ ವಾಸ್ತವ Caseನ ವಿಚಾರ ಎಲ್ಲೋ ಓದಿದ್ದೆ. ಅದನ್ನೆ "ಸವತಿ" ಕಾದಂಬರೀಲಿ ನಮ್ಮ ಪರಿಸರಕ್ಕೆ ಹೊಂದಿಸಿ ಬರ್ದಿದ್ದೀನಿ. ಆದರೆ ಆ ಪುಸ್ತಕದ ಬಗ್ಗೆ ಪತ್ರಿಕೆಗಳಲ್ಲಿ ತುಂಬ ಜನರ ಪ್ರತಿಕ್ರಿಯೆಗಳು ಬಂದಿದ್ದವು. ಕೆಲವರು ಆಕ್ಷೇಪಿಸಿಯೂ ಇದ್ದರು, 'ಅರ್ಥನೇ ಆಗೋದಿಲ್ಲ. ಇಂಥಾದ್ದಕ್ಕೆಲ್ಲ ಯಾಕೆ ಪತ್ರಿಕೇಲಿ ಅವಕಾಶ ಕೊಡ್ತೀರಿ' ಅಂತ. ಆದರೆ ಸುಧಾ ಪತ್ರಿಕೇಲಿ ನನ್ನ 'ಕೋಲು ಕೋಲಣ್ಣ ಕೋಲೆ' ಕಾದಂಬರಿ ಧಾರಾವಾಹಿಯಾಗಿ ಬಂತು. ಅದು ಜೋಗಿತಿಯರ ಜೀವನ ಕುರಿತದ್ದು. ಅದನ್ನು ತುಂಬಜನ ಮೆಚ್ಚಿಕೊಂಡರು.

- ***ಒಟ್ಟಾರೆ ಇಂದಿನ ಮಹಿಳಾ ಬರಹದ ಬಗ್ಗೆ ಹಿರಿಯರಾಗಿ ನಿಮಗೇನು ಅನಿಸುತ್ತದೆ?***

ಜಯಶ್ರೀ : ನನ್ನ ಮೈದುನ ಎಚ್.ವಿ. ನಾರಾಯಣ ಅವರ 'ಯಾತ್ರಿಕ' ಪತ್ರಿಕೆಯಿಂದಾಗಿ ಟಿ. ಸುನಂದಮ್ಮ (ಇಲ್ಲೇ ಸದಾಶಿವನಗರದಲ್ಲೇ ಹತ್ತಿರದಲ್ಲಿದ್ದದ್ದರಿಂದ) ನನಗೆ ಪರಿಚಯ. ಎಂ.ಕೆ. ಇಂದಿರಾ ಕೂಡ ಹಾಗೇ ಪರಿಚಿತರು. ಅಷ್ಟು ಬಿಟ್ಟರೆ ಸಾಹಿತಿಗಳ ಗುಂಪು, ಸಂಘಗಳು, ಸಂಘಟನೆಗಳು ಇದಾವುದರ ಸಂಪರ್ಕವೂ ನನಗೆ ಇಲ್ಲ. ನನ್ನಷ್ಟಕ್ಕೆ, ಒಳಗಿನಿಂದ ಬರೀಲೇಬೇಕು ಅನ್ನೋ ಒತ್ತಡ ಉಂಟಾದಾಗೆಲ್ಲ ಬರೆದುಕೊಳ್ತಾ ಬಂದಿರೋಳು ನಾನು. ಪ್ರೇಮ್‌ಚಂದ್ ಹೇಳೋಹಾಗೆ ನಮ್ಮ ಸಮಾಜವನ್ನು ಕೆಡಿಸೋ ಅಂಥ ಸಾಹಿತ್ಯ ಬರೀಬಾರ್ದು. ಸಮಾಜಕ್ಕೆ ಉಪಕಾರ ಆಗುವಂಥಾದ್ದನ್ನು ಬರೀಬೇಕು. ಸಮಾಜದ ಹುಳುಕನ್ನೇ ವಿಪರೀತಮಾಡಿ ಚಿತ್ರಿಸಿದರೆ ಮುಂದಿನ ಜನಾಂಗದ ಮೇಲೆ ಕೆಟ್ಟ ಪರಿಣಾಮ ಆಗಬಹುದು, ಅಲ್ಲದೆ, ಕೆಟ್ಟದನ್ನೇ ಏಕೆ ಕೆದಕಿ ನೋಡಬೇಕು? ಒಳ್ಳೇದನ್ನೇ ನೋಡಬಾರದೇಕೆ ಅಂತ ನನ್ನ ನಿಲುವು. ಹಾಗಾಗಿ ಪ್ರತಿಯೊಬ್ಬ ಲೇಖಕಿಯೂ ತಮ್ಮ ತಮ್ಮ ರೀತಿಯಿಂದ ಏನೋ ಒಂದು ಮುಖ್ಯವೆನಿಸಿದ್ದನ್ನೇ ಬರೆದಿರ್ತಾರೆ. ಅದರಲ್ಲಿ ಸರಿ/ತಪ್ಪು ಅಂತ ಕ್ರಿಟಿಕಲ್ ಆಗಿ ನಾನು ನೋಡಲಾರೆ. ಸ್ವತಃ ನನ್ನ ಬರಹಾನೇ ನಾನು ಹಾಗೆ ವಿಮರ್ಶೆ ಮಾಡಿಕೊಂಡಿಲ್ಲ.

ಮೊದಲಿನಿಂದಲೂ ಅಷ್ಟೆ. ಯಾರಾದರೂ ಒಂದು ಒಳ್ಳೆ ಕಸೂತಿ ಹಾಕಿದ್ದರೆ, ಕುಶಲಕಲೆ ತೋರಿಸಿದ್ದರೆ, ಚಿತ್ರ ಬಿಡಿಸಿದರೆ ಅದನ್ನ ಕಂಡು ಆನಂದ ಪಡ್ತೇನೆಯೇ ಹೊರತು ಅವರ ಮನೆ ಶುಚಿಯಾಗಿದೆಯೇ ಕೊಳಕಾಗಿ ಕಸ ತುಂಬಿಕೊಂಡಿದೆಯೇ ಅಂತ ನೋಡೋವಳು ನಾನಲ್ಲ. ಎಲ್ಲರಲ್ಲೂ ಏನೋ ಒಂದು ಒಳ್ಳೇದು ಇರುತ್ತೆ. ಅದನ್ನಷ್ಟೇ ಕಾಣಬೇಕೇ ಹೊರತು ಅವರ ದೋಷ, ಹುಳುಕುಗಳನ್ನು ಏಕೆ ಹುಡುಕಬೇಕು?

- ***ನಿಮ್ಮ ಬರಹದ ಬಗ್ಗೆ ಬಂದಂಥ ವಿಮರ್ಶೆಗಳ ಬಗ್ಗೆ ನಿಮ್ಮ ಅನಿಸಿಕೆ?***

ಜಯಶ್ರೀ : ವೀಣಾಶಾಂತೇಶ್ವರ ಅನ್ನೋವರು ಲೇಖಕಿಯರ ನೂರು ಸಣ್ಣಕಥೆಗಳನ್ನು ಸಂಕಲಿಸಿ, ಹೊರತಂದರಲ್ಲ ಅದರಲ್ಲಿ ನಮ್ಮಂಥ ಕೆಲವು ಲೇಖಕಿಯರನ್ನು ಒಟ್ಟಾಗಿ ಕುರಿತು ಟೀಕಿಸಿದ್ದಾರೆ; ಇವರೆಲ್ಲ ದೇವರು ಸಂಪ್ರದಾಯಗಳನ್ನೇ ನಂಬಿ ಬರೆಯೋರು ಅಂತ. ತುಂಬ ಸಂಕಷ್ಟಕ್ಕೆ ಒಳಗಾದಾಗ ಮನುಷ್ಯರಿಗೆ ಯಾರೂ ಗತಿಯಿಲ್ಲದಾದಾಗ ದೇವರು ಅಂತ ಒಂದು ಶಕ್ತಿ ತನಗೆ ಕಾವಲು ಇರುತ್ತೆಂಬ ನಂಬಿಕೇನೇ ಬದುಕೋದಕ್ಕೆ ಆಸರೆ ಆಗಬಹುದು. ದೇವರು ಅಂತ

ಒಬ್ಬ ನಿಜವಾಗಿ ಇದಾನೋ ಇಲ್ವೋ ಯಾರಿಗೆ ಗೊತ್ತು? ಐನ್‌ಸ್ಟೈನ್ ಒಂದು ಕಡೆ ಹೇಳ್ತಾರೆ, ಯಾರು ತನ್ನನ್ನು ಮೀರಿದ ಒಂದು ಶಕ್ತಿಯನ್ನ ನಂಬಲಾರನೋ ಅಂಥವನು ನಿಜವಾಗಿ ವಿಜ್ಞಾನಿ ಆಗಲಾರ ಅಂತ. ಬುದ್ಧ ದೇವರಿಲ್ಲ ಅಂತ ಸಾರಿದನು. ನಾವ್ಯಾರೂ ಬುದ್ಧನಂಥ ಬುದ್ಧಿಜೀವಿಗಳಲ್ಲ. ನಮ್ಮ ನಂಬಿಕೆಗಳು ಪೆಂಡ್ಯುಲಾನ ಹಾಗೆ ಇತ್ತ-ಅತ್ತ ಹೊಯ್ದಾಡುತ್ತಲೇ ಇರುವಂಥವು. ಆದ್ದರಿಂದ ದೈವಶ್ರದ್ಧೆಯನ್ನೂ ಒಂದು ವಾಸ್ತವ ಜೀವನಕ್ರಮ ಅಂತ ಒಪ್ಪಿ ಬರೆಯೋದರಲ್ಲಿ ನನಗೆ ಎಂದೂ ಯಾವ ತಪ್ಪೂ ಕಾಣಿಸೋದಿಲ್ಲ. ಹಾಗೆಂದು ಅದೇ ಸತ್ಯ ಅಥವಾ ಅದು ಅಸತ್ಯವೇ ಸರಿ ಅಂತ ತೀರ್ಮಾನಿಸುವುದೂ ನನ್ನ ದೃಷ್ಟಿಯಲ್ಲ. ಇರೋದನ್ನ ವಾಸ್ತವವಾಗಿ ಹೇಳೋದು ಒಂದು ರೀತಿ. ಆದರೆ ಮನುಷ್ಯರಾಗಿ ಅಲ್ಪರೇ ಆದ ನಾವು ನಿಜ-ಸುಳ್ಳುಗಳನ್ನು ಇಷ್ಟೇ ಎಂದು ಹೇಳಬಲ್ಲವರಲ್ಲ. ಈ ಮಿತಿಯ ಅರಿವಿನಿಂದ ಬರೀಬೇಕು ಅನ್ನುವವಳು ನಾನು.

- ***ನಿಮ್ಮ ಕತೆಗಳು, ಕಾದಂಬರಿಗಳನ್ನು ಓದುವಾಗ, ವಿಶೇಷವಾಗಿ ಒಟ್ಟು ಕುಟುಂಬದ ಪರವಾಗಿ ನೀವು ಇರುವಂತೆ ತೋರುತ್ತದೆ. ಉದಾಹರಣೆಗೆ ನಿಮ್ಮ 'ವಿಷ್ಣುಮೋಹಿನಿ' ಕಾದಂಬರಿಯಲ್ಲಿ ತುಂಬ ದೊಡ್ಡ ಮನೆತನದ ದೊಡ್ಡ ಸಂಖ್ಯೆಯ ಸದಸ್ಯರ ಒಟ್ಟು ಜೀವನದ ವಿವರಗಳಿವೆ. ಈ ಬಗ್ಗೆ ನಿಮ್ಮ ವಿಚಾರವೇನು?***

ಜಯಶ್ರೀ : ಆಧುನಿಕ ಜೀವನದಲ್ಲಿ ಮನುಷ್ಯರಲ್ಲಿ ತೀರಾ ಸ್ವಾರ್ಥವಿದೆ. ಹೆಣ್ಣುಮಕ್ಕಳೂ ಅಷ್ಟೆ. ತಾನೊಬ್ಬಳೇ ಬಾಳಬೇಕು ಅನ್ನುವ ಭಾವನೆ. ಸಾಂಸಾರಿಕವಾದ ಇತರ ಸಂಬಂಧಗಳನ್ನು ತೊರೆದು ತಾವು ಮಾತ್ರ ಬದುಕಬೇಕು ಅನ್ನೋದು ಸರಿ ಅನ್ನಿಸೋದಿಲ್ಲ. ಇದರರ್ಥ ಕುಟುಂಬದ ಎಲ್ಲ ಜನರೂ ಹಿಂದೆ ಇದ್ದಂತೆ ಒಟ್ಟಿಗೇ ಇರಲೇಬೇಕು ಅಂತ ಅಲ್ಲ. ಬೇರೆ ಬೇರೇನೇ ಇರಲಿ. ಅವರವರ ಬದುಕನ್ನೇ ಕಾಯ್ದುಕೊಳ್ಳಲಿ. ಆದರೆ ಸಮಸ್ಯೆ, ಸಂಕಟಗಳಲ್ಲಿ ಮತ್ತೊಬ್ಬರ ಪರಿಸ್ಥಿತಿಗಳಿಗೆ ಅಂತಃಕರಣದಿಂದ ವರ್ತಿಸಿ ನೆರವಾಗುವ ಮಾನವೀಯತೆ ನಮಗಿರ ಬೇಕು. ಒಂದು ಮನೆತನ ಬಾಳಬೇಕಾದರೆ, ಅದಕ್ಕಿಂತ ದೊಡ್ಡದಾದ ಸಮಾಜ ಬಾಳಬೇಕಾದರೆ, ಅದರಲ್ಲಿ ನಾವೂ ಬಾಳಬೇಕಾದರೆ ಒಬ್ಬರೊಬ್ಬರ ನಡುವೆ ಅನ್ಯೋನ್ಯತೆಯ ಸಂಬಂಧ ಇರಲೇಬೇಕು ಅಂತ ನನ್ನ ಭಾವನೆ.

- ***ಕೊನೆಯದಾಗಿ ಒಂದು ಪ್ರಶ್ನೆ ಮೇಡಂ-ವೈಧವ್ಯ ಚಿಕ್ಕ ವಯಸ್ಸಿನಲ್ಲೇ ಎದುರಾದಾಗಲೂ ಬದುಕನ್ನು ಸ್ಥಿರವಾಗಿ ಎದುರಿಸಲು ಬರವಣಿಗೆಯೇ ನಿಮಗೆ ಶಕ್ತಿ ಕೊಟ್ಟಿತ್ತೆ? ಅಥವಾ ಬಿಡುವನ್ನು ಬದುಕು ಕೊಟ್ಟಿತೆ?***

ಜಯಶ್ರೀ : ನಮ್ಮ ಯಜಮಾನರು ಬದುಕಿದ್ದಿದ್ದರೆ ಬರೀತಿದ್ದೆನೋ ಇಲ್ಲವೋ. ನನ್ನ ಬರಹ ಕಂಡರೆ ಅವರಿಗೆ ಸವತಿ ಮಾತ್ಸರ್ಯ! ಸದಾ ಪುಸ್ತಕ ಹಿಡಿದು ಕೂತು ಬಿಡುತ್ತೀ ಅಂತ ಎತ್ತಿಟ್ಟು ಬಿಡೋರು. 'ಕತೆಗಾರ'ದಲ್ಲಿ ಪ್ರಕಟವಾಗಿರೋ 'ಬಳುವಳಿ'! ಅನ್ನೋ ಕತೇಲಿ (1953) ಈ ನನ್ನ ಅನುಭವವನ್ನೇ ಆಧರಿಸಿದ್ದೇನೆ. (ನಗು)

ಈಗ ಅವರಿಲ್ಲ. ಆದರೆ ನಾನು ನಿರಂತರವಾಗಿ ಬರೀತಾನೇ ಇದ್ದೀನಿ. ನಾನೇ ರಾಜ, ನಾನೇ ರಾಣಿ ನನ್ನ ಬರಹದಲ್ಲಿ. ಬೇಕಾದಷ್ಟು ಜೀವನ ಕಂಡಿದೀನಿ. ಅನುಭವಿಸಿದೀನಿ. ಸಂತೋಷ ದುಃಖ ಎಲ್ಲ ಪಟ್ಟಿದ್ದೇನೆ. ಆದರೆ ಈಗಲೂ ಅನುಭವ ಒಂದು ಹೊರದ್ರವ್ಯ, ಅದನ್ನು ಅನುಭವಿಸಿದ ಮನಸ್ಸು ಒಳಗಿನಿಂದಲೇ ಮೀಟಿ ಬಿಡುತ್ತದೆ. ಆಗ ಬರೆದರೇನೇ ನನಗೆ ಸಮಾಧಾನ. ನನ್ನ ಗಂಡನಿಗೆ ಪಾಪ ಈ ಯಾವುದೂ ದಕ್ಕಲಿಲ್ಲ. ❑

ನಾಗಪಂಚಮಿ


ಐವತ್ತು ಕಳೆದಾಯಿತಲ್ಲ
ವಸಂತ ಎಲ್ಲ ಒರತೆಗಳನ್ನು ಒರೆಸಿಹೋಗಿದ್ದ
ಋಷಿಪಂಚಮಿಗೆ ಕರೆಯಿತ್ತು
ಊರು ದೂರಾಗಿ ಕಾಡು ಕರೆಯುತ್ತಿತ್ತು
ಒಂಟಿ ಹಕ್ಕಿಯ ಕೊರಳಿನಲ್ಲಿ
ನೀ ಬಂದೆ ನೋಡು
ಕಾಡಿನೊಳಗಿನಿಂದಲೇ ಬಂದಂತೆ
ನಾಗಬನವನ್ನೇ ಹೊತ್ತು
ಗೌರಿ ಪೆಟ್ಟಿಗೆ ಸಂಪುಟ
ನಾರುಮಡಿ ವ್ಯಾಸಪೀಠ
ಎಲ್ಲಿ ಜಾರಿಹೋದವ್ರೋ ಎಲ್ಲ
ಕಾಡು ಮರೆಯಾಗತೊಡಗಿತು
ಕೂದಲ ಬಣ್ಣದಿಂದ
ಕನ್ನಡಿಯ ಹಿಂಬದಿಯಿಂದ
ಜೋಡಿಹಕ್ಕಿಗಳು ಚೀಕತೊಡಗಿದವು
ನಾಗಪಂಚಮಿಯ ಜೋಕಾಲಿಯಲಿ
ಐವತ್ತರ ಬೇಲಿಯಾಚೆಗೆ ನಿಂತೆ ನೀನು
ಬೇಲಿಯ ಒಳಗೆ ನಾನು
ಈ ಅಪ್ರಾಪ್ತ ಪ್ರಾಪ್ತಿಗೆ
ಲಜ್ಜೆಗೇಡಿತನಕ್ಕೆ
ಎಷ್ಟು ಕವಿತೆ ಬರೆಯಲಿ ನಾನು
ಬರೆದ ಕವಿತೆಗಳೆಲ್ಲ
ಕನಸುಗಳ ಕಾಡಿನಲ್ಲಿ ಕಳೆದುಹೋಗಿವೆಯಲ್ಲಾ.

■ *ಗಿರಿಜಾಶಾಸ್ತ್ರಿ*

ಲಿಂಗ ಆಯ್ಕೆಯು ಜನಸಂಖ್ಯೆಯಲ್ಲಿ ಪುರುಷರ ಮತ್ತು ಮಹಿಳೆಯರ ಅನುಪಾತದ ಮೇಲೆ ತೀವ್ರವಾದಿ ಪರಿಣಾಮ ಬೀರುತ್ತಿದೆ; ಈ ಆಘಾತಕಾರಿ ಪದ್ಧತಿಯನ್ನು ನಾಶಪಡಿಸಬೇಕು ನಿಜ. ಆದರೆ ಸಂತಾನಕ್ಕಾಗಿ ಆರೋಗ್ಯ ರಕ್ಷಣೆಗಾಗಿ ಇಂಥ ವೈದ್ಯಕೀಯ ಚಿಕಿತ್ಸೆ ಅನಿವಾರ್ಯವಾಗಿ ದೊರಕಬೇಕಾದ ಮಹಿಳೆಯರನ್ನು ಇಂಥ ಕಾನೂನು ನಿರ್ಲಕ್ಷಿಸಬಾರದು.

-ಕಲ್ಪನಾ ಶರ್ಮ

ಭೈರಪ್ಪನವರ ಖಾಪ್ ಪಂಚಾಯಿತಿ: 'ಕವಲು'



■ *ಚಂದ್ರಮತಿ ಸೋಂದಾ*

ಇತ್ತೀಚೆಗಷ್ಟೆ ಬಿಡುಗಡೆಯಾದ ಎಸ್.ಎಲ್. ಭೈರಪ್ಪನವರ 'ಕವಲು' ಕಾದಂಬರಿ ಕುರಿತಂತೆ ಕೆಲವು ದಿನಗಳಿಂದ ಪರ-ವಿರೋಧ ಅಭಿಪ್ರಾಯಗಳು ಪ್ರಕಟವಾಗುತ್ತಿವೆ. ಭೈರಪ್ಪ ಒಬ್ಬ ಲೇಖಕರೇ ವಿನಾ ಸಮಾಜ ಸುಧಾರಕರಲ್ಲ. ಅವರ ಬರವಣಿಗೆ ಸಮಾಜದ ಮೇಲೆ ಅಗಾಧ ಪರಿಣಾಮ ಬೀರುತ್ತದೆ ಎಂದು ತಿಳಿಯಬೇಕಾಗಿಯೂ ಇಲ್ಲ. (ಹಾಗೆಂದು ಅವರು / ಅವರ ಅಭಿಮಾನಿಗಳು ಭಾವಿಸಿದ್ದರೆ ಅದು ಅವರಿಗೆ ಬಿಟ್ಟ ಸಂಗತಿ) ಕೃತಿ ಬಿಡುಗಡೆಯಾದ ಕೆಲವೇ ದಿನಗಳಲ್ಲಿ ಹಲವು ಮುದ್ರಣಗಳನ್ನು ಕಂಡಿರುವುದು ಕೃತಿಯೊಂದರ ಮಾನದಂಡವೂ ಅಲ್ಲ. ಆರು ದಶಕಗಳಿಂದ ಕಾದಂಬರಿ ಪ್ರಕಾರದಲ್ಲಿ ಬರೆಯುತ್ತಿರುವ ಒಬ್ಬ ಬರಹಗಾರನಿಗೆ ಅವನದೇ ಆದ ಒಂದು ವಲಯ ಸೃಷ್ಟಿಯಾಗುವುದು ಸಹಜ. 'ಹ್ಯಾರಿಪಾಟರ್' ಮುಂದಿನ ಭಾಗ ಹೇಗಿರಬಹುದೆಂದು ಜನ ಕುತೂಹಲ ತಾಳುತ್ತಾರೆ; ಕೃತಿಯ ಬಿಡುಗಡೆಗೆ ಮೊದಲೇ ಮುಂಗಡ ಕೊಟ್ಟು ಖರೀದಿಸಲು ಮುಗಿಬೀಳುತ್ತಾರೆ. ಬರವಣಿಗೆಯ ಜನಪ್ರಿಯತೆಯ ಅಳತೆಗೋಲು ಅದು.

ಸಾಹಿತ್ಯ ಕೃತಿಯೊಂದರ ಶ್ರೇಷ್ಠತೆಯನ್ನು ಜನಪ್ರಿಯತೆಯಿಂದ ಅಳೆಯುವುದರ ಕುರಿತು ಸಾಕಷ್ಟು ಚರ್ಚೆಗಳು ನಡೆದಿವೆ. ಕೆಲವು ಲೇಖಕರ ಕೃತಿಗಳನ್ನು ಕುತೂಹಲಕ್ಕಾಗಿ, ಚಪ್ಪರಿಸಲಿಕ್ಕಾಗಿ ಓದುವ ಬಳಗ ದೊಡ್ಡದಿರಬಹುದು. ಲೇಖಕರ ಹೆಸರೂ ಕಾರಣವಿರಬಹುದು. ಇದರಿಂದ ಕೃತಿಯ ಮೌಲ್ಯವನ್ನು ಅಳೆಯುವುದಾದರೆ ಅನೇಕ ಉತ್ತಮ ಕೃತಿಗಳಿಗೆ ಸೀಮಿತ ಓದುಗರಿದ್ದಾರೆ. ನನ್ನ ತಿಳಿವಳಿಕೆಯ ಪ್ರಕಾರ ಸಾಹಿತ್ಯ ಕೃತಿಯ ಮಹತ್ವವಿರುವುದು ಅದು ಒಳಗೊಂಡಿರುವ, ಪ್ರತಿಪಾದಿಸುವ ಮಾನವೀಯ ಮೌಲ್ಯದ ನೆಲೆಯಲ್ಲಿ. 'ತಾತ್ಕಾಲಿಕವಾದುದನ್ನು ಬಿಟ್ಟರೆ ಸಾರ್ವಕಾಲಿಕವಾದುದು ಬರೀ ಹೆಣ, ಸಾರ್ವಕಾಲಿಕವಾದುದನ್ನು ಬಿಟ್ಟರೆ ತಾತ್ಕಾಲಿಕವಾದುದು ಗಾಳಿಮಾತು' ಎಂಬ ಗೋಪಾಲಕೃಷ್ಣ ಅಡಿಗರ ಮಾತಿದೆ. ಸಾರ್ವಕಾಲಿಕತೆಯನ್ನು ತಾತ್ಕಾಲಿಕ ದೃಷ್ಟಿಕೋನದಿಂದ ಅರ್ಥೈಸುವುದರಲ್ಲಿಯೇ ಕೃತಿಯ ಮಹತ್ವವಿರುವುದು.

'ಕವಲು' ಕಾದಂಬರಿಗೆ ಇಂಥ ಧಾರಣಶಕ್ತಿ ಇಲ್ಲ ಎನ್ನುವುದು ಓದುತ್ತಿದ್ದಂತೆಯೇ ನಮ್ಮ ಗಮನಕ್ಕೆ ಬರುತ್ತದೆ. ಪೂರ್ವನಿರ್ಧರಿತ ಮೌಲ್ಯವನ್ನು ಕತೆಯ ಮೂಲಕ ಹೇಳಹೊರಟಾಗ ಅದು ಘೋಷಣೆಯೋ, ವರದಿಯೋ ಆಗದಂತೆ ಎಚ್ಚರವಹಿಸುವುದು ಲೇಖಕನ ಸಾಮರ್ಥ್ಯಕ್ಕೆ ಒಂದು ಸವಾಲು. ಬದಲಾಗುತ್ತಿರುವ ಸಾಮಾಜಿಕ ಸಂದರ್ಭವನ್ನು ಗ್ರಹಿಸಲಾರದೆ ಸೋತಿರುವುದು ಕೃತಿಯ ಪ್ರತಿಯೊಂದು ಘಟನೆಯಲ್ಲಿಯೂ ಎದ್ದು ಕಾಣುತ್ತದೆ. ಕೃತಿಯ ಮೂಲಕ ಒಂದು 'ಥಿಯರಿ'ಯನ್ನು ಕಟ್ಟುವುದು ಭೈರಪ್ಪನವರ ಬರವಣಿಗೆಯ ವಿನ್ಯಾಸ. ಅವರ ಥಿಯರಿಯನ್ನು ನಾವು ಒಪ್ಪಬಹುದು, ಒಪ್ಪದಿರಬಹುದು. ಅದಕ್ಕೆ ಬೇಕಾದ ಮಾಹಿತಿ ಕಲೆಹಾಕುವುದರ ಕುರಿತು, ಸಿದ್ಧತೆ ಬಗ್ಗೆ ಎರಡು ಮಾತಿಲ್ಲ. ಆದರೆ ಕವಲು ಕಾದಂಬರಿಯನ್ನು ಕೇವಲ ಮೂರು ತಿಂಗಳಲ್ಲಿ ಬರೆದಿರುವುದಾಗಿ ಅವರೇ ಹೇಳಿಕೊಂಡಿದ್ದಾರೆ. ಕಾದಂಬರಿ ಓದಿದಾಗ ಅಂಗಾಂಗಗಳು ಸರಿಯಾಗಿ ರೂಪುಪಡೆಯುವ ಮೊದಲೇ ಗರ್ಭಪಾತವಾದ ಭ್ರೂಣವನ್ನು ನೋಡಿದ ಅನುಭವವಾಗುತ್ತದೆ.

ಸಾವಿರಾರು ವರ್ಷಗಳಿಂದ ಮಹಿಳೆಯನ್ನು ಯಾವ ಸಿದ್ಧಮಾದರಿಯಲ್ಲಿ ಸಮಾಜ ಇಟ್ಟಿದೆಯೋ ಅದಕ್ಕೆ ಭಿನ್ನವಾಗಿರುವ ಮಹಿಳೆಯನ್ನು ಗ್ರಹಿಸಲು, ಅದಕ್ಕಿಂತ ಹೆಚ್ಚಾಗಿ ಸಹಿಸಲು ಭೈರಪ್ಪನವರ ಪುರುಷ ಪಾತ್ರಗಳು ಸಿದ್ಧವಾಗುವುದಿಲ್ಲ. ಹಾಗಂತ ಅಲ್ಲಿನ ಪುರುಷರು-ಜಯಕುಮಾರ, ವಿನಯಚಂದ್ರ, ಪ್ರಭಾಕರ, ದೇವರಾಜ ಯಾರೂ ಪ್ರಸ್ತುತ ಸಾಮಾಜಿಕ ಮೌಲ್ಯದ ಪಾತಳಿಯೊಳಗೆ ಬದುಕುವವರಲ್ಲ. ಪುರುಷಪ್ರಧಾನತೆ ತಾನೇ ಕೊಟ್ಟುಕೊಂಡಿರುವ ಸವಲತ್ತನ್ನು (ಅದು ಈಗ ಕಾನೂನುಬಾಹಿರವಾಗಿದ್ದರೂ) ಅನುಭವಿಸುತ್ತ ಹೆಂಡತಿ ತನ್ನ ಅಂಕೆಯಲ್ಲಿರಬೇಕೆಂದು ಬಯಸುವವರು. ಪೊಲೀಸ್ ಕಾನ್‌ಸ್ಟೇಬಲ್ ನಂಜುಂಡೇಗೌಡನಿಂದ ಹಿಡಿದು ಕಂಪನಿಯ ಮಾಲೀಕ ಜಯಕುಮಾರನವರೆಗೆ ಎಲ್ಲ ಪುರುಷರೂ ಹೆಂಡತಿ ತನಗೆ ವಿಧೇಯಳಾಗಿದ್ದು ತನ್ನ ಅಗತ್ಯಗಳನ್ನು ಪೂರೈಸುತ್ತಿರಬೇಕೆನ್ನುವ ಮನೋಧರ್ಮದವರು.

ಈಗಾಗಲೇ ಎಲ್ಲರೂ ಗುರುತಿಸಿರುವಂತೆ (ಲೇಖಕರ ಉದ್ದೇಶವೂ ಅದೇ!) 'ಓದಿದ ಹೆಂಗಸರು ಗಂಡಸರಾಗುತ್ತಾರೆ, ಓದಿದ ಗಂಡಸರು ಹೆಂಗಸರಾಗುತ್ತಾರೆ' ಎನ್ನುವುದು. ಇದರಲ್ಲಿ ಒಂದು ವಿಷಯವನ್ನು ಲೇಖಕರು ಗಮನಿಸಿದಂತಿಲ್ಲ. ಓದಿದ ಹೆಂಗಸರೆಲ್ಲ ಗಂಡಸರಾಗುತ್ತಾರೆ ಎನ್ನುವುದನ್ನ ಸಿದ್ಧಮಾಡ ಹೊರಟ ಲೇಖಕರು ಗಂಡಸು ಲಾಗಾಯ್ತಿನಿಂದಲೂ ಹೆಣ್ಣನ್ನು ಶೋಷಿಸುತ್ತಲೇ ಬಂದಿದ್ದಾನೆ ಎನ್ನುವುದನ್ನು ಒಪ್ಪಿಕೊಂಡಿದ್ದಾರೆ ಅಂದಂತಾಯ್ತು. ಓದಿದ ಹೆಂಗಸರು ಗಂಡಸರಾಗ್ತಾರೆ ಎನ್ನುವುದು ಸಂಪೂರ್ಣ ಸತ್ಯವಲ್ಲ. ಕಾದಂಬರಿಯ ಪ್ರಾರಂಭಕ್ಕೆ ಮೊದಲೇ 'ಜಯಂತಿ ಹೈಪ್ರಿಶನ್' ಕಂಪನಿಯ ಸಿ.ಇ.ಓ ಆಗಿದ್ದ ವೈಜಯಂತಿಯ ಸಾವು ಸಂಭವಿಸಿರುತ್ತದೆ. ಕೃತಿಯಲ್ಲಿ ಮತ್ತೆ ಮತ್ತೆ ಅವಳ ಪ್ರಸ್ತಾಪ ಬರುತ್ತದೆ. ಬಿ.ಇ. ಓದಿದ್ದ ಅವಳದು ಅಸಾಧಾರಣ ವ್ಯಕ್ತಿತ್ವ. ಕುಟುಂಬ ಕಂಪನಿಗಳೆರಡನ್ನೂ ಸಮರ್ಥವಾಗಿ ನಿಭಾಯಿಸುವ ಯೋಗ್ಯತೆ ಇದ್ದವಳು. ಕೈಯಲ್ಲಿ ಬಳೆ, ಹಣೆಯಲ್ಲಿ ಕುಂಕುಮ, ಜಡೆ, ಕೊರಳಲ್ಲಿ ಮಾಂಗಲ್ಯಸರ ಧರಿಸಿರುವ ಹೊರ ಚಹರೆ ಅವಳದು. ಜಯಕುಮಾರನನ್ನು ಇಕ್ಕಟ್ಟಿಗೆ ಸಿಲುಕಿಸಿ ಅವನನ್ನು ಮದುವೆಯಾಗುವ ಮಂಗಳ, ವಿಶ್ವವಿದ್ಯಾನಿಲಯದಲ್ಲಿ ಅಧ್ಯಾಪಕಳಾಗಿರುವ ಇಳಾ, ವಕೀಲೆಯರು, ಸ್ತ್ರೀವಾದಿ ಸಂಘಟನೆಯಲ್ಲಿ ಕೆಲಸ ಮಾಡುವ ಮಹಿಳೆಯರೆಲ್ಲ ಕೈ, ಕತ್ತು, ಹಣೆಗಳು ಬರಿದಾಗಿರುವ ಕೂದಲು ಕತ್ತರಿಸಿಕೊಂಡಿರುವ 'ಸೂತಕ'ದ ಕಳೆಯವರು. ಎರಡು ಬಗೆಯ ಪಾತ್ರಗಳನ್ನು ಸೃಷ್ಟಿಸಿರುವ ಭೈರಪ್ಪನವರು ಸಂಪ್ರದಾಯದ ಚೌಕಟ್ಟಿನಲ್ಲಿರುವವರನ್ನು ಕುಟುಂಬಿನಿಯರು ಎನ್ನುವಂತೆ ಚಿತ್ರಿಸುತ್ತಾರೆ. ಜಯಕುಮಾರನ ಮಗಳು ಪುಟ್ಟಕ್ಕ, ಕೆಲಸದ ದ್ಯಾವಕ್ಕ, ಎದುರು ಮನೆ ಡಾಕ್ಟರ್ ಇವರೆಲ್ಲ ಈ ವಲಯದೊಳಗೆ ಬರುವವರು. ತಮ್ಮ ಹಕ್ಕನ್ನು ಕೇಳುವ ಆಧುನಿಕ ಮನೋಭಾವದ ಮಹಿಳೆಯರೆಲ್ಲ ಕುಟುಂಬ ಘಾತಕರು ಎನ್ನುವ ಥಿಯರಿ ಕಾದಂಬರಿಯದು.

1950ರ ದಶಕದಲ್ಲಿ ಬಂದಿರುವ ಕೆಲವು ಪ್ರಗತಿಶೀಲ ಕೃತಿಗಳಲ್ಲಿ ಪ್ಯಾಂಟು, ಬೂಟು, ಕನ್ನಡಕ ಧರಿಸಿರುವವರೆಲ್ಲ ಶೋಷಕರು. ಭೈರಪ್ಪ ಅದೇ ಬಗೆಯ ಹಳಸಲು ಮಾದರಿಯನ್ನು ಇಲ್ಲಿ ತಂದಿದ್ದಾರೆ. ಪ್ರಸ್ತುತ ಸಂದರ್ಭದಲ್ಲಿ ಕುಟುಂಬ ಶಿಥಿಲವಾಗುತ್ತಿರುವುದಕ್ಕೆ ಆಧುನಿಕ ಬದುಕಿನ ಹಲವು ಬಗೆಯ ಒತ್ತಡಗಳು ಕಾರಣವಾಗಿವೆ. ಮಹಿಳೆ, ಪುರುಷ ಎನ್ನುವ ತರತಮವನ್ನು ಪ್ರಶ್ನಿಸುವ ಮಹಿಳೆಯ ಆಧುನಿಕ ಮನೋಧರ್ಮವೇ ಕುಟುಂಬದ ಶೈಥಿಲ್ಯಕ್ಕೆ ಕಾರಣ ಎನ್ನುವ ತೀರ್ಮಾನಕ್ಕೆ ಬರುತ್ತಾರೆ ಭೈರಪ್ಪ. ಸ್ತ್ರೀವಾದೀ ಮಹಿಳೆಯನ್ನು ಅಮಾನವೀಯವಾಗಿ ಕಂಡರಿಸುವ ಲೇಖಕರಿಗೆ ಸ್ತ್ರೀವಾದ ಮಾನವತಾವಾದದ ಒಂದು ಭಾಗ ಎನ್ನುವುದೂ ತಿಳಿದಿಲ್ಲ. ಜಾತಿ, ವರ್ಗ, ವರ್ಣ, ಧರ್ಮದ ಕಾರಣದಿಂದ ಮಾನವರ ನಡುವೆ ಮೇಲು-ಕೀಳು ಎನ್ನುವುದನ್ನು ನಿರಾಕರಿಸುತ್ತದೆ ಮಾನವತಾವಾದ. ಸ್ತ್ರೀವಾದ ಜೈವಿಕ ಕಾರಣದ ತಾರತಮ್ಯವನ್ನು ಪ್ರಶ್ನಿಸುತ್ತದೆ; ನಿರಾಕರಿಸುತ್ತದೆ. ಸ್ತ್ರೀವಾದದ ಬಗೆಗೆ ಇಂಥ ಪ್ರಾಥಮಿಕ ತಿಳಿವಳಿಕೆಯೂ ಲೇಖಕರಿಗೆ ಇಲ್ಲದುದು ಗಮನಿಸಬೇಕಾದ ಅಂಶ. ಸ್ತ್ರೀವಾದದ ಅಪವ್ಯಾಖ್ಯಾನಕ್ಕೆ ಕವಲು ಒಂದು ಉತ್ತಮ ಉದಾಹರಣೆ. ಮಹಿಳೆಯ ಬದುಕಿನ ಕವಲು ಏನೆನ್ನುವುದನ್ನು ಹೇಳುವ ಭರಾಟೆಯಲ್ಲಿ ಬಾಲಿಶವಾದ ಅಂಶಗಳು ಮತ್ತೆ ಮತ್ತೆ ಇಣುಕುತ್ತವೆ. ಮಂಗಳೆಯ ತಾಯಿಯ ಬಗೆಗೆ, 'ಗಂಡ ಸತ್ತರೂ ವಿಧವೆಯಾದರೂ ಹಣೆಗಿಡುವ ಆಧುನಿಕತೆ ತಾಯಿಯದು, ಗಂಡ ಇದ್ದರೂ ಸಧವೆಯಾದರೂ ಬೋಳುಹಣೆ ಮಗಳದು' (ಪು. 107 ಎರಡನೆಯ ಮುದ್ರಣ) ಇಪ್ಪತ್ತನೆಯ ಶತಮಾನದ ಪ್ರಾರಂಭದ ಕಾದಂಬರಿಯಲ್ಲಿ ಇಂಥ ಹೇಳಿಕೆ ಬಂದಿದ್ದರೆ ಅದನ್ನು ನಾವು ಒಪ್ಪಬಹುದಿತ್ತು. ಗಂಡನೇ ಮಹಿಳೆಯ ಬದುಕಿನ ಸರ್ವಸ್ವ ಎನ್ನುವ ಸಾಂಪ್ರದಾಯಿಕತೆಯನ್ನು ಈಗ ಹೇರಹೊರಟಿರುವ ಭೈರಪ್ಪನವರ ಬಗ್ಗೆ ಅಯ್ಯೋ ಪಾಪ! ಎನ್ನಬೇಕಾಗಿದೆ. ಈ ಬಗೆಯ ಮಾತುಗಳು ಅಲ್ಲಲ್ಲಿ ಪುನರಾವರ್ತಿಸುತ್ತವೆ. ಚಿತ್ರಾಹೊಸೂರರಳನ್ನು ಕೃತಿಯಲ್ಲಿ ಪರಿಚಯಿಸುವ ರೀತಿ: **'ಹೆಣ್ಣುತನವನ್ನು ನೀಗಿಕೊಂಡಿರುವ ರಿಕ್ತೆ'** (ಪು. 128) ಎನ್ನಲಾಗಿದೆ.

ಪುರುಷನ ಅಧಿಕಾರ ಕೇಂದ್ರವನ್ನು ನಿರಾಕರಿಸುವ ಸ್ತ್ರೀವಾದದ ಬಗೆಗಿನ ಲೇಖಕರ ಅಸಹನೆ ಕೃತಿಯುದ್ದಕ್ಕೂ ಢಾಳಾಗಿ ಕಾಣುತ್ತದೆ. ಮಹಿಳೆಯ ಸ್ವತಂತ್ರ ವ್ಯಕ್ತಿತ್ವವನ್ನು ನಿರಾಕರಿಸುವುದು ಅವರ ಇನ್ನಿತರ ಕಾದಂಬರಿಗಳಲ್ಲಿ ಸೂಚ್ಯವಾಗಿ ಕಂಡುಬರುತ್ತಿತ್ತು. ಅದು ತನ್ನೆಲ್ಲ ವಿಕಾರ ಮುಖಗಳೊಂದಿಗೆ 'ಕವಲು'ನಲ್ಲಿ ಪ್ರತ್ಯಕ್ಷಗೊಂಡಿದೆ ಅಷ್ಟೆ. ಇಲ್ಲಿನ ಪುರುಷರು ಹೆಂಡತಿ ಏಕವಚನದಲ್ಲಿ ಕರೆಯುವುದನ್ನು ಸಹಿಸುವುದಿಲ್ಲ. ಜಯಕುಮಾರನ ನಿಷ್ಕ್ರಿಯತೆಗೆ ಮಂಗಳೆ ಅವನನ್ನು ಏಕವಚನದಲ್ಲಿ ಕರೆದುದೂ ಕಾರಣವಾಗುತ್ತದೆ. ಭಾಷೆ ಕೂಡ ಅಧಿಕಾರದ ನೆಲೆಯನ್ನು ನಿರ್ಧರಿಸುವ ಮಾನದಂಡ. ಊಳಿಗಮಾನ್ಯ ವ್ಯವಸ್ಥೆಯಲ್ಲಿ ಆಳು ಒಡೆಯನ ಸಂಬಂಧವನ್ನು ಈ ಭಾಷೆಯೇ ಅಳೆಯುತ್ತದೆ. ಇದಕ್ಕೆ ಇನ್ನೊಂದು ಉದಾಹರಣೆ: ಮಂಗಳೆಯ ತಾಯಿಯ ಸಂದರ್ಭ. ಮಗಳ ಮನೆಯಲ್ಲಿ ತಾಯಿ ಇರಬಾರದು ಎನ್ನುವುದು. ಉತ್ತರ ಭಾರತದ ಸಂಪ್ರದಾಯವನ್ನು ಉದಹರಿಸಿ ಮಗ ಸೊಸೆಯರು ತಾಯಿ ಮನೆಯಲ್ಲಿ ಇರಲು ನಿರಾಕರಿಸಿದರೂ ಅವಳು ಮಗಳ ಮನೆಯಲ್ಲಿ ಇರುವಂತಿಲ್ಲ ಎನ್ನುವ ಜಯಕುಮಾರನ ಧೋರಣೆ. ಕಾದಂಬರಿಯ ನಿರೂಪಣೆ ಮತ್ತು ಇಲ್ಲಿನ ಸ್ವಗತಗಳೆಲ್ಲ ಮಹಿಳೆ ಹೇಗಿರಬೇಕು? ಯಾಕೆ ಹೀಗಿದ್ದಾಳೆ? ಎನ್ನುವುದರ ಸುತ್ತವೇ ಸುತ್ತುತ್ತವೆ. ಮಹಿಳೆಗೆ 'ಗೌರಿಸಂಹಿತೆ'ಯನ್ನು ಬೋಧಿಸುವ, ಅವಳ ವಸ್ತ್ರಸಂಹಿತೆಯ ಬಗ್ಗೆ ನಿರ್ದೇಶನ ನೀಡುವ ಕಾದಂಬರಿ ಪುರುಷನಿಗೆ ಅಂಥ ಯಾವ ನಿರ್ದೇಶನವನ್ನೂ ನೀಡುವುದಿಲ್ಲ. ಸಮಾನತೆಯನ್ನು ಬಯಸುವ ಮಹಿಳೆಯರನ್ನು ಸದಾ ಗಂಡ ಮತ್ತು ಗಂಡಸರನ್ನು ಕಾನೂನಿನ ಬಲೆಗೆ ಸಿಲುಕಿಸಲು ಹೊಂಚು ಹಾಕುತ್ತಿರುವವರಂತೆ ಚಿತ್ರಿಸುತ್ತದೆ. ಇವರೆಲ್ಲ ಗಂಡಸಿನ ಸಾಂಗತ್ಯಕ್ಕಾಗಿ, ವಿವಾಹೇತರ ಸಂಬಂಧವನ್ನು ಇಟ್ಟುಕೊಳ್ಳುವವರಂತೆ ಚಿತ್ರಿತರಾಗಿದ್ದಾರೆ.

ತನ್ನ ಅಸ್ಮಿತೆಯನ್ನು ಉಳಿಸಿಕೊಳ್ಳಲು ಪ್ರಯತ್ನಿಸುವ ಹೆಣ್ಣನ್ನು ಸ್ವಾರ್ಥಿ, ಗಂಡನನ್ನು ಕಾನೂನಿಗೆ ಸಿಕ್ಕಿಸಲು ಹೊಂಚುಹಾಕುತ್ತಿರುವವಳು ಎನ್ನುವಂತೆ ಚಿತ್ರಿಸುತ್ತ ಅವಳ ಗಂಡ ದಾರಿ ತಪ್ಪಲು ಅವಳೇ ಕಾರಣ ಎನ್ನುವ ಸನ್ನಿವೇಶ ಸೃಷ್ಟಿಸುವುದು ಇಳಾ ಮತ್ತು ಮಂಗಳ ಅವರ ವಿಷಯದಲ್ಲಿ. ಇವರನ್ನು ಗಂಡಸಿನ ಸಾಂಗತ್ಯಕ್ಕಾಗಿ ಹಂಬಲಿಸುವ, ಇತರ ಗಂಡಸರನ್ನು ಬುಟ್ಟಿಗೆ ಹಾಕಿಕೊಳ್ಳಲು ಹಾತೊರೆಯುತ್ತಿರುವ ಕೀಳುಮಟ್ಟದ ಮಹಿಳೆಯರು ಎನ್ನುವಂತೆ ಚಿತ್ರಿಸುವ ಲೇಖಕರಿಗೆ ಜಯಕುಮಾರ, ದೇವರಾಜ, ಪ್ರಭಾಕರ ಇದನ್ನೇ ಮಾಡಿದರೆ ಅದು

'ಕವಲು' ಕಾದಂಬರಿಯನ್ನು ತೆರೆಯುತ್ತಿದ್ದಾಂತೆ ಮೊದಲ ಪುಟದಲ್ಲಿಯೇ 'ಓದಿದ ಗಂಡಸರೆಲ್ಲ ಎಂಗಸರಾಯ್ತಾರೆ ಓದಿದ ಎಂಗಸರೆಲ್ಲ ಗಂಡಸರಾಯ್ತಾರೆ' ಎನ್ನುವ ಸಾಲುಗಳು ಕಣ್ಣಿಗೆ ಬೀಳುತ್ತವೆ. ಹೊಸ ಸಿನಿಮಾ ಬಿಡುಗಡೆಗೆ ಮುನ್ನ ಸಿನಿಮಾ ಮಂದಿರದ ಹೊರಗಡೆ ಮತ್ತು ಊರಿನ ಪ್ರಮುಖ ಸ್ಥಳಗಳಲ್ಲಿ ಆ ಸಿನಿಮಾದ ಪೋಸ್ಟರ್ ಹಾಕುವುದು ನೆನಪಿಗೆ ಬರುತ್ತದೆ.

ಅಣ್ಣ-ತಮ್ಮಂದಿರ ಮಕ್ಕಳು 'ಕಸಿನ್ಸ್' ಅಲ್ಲ ಎನ್ನುವ ವ್ಯಾಖ್ಯಾನ ಅದೇ ಪುಟದ ಕೆಳಗಿನ ಪ್ಯಾರಾದಲ್ಲಿ. 'ಕಸಿನ್' ಪದಕ್ಕೆ ತಂದೆ ತಾಯಿಯರ ಸೋದರ ಅಥವಾ ಸೋದರಿ ಮಗು ಎನ್ನುವುದು ಓರಿಯಂಟಲ್ ಲಾಂಗ್‌ಮ್ಯಾನ್ ನಿಘಂಟಿನ ಅರ್ಥ. ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್ ಕನ್ನಡ ನಿಘಂಟಿನ ಪ್ರಕಾರ 'ದೊಡ್ಡಪ್ಪ, ದೊಡ್ಡಮ್ಮ, ಚಿಕ್ಕಪ್ಪ, ಚಿಕ್ಕಮ್ಮ, ಸೋದರಮಾವ ಅಥವಾ ಸೋದರತ್ತೆಯ ಮಗಳು ಅಥವಾ ಮಗ'. ಇಲ್ಲಿ ಅರ್ಥ ಮುಖ್ಯವಲ್ಲ. ಇಂಗ್ಲಿಷ್ ಭಾಷೆ, ಹಾಗೂ ಸಂಸ್ಕೃತಿಗಳ ಬಗೆಗಿನ ಭೈರಪ್ಪನವರ ಅಸಹನೆ ಈ ರೂಪದಲ್ಲಿ ವ್ಯಕ್ತವಾಗಿದೆ.

ಮುಂದಿನ ಪುಟದಲ್ಲಿ:
ಮೊದಲ ಮುದ್ರಣ: 25-6-2010, ಎರಡನೆಯ ಮುದ್ರಣ: 28-6-2010 ಎಂದಿದೆ.

ಮೊದಲ ಮುದ್ರಣದ ಎಲ್ಲ ಪ್ರತಿಗಳು ಖರ್ಚಾಗಿ 3 ದಿನಗಳಲ್ಲಿ 2ನೆಯ ಮುದ್ರಣ ಹೇಗೆ ಸಾಧ್ಯ? ಪುಸ್ತಕದ ಹೊದಿಕೆ ಪುಟ ಒಣಗಲು ಕನಿಷ್ಠ 2 ದಿನ ಬೇಕು. ಒಂದೇ ಊರಿನಲ್ಲಿ ಜನ ಕ್ಯೂ ನಿಂತು ಪುಸ್ತಕ ಕೊಂಡರೇನು? ಇದು ಪುಸ್ತಕದ ಜನಪ್ರಿಯತೆಯನ್ನು ಸಾಬೀತುಗೊಳಿಸುವ ಒಂದು ತಂತ್ರಗಾರಿಕೆಯ ಭಾಗವೇ? ಸಾಹಿತ್ಯ ಭಂಡಾರದಂತಹ ಪ್ರಕಾಶನ ಸಂಸ್ಥೆಗೆ ಇಂಥ ಅಗ್ಗದ ತಂತ್ರಗಾರಿಕೆಯ ಅಗತ್ಯವಿದೆಯೇ?

-ಲೇ

ತಪ್ಪಲ್ಲ. 'ಒಳ್ಳೆ ಹೆಂಡತಿ ಇದ್ದಿದ್ರೆ ಗಂಡಸು ಯಾಕೆ ಸೂಳೇರ ಹುಡಿಕ್ಕಂಡು ಹೋಗ್ತಾನೆ' ಎಂದು ಜಯಕುಮಾರನ ತಾಯಿ ಹೇಳುತ್ತಾಳೆ. ಆದರೆ ದೇವರಾಜ, ಪ್ರಭಾಕರ ಇಬ್ಬರ ಹೆಂಡತಿಯರೂ ಸಾಮಾನ್ಯ ಮಹಿಳೆಯರು. ಅವರಿಬ್ಬರೂ ಕಂಡ ಕಂಡ ಮಹಿಳೆಯರನ್ನು ಅನುಭೋಗಿಸಲಿಕ್ಕೆ ಕೃತಿಯೊಳಗಂತೂ ಕಾರಣವಿಲ್ಲ. ಗಂಡಸಿಗೇ ಒಂದು ನ್ಯಾಯ, ಹೆಣ್ಣಿಗೆ ಇನ್ನೊಂದು ನ್ಯಾಯ. ಸಮಾಜದ ಸ್ವಾಸ್ಥ್ಯದ ದೃಷ್ಟಿಯಿಂದ ಇಂಥ ಸಂಬಂಧಗಳನ್ನು ಲಿಂಗಾತೀತ ನೆಲೆಯಿಂದ ನೋಡಬೇಕಾಗುತ್ತದೆ. ಲೇಖಕರ ಪಾರ್ಶ್ವಿಕ ದೃಷ್ಟಿ ಕಾದಂಬರಿಯ ಸಂರಚನೆಯೇ ಆಗಿದೆ. ವಿನಯಚಂದ್ರನಿಗೆ ದೆಹಲಿಗೆ ವರ್ಗವಾದಾಗ ಇಳಾ ತನ್ನ ಉದ್ಯೋಗ ತ್ಯಜಿಸಿ ಗಂಡನ ಹಿಂದೆ ಹೋಗಬೇಕಿತ್ತು ಎನ್ನುವುದು ಕಾದಂಬರಿಯ ಒತ್ತಾಯ. ಆದರೆ ಅವಳಿಗಿರುವ ಮೂರು ತಿಂಗಳ ರಜೆ ಮತ್ತು ಅವನು ಆಗಾಗ್ಗೆ ಬೆಂಗಳೂರಿಗೆ ಬರುತ್ತಿರುವುದರಿಂದ ಹೊಂದಾಣಿಕೆ ಮಾಡಿಕೊಳ್ಳಲು ಸಾಧ್ಯವಿತ್ತು. ಇಂಥ ನೂರಾರು ಉದಾಹರಣೆಗಳು ನಮ್ಮೆದುರಿಗಿವೆ. ಕುಟುಂಬದ ಶಿಥಿಲತೆಗೆ ಮಹಿಳೆಯೇ ಕಾರಣ ಎನ್ನುವುದನ್ನು ಸಾಬೀತುಪಡಿಸುವುದೇ ಕೃತಿಯ ಉದ್ದೇಶ ಆಗಿರುವುದರಿಂದ ಇದು ಸಹ್ಯವಲ್ಲ.

ಕೌಟುಂಬಿಕ ಬದುಕು ಶಿಥಿಲವಾಗುತ್ತಿರುವುದಕ್ಕೆ ಕಾರಣವನ್ನು ಶೋಧಿಸುವುದಕ್ಕೆ ಬದಲಾಗಿ ಪೂರ್ವನಿರ್ಧರಿತ ತೀರ್ಮಾನವನ್ನು ಕಥನವಾಗಿಸಲಿಕ್ಕೆ ಹೊರಟಿರುವುದರಿಂದ ಕೃತಿ ಪಾರ್ಶ್ವಿಕವಾಗುತ್ತದೆ. ಮಹಿಳೆಯ ಅನನ್ಯತೆಯನ್ನು ಗುರುತಿಸದ, ಅವಳ ವ್ಯಕ್ತಿತ್ವದ ಬಗೆಗೆ ಗೌರವವಿರದ ಕವಲುವಿನ ಧೋರಣೆ ಅಪಕ್ವವಾದ ಅಪಾಲಾಪವಾಗಿ ಕಾಣುತ್ತದೆ. ಈ ಕೃತಿಯಲ್ಲಿನ ಭೈರಪ್ಪನವರ ನಿಲುವು 'ಖಾಫ್' ಪಂಚಾಯಿತಿಯ ತೀರ್ಮಾನದ ಇನ್ನೊಂದು ರೂಪ ಅಷ್ಟೆ. ❑

ಪ್ರತಿಗಾಮಿ ಧೋರಣೆಯ "ಕವಲು"

■ *ಎಚ್.ಎಸ್. ಸತ್ಯನಾರಾಯಣ*

ಎಸ್.ಎಲ್. ಭೈರಪ್ಪನವರ ಹೊಸ ಕಾದಂಬರಿ 'ಕವಲು' ಓದಿದಾಗ ತಕ್ಷಣ ಅನ್ನಿಸಿದ್ದು ಯಾವ ಹೆಂಗಸನ್ನೂ ಮಾತನಾಡಿಸ ಬಾರದೆಂಬ ಪ್ರಚೋದನೆ. ಕಾದಂಬರಿಯನ್ನು ಓದುತ್ತಾ ಓದುತ್ತಾ ಹೋದಂತೆಲ್ಲ ಈ ನಿರ್ಧಾರ ಬಲಗೊಳ್ಳುತ್ತಾ ಹೋದರೆ ಆಶ್ಚರ್ಯವೇನಿಲ್ಲ! ಓದಿದ ಹೆಂಗಸು ಮನಸ್ಸು ಮಾಡಿದರೆ ಎಂತಹ ದುರ್ಭರವಾದ ಇಕ್ಕಟ್ಟಿಗೆ ಗಂಡುಸನ್ನು ಸಿಕ್ಕಿಸಿಬಿಡಬಲ್ಲಳು, ರಕ್ಷಣೆಗಾಗಿ ಇರುವ ಕಾನೂನಿನ ದುರ್ಬಳಕೆ ಮಾಡಿ ಮಟ್ಟ ಹಾಕಬಲ್ಲಳೆಂಬ ಭಯ ಓದುಗರನ್ನು ಆವರಿಸುತ್ತಾ ಹೋಗಿಬಿಡುತ್ತದೆ. ಬಹುಶಃ ಇದೇ ಭೈರಪ್ಪನವರ ಉದ್ದೇಶವೋ ಏನೋ? ಸ್ತ್ರೀವಾದಿಗಳ ಬಗ್ಗೆ ಭೈರಪ್ಪನವರಿಗೆ ಇರುವ ಪೂರ್ವಗ್ರಹ ಕಾದಂಬರಿಯುದ್ದಕ್ಕೂ ಧ್ವನಿತವಾಗಿದೆ.

ಇಲ್ಲಿನ ಜಯಕುಮಾರ್ ತನ್ನ ಎರಡನೆಯ ಹೆಂಡತಿಗೆ ಯಾವುದೋ ಒಂದು ದುರ್ಬಲ ಗಳಿಗೆಯಲ್ಲಿ ಹೊಡೆದ ತಪ್ಪಿಗೆ, ಮಹಿಳಾ ಠಾಣೆಯಲ್ಲಿ ಬಂಧಿಸಲ್ಪಟ್ಟು ಭೀಕರ ಮಾನಸಿಕ ಆಘಾತವನ್ನು ಅನುಭವಿಸುತ್ತಾನೆ. ಲಕ್ಷಾಂತರ ರೂಪಾಯಿಗಳ ಲಂಚ ಕೊಟ್ಟು ಲೇಡಿ ಸಬ್‌ಇನ್ಸ್‌ಪೆಕ್ಟರ್ ಗಳಿಂದ ಪಾರಾಗಬೇಕಾಗುತ್ತದೆ. ಈ ಸಂದರ್ಭದಲ್ಲಿ ಲಂಚ ನೀಡಿ ಪಾರಾಗಲು ಸೂಚಿಸುವ ಪೊಲೀಸ್ ಪೇದೆಯೊಬ್ಬ ಹೇಳುವ "ಓದಿದ ಗಂಡಸರೆಲ್ಲ ಹೆಂಗಸರಾಗ್ತಾರೆ, ಓದಿದ ಹೆಂಗಸರೆಲ್ಲ ಗಂಡಸರಾಗ್ತಾರೆ" ಎಂದ ಮಾತು ಇಡೀ ಕಾದಂಬರಿಯ ಆಶಯವನ್ನು ಮನಗಾಣಿಸಿಬಿಟ್ಟಿದೆ.

ಜಯಕುಮಾರ್ ತನ್ನ ಹೆಂಡತಿ ಸತ್ತ ಮೇಲೆ ತನ್ನ ಸ್ಟೆನೋಗ್ರಾಫರ್ ಮಂಗಳೆಯತ್ತ ವಾಲುತ್ತಾನೆ. ಇಲ್ಲಿ ಅವನ ಮನಸ್ಸಾಕ್ಷಿ ಸುಳಿವೇ ಇಲ್ಲ. ಅವಳಾದರೋ ಇಂಗ್ಲಿಷ್ ಎಂ.ಎ. ಪದವೀಧರೆ. ಸುಲಭವಾಗಿ ಅವನ ಸಂಪರ್ಕಕ್ಕೆ ಬರುತ್ತಾಳೆ! ನಿರೋಧ್ ಬಳಸುವುದು ಬೇಡ ಎಂದು ಅವಳು ಸೂಚಿಸಿದಾಗ ಅವನು ಸಮ್ಮತಿಸುವುದು ತಮಾಷೆ ಎನಿಸುತ್ತದೆ. ಪರಿಣಾಮವಾಗಿ ಗರ್ಭಧರಿಸಿದೆ ಎಂದು ಅವಳು ಅವನು ತನ್ನನ್ನು ಮದುವೆಯಾಗಬೇಕೆಂದು ಒಂದು ಚಕ್ರವ್ಯೂಹವನ್ನೇ ರೂಪಿಸಿಬಿಡುತ್ತಾಳೆ. ಅವಳ ಪರವಾಗಿ ವಾದಿಸುವ ಸ್ತ್ರೀವಾದಿ ಸಂಘಟನೆಗಳಿಗೆ ನೈತಿಕ ಸಿದ್ಧಾಂತಗಳೇ ಇಲ್ಲ ಎಂಬ ತಿಳಿವಳಿಕೆ ಭೈರಪ್ಪನವರದು. ಅವರೆಲ್ಲ ಮೋಸದಿಂದ ಮದುವೆಯ ಕೂಪಕ್ಕೆ ತಳ್ಳುವ ಅವಕಾಶವಾದಿಗಳೆಂಬಂತೆ, ಅವನು ಅವರ ಕೈಗೊಂಬೆಯಾಗಿಬಿಟ್ಟಿರುವಂತೆ ಕಾದಂಬರಿಯಲ್ಲಿ ಚಿತ್ರಿಸಿದೆ. ತನ್ನ ಸೆಕ್ರೆಟರಿಯನ್ನು ಕಾಮಕೇಳಿಗೆ ಆಹ್ವಾನಿಸುವ ಅವನ ನೈತಿಕ ಪ್ರಶ್ನೆ ಇಲ್ಲಿ ಮುಖ್ಯವಾಗುವುದೇ ಇಲ್ಲ.

ಮದುವೆಯಾದ ಮೇಲೂ ಅವಳು ಅವನ ಸಮಸ್ತ ಸಂಪಾದನೆಯನ್ನೂ ಕಬಳಿಸುವ ಹುನ್ನಾರದಲ್ಲಿ ಯಶಸ್ವಿಯಾಗುತ್ತಾಳೆಯೇ ಹೊರತು ಅವನಿಗೆ ಹೆಂಡತಿಯಾಗಲಿ, ಬುದ್ಧಿಮಾಂದ್ಯ ಬಲಮಗಳಿಗೆ ತಾಯಿಯಾಗಲಿ ಆಗುವುದಿಲ್ಲ. ಹುಡುಗ-ಹುಡುಗಿಯರನ್ನು ಅಕ್ಕ-ಪಕ್ಕ ಕೂರಿಸಿ, ಸಮಾನತೆಯ ಸ್ತ್ರೀವಾದಿ ಬೋಧನೆ ಮಾಡುವ ತನ್ನ ಉಪನ್ಯಾಸಕಿಯಿಂದ ಪ್ರಭಾವಿತಳಾಗಿ, ಮದುವೆ, ಕುಟುಂಬ, ಸಂಬಂಧಗಳ ವಿಚಾರದಲ್ಲಿ ನೇತ್ಯಾತ್ಮಕವಾದ ನಿಲುವನ್ನು ಬೆಳೆಸಿಕೊಳ್ಳುತ್ತಾ ಬೆಳೆಯುವ ಆಕೆ ಸಹಪಾಠಿಯೊಂದಿಗೆ ಮುಕ್ತ ಲೈಂಗಿಕತೆಗೆ ಸಮ್ಮತಿಸುವುದು ಸ್ತ್ರೀವಾದಿ ಧೋರಣೆಯಾಗಿ ಭೈರಪ್ಪ ಭಾವಿಸಿರುವಂತಿದೆ. ಗರ್ಭಕಟ್ಟಿದಾಗ ಅವನು 'ಕ್ಲೀನ್' ಮಾಡಿಸೋಣ ಎಂದಾಗ ಮಾತ್ರ ಅವಳ ಆತ್ಮಾಭಿಮಾನ ಕೆರಳಿ ನಿಲ್ಲುತ್ತದೆ. ಜಯಕುಮಾರ್‌ನನ್ನು ಮೋಸಮಾಡಿ ಮದುವೆಯಾದ ಮೇಲೂ ಮುಂದೆ ಹಳೆಯ ಗೆಳೆಯನ ಸೆಳೆತ ಅವಳನ್ನು ಬಿಡುವುದಿಲ್ಲ. ಮದುವೆಯಾಗುವಾಗ ಅವಳು ಬಸುರಾಗಿರುವುದು ತನ್ನ ಗೆಳೆಯ ನಿಂದಲೋ, ಪತಿಯಾಗಿರುವವನಿಂದಲೋ ಎಂಬ ಗೊಂದಲ ಮುಂದುವರಿಯುತ್ತದೆ. ಮುಂದೆ ಅವಳ ಗೆಳೆಯನ ವಿಚಾರವನ್ನು ಮನೆಕೆಲಸದ ದ್ಯಾವಕ್ಕಳಿಂದ ತಿಳಿದ ಜಯಕುಮಾರ್‌ನೂ ಡಿಎನ್‌ಎ ಪರೀಕ್ಷೆಗೊಳಪಡಿಸಿ, ದೃಢಪಡಿಸಿಕೊಳ್ಳುವ ಗೋಜಿಗೇ ಹೋಗುವುದಿಲ್ಲ.

ಅವಳ ವರ್ತನೆಯಿಂದ ತಿರಸ್ಕಾರ ಹೊಂದಿ, ಅವಳನ್ನು ಶರೀರ ಸಂಪರ್ಕದಿಂದ ದೂರಗೊಳಿಸಿ ಅವಮಾನಿಸುವ, ತನ್ನ ಪುರುಷತ್ವ ಸತ್ತಿದೆ ಎಂಬ ಭಾವನೆ ಬಂದಾಗ ಗೆಳೆಯನ ಸಲಹೆಯಂತೆ ದೂರದ ದಿಲ್ಲಿಯಲ್ಲಿ ಲಂಪಟನಾಗುವ, ಪುರುಷತ್ವ ಸತ್ತಿಲ್ಲ ಎಂದು ದೃಢವಾದಾಗಲೂ ಪದೇ ಪದೇ ಅದೇ ವಾಂಛಲ್ಯಕ್ಕೆ ಬಿದ್ದು, ಪೊಲೀಸರ ದಾಳಿಗೆ ಸಿಲುಕಿ, ಜೈಲುವಾಸ ಅನುಭವಿಸುವ ಪರಿಪಾಟಲುಗಳಲ್ಲಿ ಹೆಂಡತಿಯಿಂದ ಪಾರಾಗುವದು, ಮಗಳನ್ನು ಪಾರುಮಾಡುವುದು ಮಾತ್ರ ಮುಖ್ಯವಾಗಿ ತೋರುತ್ತದೆ. ಜೈಲು ಸೇರಿದಾಗ ಅವನ ನಿರೀಕ್ಷಣೆ

ಜಾಗೃತಗೊಳ್ಳುತ್ತದೆ. ಹೆಂಡತಿಯ ಮೇಲಿನ ಸೇಡಿಗೆ ಸೂಳೆಯರನ್ನಿರಿಸಿಕೊಂಡು ಹೋಗುವ ಅವನಿಗೆ, ಹೆಂಡತಿಯೂ ಹೀಗೆ ತನ್ನ ಮೇಲಿನ ಸೇಡಿನಿಂದ ಹಳೆಯ ಗೆಳೆತನವನ್ನು ಬಯಸುವುದು ಯಾಕೆ ಅಪರಾಧವಾಗಿ ಕಂಡೀತು? ಅವಳ ದೈಹಿಕ ಕಾಮನೆಗಳನ್ನು ತಣಿಸುವ ಹೊಣೆಗಾರಿಕೆಯಿಂದ ಅವನು ತಪ್ಪಿಸಿಕೊಳ್ಳುವುದು ಸರಿಯೇ?

ಸಾಹಿತ್ಯದ ಜೊತೆಗೆ ಸ್ತ್ರೀವಾದ ಬೋಧಿಸುವ, ವಿದೇಶಗಳಲ್ಲಿ ಕಲಿತುಬಂದ ಇಳಾ ಪಾತ್ರವಂತೂ ಮತ್ತೊಂದು ಅತಿರೇಕ ಎನಿಸುತ್ತದೆ. ಅವಳ ಗಂಡ ವೃತ್ತಿಯಲ್ಲಿ ಉನ್ನತಸ್ಥಾನವನ್ನರಸಿ ಬೆಂಗಳೂರಿನಿಂದ ದೂರ ಹೋಗುವವರೆಗಿನ ಅವರ ಕೌಟುಂಬಿಕ ಸಾಮರಸ್ಯ ಎಂತಹುದೆಂಬ ವಿವರಗಳನ್ನು ಕಾದಂಬರಿ ನೀಡುವುದಿಲ್ಲ. ತನ್ನ ಗಂಡ ಜೊತೆಗೆ ಬರುವಂತೆ ಕರೆದಾಗ ಮಾತ್ರ ಅವಳ ವ್ಯಕ್ತಿತ್ವ ಅವನ ವೃತ್ತಿಯ ಆರ್ಥಿಕ ಲಾಭಗಳನ್ನು ಕಡೆಗಣಿಸಿಯೂ ಒಂಟಿಯಾಗುವಂತೆ ಮಾಡುತ್ತದೆ. ಅವಳ ಬೋಧನೆ, ರಾಷ್ಟ್ರ–ಅಂತರಾಷ್ಟ್ರೀಯಮಟ್ಟದ ಸೆಮಿನಾರ್‌ಗಳಲ್ಲಿ ಮಹಿಳೆಯೊಬ್ಬಳ 'ಸಾಧನೆ'ಗಳಾಗಿ ಚಿತ್ರಿತಗೊಳ್ಳದೆ 'ಫ್ಯಾಷನ್' ಆಗಿ ಚಿತ್ರಿತಗೊಂಡಿದೆ. ಗಂಡನಿಂದ ದೂರಾದ ನಂತರ ಏಕಾಂಗಿಯಾಗಿ ಮಗಳನ್ನು ತನಗೆ ಬೇಕಾದಂತೆ ಬೆಳೆಸುವ ಪ್ರಯತ್ನದಲ್ಲಿ ಆಕೆ ಪರಾಜಿತೆ. ಮಗಳಿಗೆ ತಂದೆಯ ಹಂಬಲ. ಏಕೆಂದರೆ ಭೈರಪ್ಪ ಚಿತ್ರಿಸುವ ತಂದೆ ವಿನಯಚಂದ್ರ ಕೌಟುಂಬಿಕ ನೆಲೆಯಲ್ಲಿ ಲೇಖಕರ ಆಶಯವನ್ನು ಬಿಂಬಿಸುವಂತಹವನು. ಹೆಂಡತಿಯಿಂದ ದೂರಾಗಿದ್ದರೂ ಇನ್ನೊಂದು ಹೆಂಗಸಿನ ಸಹವಾಸಕ್ಕೆಳೆಸದ ಸಂಯಮಿ. ತಂದೆಯಾಗಿ ತನ್ನ ಜವಾಬ್ದಾರಿಯನ್ನು ದೂರದಲ್ಲಿದ್ದೂ ಜತನದಿಂದ ನಿಭಾಯಿಸುವ ಚಾಣಾಕ್ಷ. ತನ್ನ ಹೆಂಡತಿ ರಾಜಕಾರಣಿಯೊಬ್ಬನ ತೋಳಸೆರೆಯಲ್ಲಿರುವ 'ಬೆಡ್‌ರೂಂ' ದೃಶ್ಯಾವಳಿಗಳನ್ನು ಖಾಸಗಿ ದೂರದರ್ಶನದವರಂತೆ ಸಿನಿಮೀಯ ರೀತಿಯಲ್ಲಿ ಸೆರೆಹಿಡಿಸಿ, ಅದನ್ನು ಹೆಂಡತಿಯ ಮುಖಕ್ಕಿಡಿದು, ರೌಡಿಗಳಿಂದ ಬೆದರಿಸಿ 'ವಿಚ್ಛೇದನ' ಪತ್ರಕ್ಕೆ ಸಹಿ ಪಡೆಯುವ ಕುಶಾಗ್ರಮತಿ!

ರಾಜಕಾರಣಿಯೊಂದಿಗೆ ಸಂಬಂಧವಿಟ್ಟುಕೊಳ್ಳುವ ಇಳಾ ಕೂಡ ಮುಂದೆ ಅವನನ್ನು ಶಾಶ್ವತ ಬಂಧದಲ್ಲಿ ಬೆಸೆಯುವ ಅಪೇಕ್ಷೆಗೆ ಒಳಗಾಗುತ್ತಾಳೆ. ಹೇಳಿಕೇಳಿ ರಾಜಕಾರಣಿ, ಅವನೆಲ್ಲಿ ಅವಳ ಬಲೆಗೆ ಸಿಕ್ಕಿಕೊಳ್ಳಬೇಕು. ತಾಯಿಯ ಇಂಥ ರಾಸಲೀಲೆಯನ್ನು ಮಗಳು ಗಮನಿಸುವುದೂ ಕೂಡ ತೀರ ನಾಟಕೀಯವೆನಿಸಿದೆ. ಮಗಳ ಆಕ್ಷೇಪಕ್ಕೆ ತಾಯಿಯ ಉತ್ತರ ಮತ್ತು ಸಲಹೆಗಳನ್ನು ಭೈರಪ್ಪನವರು ಬರೆಯುವುದು ನೋಡಿ: "ನೀನು ಬೇಕಾದರೆ ಯಾರದಾದರೂ ಸ್ನೇಹ ಬೆಳೆಸು. ನೀನೂ ವಯಸ್ಸಿಗೆ ಬಂದಿದ್ದೀಯಾ. ನಾನು ಬೇಡ ಅನ್ನೋಲ್ಲ... ಆದರೆ ಗರ್ಭ ಕಟ್ಟದಂತೆ ಎಚ್ಚರವಹಿಸು" ಭೈರಪ್ಪನವರ ಸೃಷ್ಟಿಯಲ್ಲಿ ಎಂಥ ಉದಾರ ಹೃದಯದ ತಾಯಿ!

ಕಾದಂಬರಿ ಚಿತ್ರಿಸುವ ಮತ್ತೊಂದು ಮಜಲು 'ಲಿವಿಂಗ್ ಟುಗೆದರ್' ಸಂಸ್ಕೃತಿ ಭಾರತೀಯರ ಜಾಯಮಾನಕ್ಕೆ ಒಗ್ಗುವುದಿಲ್ಲವೆನ್ನುವುದು. ಜಯಕುಮಾರನ ಸೋದರಳಿಯ ಅಮೆರಿಕಾದಲ್ಲಿ ಸ್ನೇಹಿತೆಯೊಂದಿಗೆ ಲಿವಿಂಗ್ ಟುಗೆದರ್ ಸಂಬಂಧಕ್ಕೆ ತೆರೆದುಕೊಳ್ಳುವುದು, ತಂದೆ–ತಾಯಿ, ಅತ್ತೆ–ಮಾವರ ವಿರೋಧದ ನಡುವೆಯೂ ಆಧುನಿಕ ಬದುಕಿಗೆ ಮುಕ್ತವಾಗಿ ಸ್ಪಂದಿಸುವುದು, ತನ್ನ ಪರದೇಶಿ ಸಂಗಾತಿ ಬೇರೊಬ್ಬನಲ್ಲಿ ಅನುರಕ್ತಗೊಂಡು 'ಪ್ರಾಮಾಣಿಕ'ವಾಗಿ ಅದನ್ನು ತಿಳಿಸಿ ತೊರೆದು ಹೋದಾಗ ಖಿನ್ನತೆಗೆ ಜಾರುವುದು, ಹೆಂಗಸರ ಸಹವಾಸವೇ ಬೇಡವೆಂದು ನಿರ್ಧರಿಸಿದರೂ, ಮಕ್ಕಳಿರುವ ಹೆಣ್ಣಿನ ಉಪಚಾರಕ್ಕೆ ಸೋತು ಅವಳೊಂದಿಗೆ ಸಂಬಂಧ ಬೆಳೆಸುವುದು, ಆಕೆ ನಿಧಾನಕ್ಕೆ ಅವನನ್ನು ಮದುವೆಯ ಬಲೆಗೆ ಬೀಳಿಸಿ, ಸಂಪಾದನೆಯನ್ನೆಲ್ಲಾ ತನ್ನ ಹಾಗೂ ತನ್ನ ಮಕ್ಕಳ ನಿರ್ವಹಣೆಯ ಹೆಸರಲ್ಲಿ ಕಬಳಿಸಿ, ಮೊದಲಿನ ಪತಿಯೆಡೆಗೆ ಮುಖಮಾಡಿ, ಇವನಿಗೆ ಕೈ ಕೊಡುವುದು–ಇಲ್ಲೆಲ್ಲಾ ಭೈರಪ್ಪ ಲಿವಿಂಗ್ ಟುಗೆದರ್ ಕಾನ್ಸೆಪ್ಟ್ ನಮಗಲ್ಲ ಎಂಬಂತೆ ಚಿತ್ರಿಸುತ್ತಾರೆ.

ಸ್ತ್ರೀವಾದಿಗಳನ್ನು ಸ್ವೇಚ್ಛಾಚಾರಿಗಳೆಂಬಂತೆ ಕಾಣುವುದು ಕಾದಂಬರಿಯ ಬಹುಮುಖ್ಯ ದೌರ್ಬಲ್ಯಗಳಲ್ಲೊಂದು. ಇಲ್ಲಿ ಬರುವ ಎಲ್ಲ ಸ್ತ್ರೀ ನ್ಯಾಯವಾದಿಗಳು, ಲೇಖಕಿಯರು, ಸಂಘಟಕರು "ಓದಿ ಹಾಳಾದ ಹೆಣ್ಣುಗಳೆಂಬಂತೆ" ಚಿತ್ರಿತಗೊಂಡಿದ್ದಾರೆ. ಸ್ತ್ರೀವಾದ ಇಲ್ಲದ ಸಮಾಜವನ್ನು ರೂಪಿಸುವುದೇ ನಿಜವಾದ ಸ್ತ್ರೀವಾದದ ಆಶಯ ಎಂಬಷ್ಟು ಇಂದು ಸ್ತ್ರೀವಾದ ಬೆಳೆದಿರುವುದು ಭೈರಪ್ಪನವರಿಗೆ ತಿಳಿಯದ ಸಂಗತಿಯೇನಲ್ಲ. ಪುರುಷಾವಲಂಬನೆಯಿಂದ ಮುಕ್ತವಾಗುವ ಪರ್ಯಾಯವಾಗಿ ಅವರು 'ಲೆಸ್ಬಿಯನ್' ಸಂಗತಿಗಳನ್ನು ಚಿತ್ರಿಸುವ ಪ್ರಯತ್ನ ಮಾಡಿದ್ದಾರೆ.

ಭೈರಪ್ಪನವರ ಕಾದಂಬರಿಗಳನ್ನು ಅಭ್ಯಸಿಸಿದವರಿಗೆ ಇಲ್ಲಿ ಅವರ ಕಾದಂಬರಿಯ 'ಸಂರಚನೆ' ಬದಲಾಗಿರುವುದು ಎದ್ದು ತೋರುತ್ತದೆ. ನಿರಂತರ ಕಥನಕಲೆಯ ಪ್ರತಿಭೆ ಇರುವ ಭೈರಪ್ಪನವರ ಲೇಖನಿ ರಚನಾ ವಿಧಾನದಲ್ಲಿ ಯಾವ ಹೊಸತನ್ನು ಏರಿ ನಿಂತಿದೆಯೊ! ವಸ್ತುವನ್ನು ನಿರೂಪಿಸುವ ಭರದಲ್ಲಿ ಅವರ ಸಮರ್ಥನೆಗಳೆಲ್ಲ ತಮ್ಮ 'ಪ್ರತಿಗಾಮಿ' ಧೋರಣೆಯಲ್ಲೇ ಮುಳುಗಿರುವುದು ಬಹುದೊಡ್ಡ ವ್ಯಂಗ್ಯ.

❑

ಏಕಪಕ್ಷೀಯ 'ಕವಲು'

■ *ಭಾಷ್ಯಂ ತನುಜೆ*

"ಕವಲು" ಕಾದಂಬರಿಯನ್ನು ಓದಿದಾಗ ನನಗನಿಸಿದ್ದು "ಗೃಹಭಂಗ", "ಪರ್ವ", "ತಂತು", ಮುಂತಾದ ಅನೇಕ ಅತ್ಯುತ್ತಮ ಕಾದಂಬರಿಗಳನ್ನು ಬರೆದ ಭೈರಪ್ಪನವರೇ ಈ ಕಾದಂಬರಿಯನ್ನು ಬರೆದದ್ದು ಎಂಬ ಆಶ್ಚರ್ಯ ಮತ್ತು ದುಃಖ.

ಆಳವಾದ ಅಧ್ಯಯನ, ಶೋಧ ಇವರ ಕಾದಂಬರಿಗಳು ಗಟ್ಟಿಯಾಗಿ ಮೂಡಿ ಬರುವ ಕಾರಣಗಳು ಎಂದುಕೊಂಡಿರುವ ನಮಗೆ, 'ಕವಲು'ವಿನಲ್ಲಿ ಬಳಸಿರುವ 'ವಸ್ತು'ವಿನ ಬಗ್ಗೆ ಆಳವಾಗಿ ಅಧ್ಯಯನ ಮಾಡಿದ್ದಾರೆಯೇ ಎಂದು ಆಶ್ಚರ್ಯವಾಗುತ್ತದೆ. ಮೊದಲಿಗೆ ಅವರು ತಳೆದಿರುವ ನಿಲುವು ವಿದ್ಯಾವಂತ ಹೆಂಗಸರೆಲ್ಲ ನಿರ್ಲಜ್ಜರು ಎಂಬ ಭಾವವನ್ನು ಹೊಂದಿರುವುದು; ಕೆಲಸಕ್ಕೆ ಸೇರಿದ, ವಿದ್ಯಾವಂತ, ಆರ್ಥಿಕವಾಗಿ ಸಬಲರಾದ ಹೆಂಗಸರೆಲ್ಲ ಕೌಟುಂಬಿಕ ವ್ಯವಸ್ಥೆಗೆ ತಕ್ಕುದಾದವರಲ್ಲ ಎಂದು ಸಾರುವುದು; ಬೇಜವಾಬ್ದಾರಿಯಿಂದ ವರ್ತಿಸುತ್ತ, 'ಕಾಮ'ವೇ ಪ್ರಧಾನವಾಗಿ ಭಾವಿಸುವ, ಸಕಾರಣವಿಲ್ಲದೆ, ಬೆತ್ತಲಾಗಿ, ಕಂಡ ಕಂಡವರೊಡನೆ ಮಲಗಿ ಬದುಕುವ ಸ್ವಚ್ಛಂದತೆ, ಮುಕ್ತ ಲೈಂಗಿಕತೆಗೆ ಬದುಕನ್ನು ಬಲಿಕೊಟ್ಟುಕೊಂಡು ಬದುಕು ನಡೆಸುತ್ತಾರೆ ಎಂಬ ಭಾವವನ್ನು ದಟ್ಟವಾಗಿ ಅಭಿವ್ಯಕ್ತಿಸುವುದು. ಇವರ ಕಣ್ಣಿಗೆ, ಆಳವಾದ ಅಧ್ಯಯನಕ್ಕೆ ಸಾಕ್ಷಿಯೊದಗಿಸುವ, ಅನೇಕ ವಿದ್ಯಾವಂತ ಕುಟುಂಬಗಳಿವೆ. ಗಂಡು-ಹೆಣ್ಣು ಇಬ್ಬರು ವಿದ್ಯಾವಂತರಾಗಿ, ಅನ್ಯೋನ್ಯತೆಯಿಂದ ಕುಟುಂಬ ನಡೆಸುವ, ಪರಸ್ಪರ ಅಭಿಪ್ರಾಯಗಳಿಗೆ ಗೌರವ ಕೊಟ್ಟುಕೊಳ್ಳುತ್ತ ಬಾಳ್ವೆ ಮಾಡುವ ಮಾಡುತ್ತಿರುವ ಕುಟುಂಬಗಳಿವೆ. ಹೆಂಡತಿಯನ್ನು ಸ್ನೇಹದಿಂದ, ಪ್ರೀತಿಯಿಂದ, ಅವಳ ಪ್ರಗತಿಗೆ ಅಡ್ಡಗಾಲು ಹಾಕದೆ ಜೊತೆ ಜೊತೆಗೂ ಹೆಜ್ಜೆಹಾಕಿ ನಡೆಯುವ ಗಂಡುಗಳಿವೆ. ಇವೆಲ್ಲ ಭೈರಪ್ಪನವರ ಕಣ್ಣಿಗೆ ಕಂಡಿಲ್ಲವೇ? ಅಂತಹ ಕುಟುಂಬಗಳನ್ನು ಅಧ್ಯಯನ ಮಾಡಿ, ಬದಲಾಗುತ್ತಿರುವ ಸಮಾಜದಲ್ಲಿ ವಿದ್ಯಾವಂತ ಹೆಣ್ಣು ದೇಶದ ಪ್ರಗತಿಗೆ ಎಷ್ಟು ಕೊಡುಗೆ ನೀಡುತ್ತಿದ್ದಾಳೆ ಎಂಬುದನ್ನು ಗಮನಿಸಿದ್ದರೆ, ಶೋಧ ಮಾಡಿದ್ದರೆ "ಕವಲು"ವಿನಂತಹ ಪಕ್ಷಪಾತದಿಂದ ಕೂಡಿದ, ಹೆಣ್ಣಿನ ಅವಹೇಳನವೇ ಗುರಿಯಾದ ಕಾದಂಬರಿ ಹುಟ್ಟುತ್ತಿರಲಿಲ್ಲವೇನೋ!

ಆರಂಭದಲ್ಲಿ ಸಹಜವಾಗಿ ಆರಂಭವಾಗುವ ಕಾದಂಬರಿ, ಜಯಕುಮಾರ ಗಂಡನೆಂಬ ಅಧಿಕಾರದಿಂದ, ಮಂಗಳೆಯ ಮೇಲೆ ಹಿಂಸಾತ್ಮಕವಾಗಿ ನಡೆದುಕೊಳ್ಳುವುದರ ಬಗ್ಗೆ, ಮಂಗಳೆ ಪೊಲೀಸರಿಗೆ ದೂರು ಕೊಡುವುದರಲ್ಲಿ ಇಂದು ಅಲ್ಲಲ್ಲಿ ಕಂಡು ಬರುವ ಚಿತ್ರಣವನ್ನು ಕೊಡುತ್ತಾರೆ. ನಿಜ, ಅಲ್ಲಲ್ಲಿ, ಗಂಡಸರೂ ಶೋಷಣೆಗೆ ಒಳಗಾಗುತ್ತಿದ್ದಾರೆ. ಆದರೆ ಅದೇ ಸಾರ್ವತ್ರಿಕವೇ ಎಂಬುದೇ ಪ್ರಶ್ನೆ. ಕಾದಂಬರಿ ಬೆಳೆಯುತ್ತ ಹೋದಂತೆ ಲೇಖಕರ ಉದ್ದೇಶ ಗಂಡಸರ ಲಂಪಟತನಕ್ಕೆ ಸಹಾನುಭೂತಿಯೂ, ಹೆಂಗಸರ ಸಂಬಂಧಗಳನ್ನು ಬೇಕೆಂದೇ ತಿರುಚಿ, ತುಚ್ಛವಾಗಿ ನೋಡುವುದಕ್ಕಾಗಿಯೇ ಪಾತ್ರಗಳನ್ನು ಪೋಣಿಸಿ ಪೋಷಿಸಿದಂತೆಯೂ ಚಿತ್ರಿತವಾಗಿದೆ.

ಮಂಗಳೆ, ಪ್ರಭಾಕರ, ದೊರೆ ಇವು ಸಮಾಜದ ಪ್ರಮುಖವಾಹಿನಿಗಳೇನಲ್ಲ. ಅಂದೂ ಇದ್ದಾರೆ, ಇಂದೂ ಇದ್ದಾರೆ ಮುಂದೂ ಇರುತ್ತಾರೆ. ಮಂಗಳೆಯ ವ್ಯಕ್ತಿತ್ವ ಪ್ರಬುದ್ಧ ಮಾನ್ಯೆನ ಹುಡುಗಿಯದ್ದಲ್ಲ ವಿದ್ಯಾವಂತೆಯಾದರೂ ಮಾನಸಿಕ ರೋಗಿ. ಕಾಲೇಜಿನ ದಿನಗಳಲ್ಲಿ ಪ್ರಭಾಕರನನ್ನು ಮೋಹಿಸುತ್ತಾಳೆ. ಮದುವೆಗೆ ಮುಂಚೆಯೇ ಅವನನ್ನು ಬೆರೆಯುತ್ತಾಳೆ. ಅವನೊಡನೆ ಮದುವೆಯಾಗಿ ಸುಖ ಜೀವನ ನಡೆಸುತ್ತ ಎಲ್ಲರಂತೆ ಸುಖವಾಗಿ ಬಾಳ್ವೆ ಮಾಡುವ ಆಸೆಯೇ ಅವಳದು. ಪ್ರಭಾಕರ ಮದುವೆಯಾಗಲು ಒಪ್ಪದೆ, ವಂಚಿಸಿ, ಅಲ್ಲಿಯವರೆಗೂ ಮುಗ್ಧಳಾಗಿದ್ದ ಅವಳನ್ನು, ಅವಳ ಬುದ್ಧಿಯನ್ನು ಕೆಡಿಸಿ ಹಾಳುಮಾಡುತ್ತಾನೆ. ವಂಚನೆಗೊಳಗಾದ ಹೆಣ್ಣು ಜಯಕುಮಾರನನ್ನು ವಂಚಿಸುತ್ತಾಳೆ. ಜಯಕುಮಾರನೊಡನೆ ಅವಳ ಬದುಕು ಸರಿಹೋಗುತ್ತಿತ್ತು. ಲೇಖಕ ಭೈರಪ್ಪನವರಿಗೆ ಅದು ಬೇಡ, ಎಂ.ಎ. ಕಲಿತು ವಿದ್ಯಾವಂತಳಾದ ಹೆಣ್ಣು ಸಂಸಾರಕ್ಕೆ ನಾಲಾಯಕ್ಕು ಎಂದು ಬಿಂಬಿಸುವುದೇ ಲೇಖಕರ ಉದ್ದೇಶವಾದ್ದರಿಂದ, ಅವಳನ್ನು ಮತ್ತೆ ಪ್ರಭಾಕರನ ಹಾಸಿಗೆಗೆ ತಳ್ಳುತ್ತಾರೆ.

ಇತ್ತ, ಇಳಾ ಕತೆಯೂ ಹಾಗೆಯೇ. ಜವಾಬ್ದಾರಿಯುತ ಉಪನ್ಯಾಸಕಿ ಹುದ್ದೆಯಲ್ಲಿದ್ದ ಇಳಾ, ಗಂಡನ ವರ್ಗಾವಣೆ ಕಾರಣವಾಗಿ, ತನ್ನ ಉಪನ್ಯಾಸ ಹುದ್ದೆ ಬಿಡುವುದಕ್ಕೆ ಇಚ್ಛಿಸದೆ, ರಜೆಯಲ್ಲಿ ಬಂದು ಹೋಗುತ್ತೀರಿ, ತಾನೂ ಬರುತ್ತಿರುತ್ತೇನೆ ಎನ್ನುತ್ತಾರೆ. ಇಷ್ಟಕ್ಕೂ ಒಪ್ಪುವುದಿಲ್ಲ ಅವಳ ಗಂಡ. ಇಲ್ಲೇ ಗಂಡಸರ "ಇಗೋ" ತಾಂಡವವಾಡುವುದು. ಅಷ್ಟೇ ಅಲ್ಲದೆ, ಅವಳ ಕಡಿಮೆ ಸಂಬಳದ ಬಗ್ಗೆ ಹಗುರವಾಗಿ ಮಾತನಾಡುತ್ತಾನೆ, ಇದರಿಂದ 'ಇಳಾ' ಅವರಿಗೆ ಸಹಜವಾಗಿಯೇ ಪೆಟ್ಟುಬೀಳುತ್ತದೆ. ಆದರೆ, ಇದೇ ಕಾರಣಕ್ಕೆ ಆಕೆ ಗಂಡನನ್ನು ಬಿಟ್ಟು ಬಿಡುತ್ತಾರೆ ಎಂದುಕೊಳ್ಳುವ ಹಾಗಿಲ್ಲ, ಅಲ್ಲಿಂದಲೇ ಹೆಂಡತಿಯನ್ನು ದೂರಮಾಡಿಕೊಳ್ಳುತ್ತ, ಹೋಗುವ, ವಿನಯ ಆಕೆಯ ನೋವಿಗೆ ಕಾರಣವಾಗುತ್ತಾನೆ. ಆದರೆ ಅದಕ್ಕೂ ವಿಚಲಿತಳಾಗದೆ ಹುದ್ದೆಯಲ್ಲಿ ತಾನು ಸಂತೃಪ್ತಳಾಗಿ, ಮಗಳನ್ನು ಜತನವಾಗಿ ನೋಡಿಕೊಳ್ಳುತ್ತಿದ್ದ ಇಳಾ, ನಲವತ್ತು ವಯಸ್ಸು ದಾಟಿಬಿಟ್ಟ ಇಳಾ ಎಲ್ಲೊ ಕಾನ್‌ಫರೆನ್ಸ್‌ನಲ್ಲಿ ಕಂಡ ದೊರೆಯೊಡನೆ ಮಲಗುವುದು, ಅಂದರೆ, ಯಾವ ಜಸ್ಟಿಫಿಕೇಷನ್‌ಗೂ ಇಲ್ಲ. ಇಳಾ ಅಂತಹ ವಿದ್ಯಾವಂತೆಯನ್ನು ಲಂಪಟಳು ಎಂದು ಬಿಂಬಿಸುವುದಕ್ಕೆ ಅಲ್ಲಿಯ ಸನ್ನಿವೇಶ ಸೃಷ್ಟಿಸಿ, 'ಇಳಾ' ಪಾತ್ರವನ್ನು ತಿರುಚಿದ್ದಾರೆ ಲೇಖಕರು. 'ಇಳಾ' ಪಾತ್ರವನ್ನು ಅದೆಷ್ಟು ಮಟ್ಟಿಗೆ ಕುಬ್ಜವಾಗಿಸಿದ್ದಾರೆಂದರೆ, "ಬೇಕಿದ್ದರೆ ನೀನೂ ಒಬ್ಬ ಬಾಯ್ ಫ್ರೆಂಡ್‌ಅನ್ನು" ಹುಡುಕಿಕೊ ಎಂದು ಮಗಳಿಗೆ ಹೇಳುವಷ್ಟು! ಯಾವ ತಾಯಿಯೂ ಹೀಗೆ ಮಕ್ಕಳಿಗೆ ಹೇಳುವುದು ವಾಸ್ತವದಲ್ಲಿ ಸಾಧ್ಯವಿಲ್ಲ.

ಈ ಕಾದಂಬರಿಯಲ್ಲಿ ಹೆಣ್ಣು ಪಾತ್ರಗಳ ಬಗ್ಗೆ ಅದೆಷ್ಟು ಕೀಳಾಗಿ ಕಾಣುತ್ತಾ ಮತ್ತು ಪುರುಷರ ಅನೈತಿಕತೆಗೆ ಅದೆಷ್ಟು ಅನುಕಂಪ ತೋರುತ್ತಾರೆಂಬುದಕ್ಕೆ ಈ ಕೆಲವು ಸನ್ನಿವೇಶಗಳನ್ನು ನೆನಪಿಸಿಬೇಕಿದೆ. ಅಂತ್ಯದಲ್ಲಿ ಜಯಕುಮಾರನ ಬದುಕು ನಚಿಕೇತನೊಂದಿಗೆ, ಹೊಸ ಬಿಸಿನೆಸ್ ಆರಂಭಿಸುವುದರೊಂದಿಗೆ ನೆಲೆಕಂಡುಕೊಳ್ಳುತ್ತದೆ. ಪ್ರಭಾಕರ ಪಲಾಯನವಾದಿಯಾಗಿ ಮಂಗಳೆಯಿಂದ ದೂರವಾಗಿಬಿಡುತ್ತಾನೆ. ನಚಿಕೇತನಿಗೆ ಒಂದು ಸುಂದರ ಬದುಕು ದಕ್ಕುತ್ತದೆ. ಅದಕ್ಕೆ ಇಳಾಳನ್ನು ದೊರೆಯ ಹೆಂಡತಿ ಕೈಯಲ್ಲಿ ವಾಚಾಮಗೋಚರವಾಗಿ ಬಯ್ಯಿಸಿ ತೃಪ್ತಿಪಟ್ಟುಕೊಳ್ಳುತ್ತಾರೆ, ಭೈರಪ್ಪನವರು. ಅಂತೆಯೇ ಮಂಗಳೆಯನ್ನು ತಾಯಿಯವರ ಕೈಲಿ ಉಗಿಸುವ ಕ್ರಿಯೆ. ಲಂಪಟ ಜಯಕುಮಾರನ ಬಗ್ಗೆಯಾಗಲೀ, ಸರಿಯಾದ ಕಾರಣವಿಲ್ಲದೆ ಇಳಾಳನ್ನು ದೂರ ಮಾಡಿದ ವಿನಯನ ಬಗ್ಗೆಯಾಗಲೀ ಸಾತ್ವಿಕ ಕೋಪವಾದರೂ ಬೇಡವೇ? ಇಲ್ಲವೇ ಇಲ್ಲ. 'ಕವಲು' ಉದ್ದೇಶವೇ ಹೆಂಗಸರು, ಅದರಲ್ಲೂ ವಿದ್ಯಾವಂತ ಹೆಂಗಸರು ದುಷ್ಟರು ಎಂಬ ಭಾವ ಬಿತ್ತುವುದು ತಾನೇ!

'ಕವಲು'ವಿನಂತಹ ಏಕಪಕ್ಷೀಯ ಕಾದಂಬರಿಗಳು ಭೈರಪ್ಪನವರಿಂದ ಮೂಡಿಬರದಿರಲಿ. ಹಿಂದಿನಂತೆ ಆಳವಾದ ಅಧ್ಯಯನದಿಂದ, ಗಾಢತೆಯಿಂದ, ಸಮಸ್ಯೆಯ ಎಲ್ಲ ಮಗ್ಗುಲುಗಳಿಂದ ನೋಡಿ ವಿಶ್ಲೇಷಿಸುವ ವಸ್ತುವನ್ನೊಳಗೊಂಡ ಕಾದಂಬರಿಗಳು ಭೈರಪ್ಪನವರಿಂದ ಮೂಡಿಬರಲಿ. ❑



ದೇವದಾಸಿ ಪದ್ಧತಿ : ಮರಾಠಿ ಜನಪ್ರಿಯ ಸಾಹಿತ್ಯದ ಒಂದು ಓದು

ಮೂಲ: ಅನಘಾತಾಂಬೆ

ಲೇ: ಡಾ. ಬಿ.ಎನ್. ಸುಮಿತ್ರಾಬಾಯಿ

ಸಂಪ್ರದಾಯದ ಸರಪಳಿಗೆ
ಹರೆಯದ ಕ್ಷಣಗಳಲ್ಲಿ
ಒಲ್ಲದ ಮೈ–ಮನಸ್ಸೊಡ್ಡಿ
ಕುಂಕುಮ ನತ್ತು ಓಲೆಗಳಲ್ಲಿ
ನಿತ್ಯ ಸುಮಂಗಲಿಯಾಗಿ
ಹೊಟ್ಟೆ ಹೊರೆದಿದ್ದು ಅಷ್ಟೋ ಇಷ್ಟೋ!

(ಕಳೆದ ಸಂಚಿಕೆಯಿಂದ ಮುಂದುವರೆದ ಭಾಗ)

ಜೋಗಿತಿ ದೇವರ ಪತ್ನಿ. ಹಾಗಾಗಿ ಯಾವೊಬ್ಬ 'ಮನುಷ್ಯ' ಮಾತ್ರನನ್ನು ಮದುವೆ ಆಗುವಂತಿಲ್ಲ. 'ಗಾವ್‌ಚಿ ಬಾಯ್ಕೋ' ಎಂದು ಕರೆದು ಇಡೀ ಹಳ್ಳಿಗೆ ಹೆಂಡತಿ ಎಂದು ಅವಳನ್ನು ಅಂಕಿತಗೊಳಿಸ ಲಾಗುತ್ತದೆ. ಹೀಗೆ ಕರೆಯುವ ಮೂಲಕ ಅವಳು ಎಲ್ಲ ಪುರುಷರಿಗೂ ಲೈಂಗಿಕವಾಗಿ ಸುಲಭವಾಗಿ ಲಭ್ಯಳೆಂದು ಸೂಚಿಸಲಾಗುತ್ತದೆ. 'ಉಂಡಗಿ' ಅಥವಾ ಮುದ್ರೆಗೊಂಡವಳು (ಸ್ವೇಚ್ಛಾಚಾರಿಣಿ) ಎಂದು ಜೋಗಿತಿಯನ್ನು ನಿರ್ವಚಿಸುವುದರ ಮೂಲಕ ಲೈಂಗಿಕವಾಗಿರದ ಆದರೆ ಗೌರವವುಳ್ಳ ಬೇರೆ ಯಾವ ದುಡಿಮೆಯನ್ನೂ ಅವಳು ಕೈಗೊಳ್ಳದಂತೆ ಮಾಡ ಲಾಗುತ್ತದೆ. ಅನ್ಯಜೀವನೋಪಾಯಗಳು ಇಲ್ಲದ ಸ್ಥಿತಿಯಲ್ಲಿ ಒಬ್ಬ ಜೋಗಿತಿಯು ಗೃಹಸ್ಥ ಜೀವನಕ್ಕೆ ಬಾಹ್ಯವಾದ ಲೈಂಗಿಕ ಸಂಬಂಧಗಳಲ್ಲೇ ಬದುಕಲು ದಾರಿ ಕಂಡುಕೊಳ್ಳುವುದು ಅನಿವಾರ್ಯವಾಗುತ್ತದೆ.

'ನಾಪಟ್' ಕಾದಂಬರಿಯಲ್ಲಿ ಜೋಗಿತಿ ಪಾರು ಮೇಲ್ಜಾತಿಯ ರಾವ್‌ಸಾಹೇಬನ ಜಮೀನಿಗೆ ಸೌದೆ ಆರಿಸಲು ಹೋದಾಗ ಅವನು ಅವಳೊಂದಿಗೆ ಲೈಂಗಿಕ ಸಲುಗೆಯಿಂದ ಸಮೀಪಿಸಲು ಯತ್ನಿಸುತ್ತಾನೆ. ಅವಳು ನಯವಾಗಿ ವಿರೋಧಿಸಿದರೆ ಜೋಗಿತಿಗೆ ಮರ್ಯಾದೆಯ ಹಕ್ಕಿಲ್ಲ ಎನ್ನುತ್ತಾನೆ. 'ಚೌಂಡ್‌ಕಾ' ಕಾದಂಬರಿಯಲ್ಲಿ ಸುಲೀ ಹುಡುಗಿ ಆಗಿದ್ದಾಗಿನಿಂದ ದೇವರಿಗೆ ಬಿಟ್ಟವಳು. ಆದ್ದರಿಂದ ಇಡೀ ಹಳ್ಳಿಗೇ ಬಿಟ್ಟವಳೆಂದು ಜೊತೆ ಯವರು ಗೇಲಿ ಮಾಡುತ್ತಿರುತ್ತಾರೆ. ಅವಳು ಮೈ ನೆರೆದಾಗ ತಂದೆ ತಾಯಿಗಳೂ, ನೆರೆಯ ಹೆಂಗಸರೂ ಇನ್ನು ಇವಳ ಶೀಲ ಕಾಪಾಡುವುದು ಕಷ್ಟ, ಅವಳು ಸ್ವೇಚ್ಛಾಚಾರಿಣಿ ಆಗುವ ಸಾಧ್ಯತೆಯೇ ಹೆಚ್ಚು ಎಂದು ಕಳವಳಗೊಳ್ಳುತ್ತಾರೆ. ಬೇರೆ ಮಹಿಳೆಯರ ಜೊತೆ ಅವಳೂ ಕೂಲಿಗಾಗಿ ದುಡಿಯಲು ಹೊರಟರೆ ದೇವಿಗೆ ಮೀಸಲು ಬಿಟ್ಟವರಿಗೆ ಬೇಕಾದಂತೆ ಇರಲು ಅಡ್ಡಿಯಿಲ್ಲ ಎಂದು ಛೇಡಿಸುತ್ತಾರೆ. ಜೋಗ್ವಾ (ಧಾರ್ಮಿಕ ಭಿಕ್ಷೆ)ಗಾಗಿ ಹೋದರೆ 'ಹಳ್ಳಿಯ ಸ್ವತ್ತು' ಎಂದು ಹಂಗಿಸಲಾಗುತ್ತದೆ. ಆಡಿಕೊಳ್ಳುವವರನ್ನು ಅವಳು ಪ್ರತಿಭಟಿಸಿದಾಗ ಅವಳನ್ನು ಬೇರೆ ಹೆಂಗಸರು ಬೆಂಬಲಿಸಿದರೂ ಜೋಗಿತಿ ಆದವಳು ಅಶ್ಲೀಲ ನುಡಿ ಕೇಳಿ ಗರತಿಯರ ತರಹ ಸಿಟ್ಟಾಗಬಾರದೆಂದು ಅವಳಿಗೆ ನೆನಪಿಸುತ್ತಲೇ ಇರುತ್ತಾರೆ. ಅವಳ ಜೊತೆ ಚೆಲ್ಲಾಟವಾಡಲು ಯತ್ನಿಸಿ ಹಿಂಸಿಸಿದವನನ್ನು ದಂಡಿಸಲು ಅವಳ ತಂದೆ ಮುಂದಾಗುತ್ತಾನೆ. ಆದರೆ ಅವಳ ತಾಯಿ ಅವನನ್ನೇ ಶಾಂತಗೊಳಿಸಿ, ಮಗಳು ಪಡುವ ಕಿರುಕುಳವನ್ನು ಗೊತ್ತಿದ್ದೂ ಅನುಮೋದಿಸುತ್ತಾಳೆ.

'ಝೂಳ್ವಾ' ಕಾದಂಬರಿಯಲ್ಲಿ ಜೋಗಿತಿಯಾದ ಜಗನ್‌ಳಿಗೆ ಬಾಲ್ಯದಿಂದಲೂ ಸಿಗುವ ಬೋಧನೆ ಎಂದರೆ ದೊಡ್ಡವಳಾದ ಮೇಲೆ ಲೈಂಗಿಕವಾಗಿ ಚುರುಕಾಗಿರಬೇಕಾಗುತ್ತದೆ ಎಂಬುದು. ತಾತ್ಕಾಲಿಕವಾದ, ಪ್ರಯೋಜನವಿರದ ಲೈಂಗಿಕ ಸಂಬಂಧಗಳಲ್ಲಿ ಸಿಕ್ಕಿಕೊಳ್ಳಬೇಡ ಎಂದು ಅವಳನ್ನು ಎಚ್ಚರಿಸುತ್ತಲೇ ಇರುತ್ತಾರೆ. ಶಾಲೆಯ ಫೀಸ್‌ಗೆ ಹಣವಿಲ್ಲದೆ 'ಜೋಗ್ವಾ' ಮೂಲಕ ಹಣ ಒಟ್ಟುಗೂಡಿಸಲು ಯತ್ನಿಸಿದರೆ, ಒಬ್ಬ ಮಾಸ್ತರನ ಜೊತೆ ಮಲಗಿದರೆ ಬೇಕಾದ ದುಡ್ಡು ಗಳಿಸಬಹುದಲ್ಲ ಎಂದು ಜನರ ಮೂದಲಿಕೆ ಮಾತು ಕೇಳಬೇಕಾಗುತ್ತದೆ. ಹೆಡ್‌ಮಾಸ್ತರನು ಪುಕ್ಕಟೆಯಾಗಿ ಪುಸ್ತಕ ಕೊಡಿಸುವ ನೆಪದಿಂದ ಅವಳೊಂದಿಗೆ ಕಾಮುಕವಾಗಿ ವರ್ತಿಸಿದ್ದನ್ನು ಅವಳು ವಿರೋಧಿಸಿದಾಗ ನಡತೆ ಸರಿಯಿಲ್ಲವೆಂದು ಆಪಾದಿಸಿ ಅವಳನ್ನೇ ಶಾಲೆಯಿಂದ ಹೊರಹಾಕ ಲಾಗುತ್ತದೆ.

ಜೋಗಿತಿ ಎಂದರೆ ದೇವರಿಗೆ ಬಿಟ್ಟವಳು ಎಂಬುದಕ್ಕೆ ಪರ್ಯಾಯ ಅವಳೊಬ್ಬ ಸೂಳೆ ಎಂಬಂತೆಯೇ ಅರ್ಥೈಸಲಾಗುತ್ತದೆ. ಮದುವೆ, ಕುಟುಂಬಗಳ ಬಗ್ಗೆ ಅವಳು ಎಂದೂ ಕನಸು ಕಾಣುವಂತಿಲ್ಲ. ಬಟ್ಟೆ ಬದಲಿಸುವಷ್ಟು ಸುಲಭವಾಗಿ ಅವಳು ಸಂಗಾತಿಗಳನ್ನು ಬದಲಾಯಿಸ ಬಲ್ಲಳು ಎಂಬ ಮಾತುಗಳು ಸದಾ ಅವಳ ಸುತ್ತ ಕೇಳಿಸುತ್ತಿರುತ್ತವೆ. ಜೋಗಿತಿ ಲೈಂಗಿಕವಾಗಿ ಸದಾ ಸುಲಭವಾಗಿ ಒದಗುವವಳೆಂದು, ಅವಳಲ್ಲಿಗೆ ಬರಲು ಯಾರೂ ಯತ್ನಿಸಬಹುದು. ಸುಲೀಯ ಹುಟ್ಟಿಗೆ ಕಾರಣನಾದ ಗಂಡಸು, ತಾನು ಅವಳ ಅಪ್ಪನೆಂದು ಒಪ್ಪಲು ಸಿದ್ಧನಿಲ್ಲ, ಆದರೆ ಸುಲೀಯನ್ನು ಲೈಂಗಿಕವಾಗಿ ಸಮೀಪಿಸಲು ಅವನು ಕಿಂಚಿತ್ತೂ ಹಿಂಜರಿಯುವುದಿಲ್ಲ.

ಮುಂದೆ ಅವನಿಂದ ಸಹಾಯ ಬಯಸಿ ಸುಲೀ ಅವನ ಮನೆಗೆ ಹೋದರೆ ಆತನ ಹೆಂಡತಿ ಜೋಗಿತಿ ಕಾಲಿಡುವಷ್ಟು ತನ್ನ ಮನೆ ಇನ್ನೂ ಮರ್ಯಾದೆಗೆಟ್ಟಿಲ್ಲವೆಂದು ಹೇಳಿ ಅವಳನ್ನು ಹೊರಹಾಕುತ್ತಾಳೆ. ತನ್ನಿಂದ ಸುಖ ಸಿಕ್ಕಿದ್ದು ಸಾಲದಿದ್ದರೆ ಬೇಕಾದರೆ ಇನ್ನೊಬ್ಬ ಹೆಂಡತಿಯನ್ನೇ ತಂದೇನು, ಜೋಗಿತಿ ಮನೆಯೊಳಗೆ ಕಾಲಿಟ್ಟು ತನ್ನ ಮರ್ಯಾದೆಗೆ ಕಳಂಕ ತರಕೂಡದು ಎಂದು ಗಂಡನನ್ನೂ ಹಂಗಿಸುತ್ತಾಳೆ.



ದೇವಾಲಯಕ್ಕೆ ಹೋಗುವ ಗಂಡಸರು ದೇವದಾಸಿಯರನ್ನು ಛೇಡಿಸುವುದು, ಅವರೊಂದಿಗೆ ಚೆಲ್ಲಾಟವಾಡುವುದೂ ಸಾಮಾನ್ಯವೆಂದು 'ದೇವನಾರಿ' ನಾಟಕವು ಚಿತ್ರಿಸುತ್ತದೆ. 'ದೇವದಾಸಿ' ನಾಟಕದಲ್ಲಿ ಶಿಂಗಾರಿ ಈ ದೇವದಾಸಿಯ ಬದುಕಿಗೆ ಹೇಸಿ, ಅದರಿಂದ ದೂರ ಓಡಿ ಹೋಗಲು ವ್ಯರ್ಥಾಯತ್ನ ಮಾಡುತ್ತಾಳೆ. ದೇಗುಲದ ಪೂಜಾರಿ ದೇವದಾಸಿಗೆ ಎಲ್ಲ ಗಂಡಸರನ್ನೂ ತೃಪ್ತಿಪಡಿಸುವುದೇ ಧರ್ಮವಾಗಿರುತ್ತದೆ ಎಂದೂ ದೇವರಿಗೆ ಮುಡಿಪಾದ ಮೇಲೆ ಅವಳು ಯಾರಿಗೂ 'ಅಸ್ಪೃಶ್ಯ'ಳಲ್ಲ ಎಂದೂ ಬೋಧಿಸುತ್ತಾನೆ. 'ಭಂಡಾರ್‌ಭೋಗ್' ಕಾದಂಬರಿಯು ಒಬ್ಬ ಜೋಗ್ತನ ಬದುಕನ್ನು ಚಿತ್ರಿಸುತ್ತದೆ. ತಾಯಪ್ಪನನ್ನು ಜೋಗ್ತನನ್ನಾಗಿ ಮಾಡಿದ ಮೇಲೆ ಊರ ಗಂಡಸರಿಗೆಲ್ಲ ಅನುಕೂಲವಾಯ್ತು ಎಂಬ ಆಡಿಕೆ ಮಾತಿನಿಂದ ನೊಂದ ಅವನ ತಂದೆ ಕುಡಿಯಲು ಆರಂಭಿಸುತ್ತಾನೆ.

ಹೀಗೆ ಜೋಗಿತಿ ಅಥವಾ ಜೋಗ್ತನ ಬಗ್ಗೆ ಹಳ್ಳಿಯ ಯಾಜಮಾನ್ಯದ ತಾತ್ವಿಕ ಸಂಕಥನಗಳು ಬಹುಮಟ್ಟಿಗೆ ಗೇಲಿ, ತಮಾಷೆ, ಛೇಡಿಸುವುದು, ಮೂದಲಿಕೆ, ಅವಮಾನಿಸುವ ಮೂಲಕ ಅಭಿವ್ಯಕ್ತಿ ಪಡೆಯುತ್ತಿರುತ್ತವೆ. ಗೌರವಾನ್ವಿತರು ಎನ್ನಿಸಿಕೊಂಡ ಮೇಲ್ಜಾತಿಯ ಸ್ತ್ರೀಯರು-ಪುರುಷರೇ ಇಂಥ ಸಂಕಥನಗಳನ್ನು ನಡೆಸುವವರು. ಇವು ಒಟ್ಟಾರೆಯಾಗಿ ಜೋಗಿತಿ/ಜೋಗ್ತ ಎಂದರೆ ಮರ್ಯಾದೆ ಇಲ್ಲದ, ಮಾನಬಿಟ್ಟ, ಸ್ವೇಚ್ಛಾವರ್ತನೆಯ, ಲೈಂಗಿಕವಾಗಿ ಲಭ್ಯವಾಗಿರುವವರೆಂಬ ಗ್ರಹಿಕೆಯನ್ನು ಪುನಃ ಪುನಃ ಅವರ ಅರಿವಿಗೆ ತರುತ್ತಿರುತ್ತವೆ. ಹೀಗೆ ಮಾಡುವ ಮೂಲಕ ಅವರನ್ನು ಎಲ್ಲ ಬಗೆಯ ಲೈಂಗಿಕ ದುರುಪಯೋಗಕ್ಕೆ ಪಕ್ಕಾಗುವವರನ್ನಾಗಿ ರೂಪಿಸುತ್ತವೆ.

ಜೋಗಿತಿಯೊಂದಿಗೆ ಲೈಂಗಿಕ ಸಂಬಂಧಕ್ಕೆ ಯಾವ ನಿರ್ಬಂಧವೂ ಇಲ್ಲ ಎಂಬ ಗ್ರಹಿಕೆ ಅವಳ ಪ್ರೇಮ ಸಂಬಂಧದಲ್ಲೂ ಕೆಲಸ ಮಾಡಬಹುದು. ತಾನು ಪ್ರೀತಿಸುವಾತನನ್ನು ಮದುವೆಯಾಗಲು ಕನಸು ಕಾಣುವ ಅಥವಾ 'ಝುಲ್ವಾ' ಸಂಬಂಧಕ್ಕೆ ಆಶಿಸುವ ಜೋಗಿತಿ ಆ ಎಲ್ಲ ನಿರೀಕ್ಷೆಗಳೊಂದಿಗೆ ಪ್ರಿಯಕರನನ್ನು ಸೇರುತ್ತಾಳೆ. ಸುಲೀ ತನ್ನ ಕುಟುಂಬಕ್ಕೆ ನೆರವಾದ ಬಾಬ್ಯಾನ ಬಗ್ಗೆ ಆಕರ್ಷಿತಳಾಗುವುದು ಹೀಗೆಯೇ. ಅವಳನ್ನು ಮದುವೆ ಆಗುವುದಿರಲಿ, ಅವಳ ಜೊತೆ 'ಝುಲ್ವಾ' ಒಪ್ಪಂದವೂ ಸಾಧ್ಯವಿಲ್ಲವೆಂಬ ವಾಸ್ತವದ ಅರಿವಿದ್ದೂ ಬಾಬ್ಯಾ ಅವಳನ್ನು ಪ್ರಣಯದಲ್ಲಿ ತೊಡಗಿಸಿಕೊಳ್ಳುತ್ತಾನೆ. ಅವಳು ಗರ್ಭಿಣಿ ಆದಾಗ ಅವನ ಮನೆಯವರು ಅವರಿಗೆ ತಿಳಿಯ ಹೇಳಿ, ಆ ಸಂಬಂಧ ಮುರಿದುಕೊಳ್ಳುವಂತೆ ಮಾಡುತ್ತಾರೆ.

ಹೀಗೆಯೇ ಜಗನ್, ತನಗೆ ಒಂದು ನಾಟಕದಲ್ಲಿ ಪಾತ್ರವನ್ನು ನೀಡಿದ ಜಯಂತನ ಬಗ್ಗೆ ಒಲವು ಹೊಂದುತ್ತಾಳೆ. ಮರ್ಯಾದಸ್ತ ಹುಡುಗಿಯರಾರೂ ಮಾಡಲಾರರು ಎಂದು ಗೊತ್ತಿದ್ದೂ ಅವನ ಜೊತೆ ಚೆಲ್ಲಾಟ, ಸುತ್ತಾಟ, ಲೈಂಗಿಕ ಸಂಬಂಧಗಳನ್ನು ಒಪ್ಪಿಕೊಳ್ಳುತ್ತಾಳೆ. ಪಾರು-ರಾವ್ ಸಾಹೇಬರ ಸಂಬಂಧ ಕೂಡ ಇದೇ ಬಗೆಯದು. ಅವನೇ ಅವಳನ್ನು ಮರುಳು ಮಾಡಿ, ಬಹಿರಂಗವಾಗಿಯೇ ಪ್ರಣಯದಲ್ಲಿ ತೊಡಗುತ್ತಾನೆ. ಕೊನೆಗೆ ಅವಳು ತನ್ನನ್ನು ಮದುವೆ ಆಗುವಂತೆ/ ಕೊನೆಯ ಪಕ್ಷ ಝುಲ್ವಾ ಸಂಬಂಧ ಹೊಂದುವಂತೆ ಪದೇ ಪದೇ ಒತ್ತಾಯಿಸಿದರೆ, ಹಾಗೆ ಮಾಡಿದರೆ ತನ್ನ ತಂದೆ ನೊಂದುಕೊಂಡು ತನಗೆ ಆಸ್ತಿ ಕೊಡದೆ ಹೋಗಬಹುದು ಎಂದು ರಾವ್ ಸಾಹೇಬ ನುಣುಚಿಕೊಂಡು ಬಿಡುತ್ತಾನೆ.

ಈ ಪಠ್ಯಗಳಲ್ಲಿ ಒಬ್ಬ ಜೋಗಿತಿ 'ಮೇಲ್ಜಾತಿ ಪುರುಷರಿಗೆ ಲೈಂಗಿಕ ಭೋಗಕ್ಕೆ ಒದಗುವ ಪದಾರ್ಥ ಎಂಬ ಸ್ಥಿತಿ ಹೊಮ್ಮಿ ಬರುತ್ತದೆ. ದೇವರ ಪತ್ನಿಯಾದ್ದರಿಂದ ಅದರ ಹೊರಗಿನ ಸಂಬಂಧಗಳು ಯಾವುದೂ ಅವಳನ್ನು ಅಪವಿತ್ರಗೊಳಿಸಲಾರವು ಎಂಬುದು ಒಂದು ಉಪಾಯದ ಲೆಕ್ಕಾಚಾರ. ಹಾಗೆಂದು ತನ್ನ ಬಯಕೆ ಈಡೇರಿಕೆಗಾಗಿ ಅಥವಾ ಹಣ ಗಳಿಕೆಗಾಗಿ ಅವಳು ತನ್ನನ್ನು ತೆತ್ತುಕೊಳ್ಳಲು ಅವಕಾಶವಿಲ್ಲ. ಬೇಕೆಂಬಷ್ಟು ಭಾಗಿದಾರರನ್ನು ಹೊಂದಿರುವಂತೆಯೂ ಇಲ್ಲ. ಈ ಎಲ್ಲಾ ನಿಯಮಗಳನ್ನು ಅನುಸರಿಸಿದರೆ ಮಾತ್ರ ಅವಳ ಸತೀತ್ವ (ಸತ್‌ಪನ್)ಕ್ಕೆ ಧಕ್ಕೆ ಬರುವುದಿಲ್ಲ. 'ಝುಲ್ವಾ' ಒಪ್ಪಂದದಲ್ಲೂ ಒಬ್ಬ ವ್ಯಕ್ತಿಗೇ ನಿಷ್ಠೆಯಿಂದ ನಡೆದುಕೊಂಡರೆ ಮಾತ್ರ ಅವಳ ಸತೀತ್ವ, ಪಾವಿತ್ರ್ಯಗಳು ಮೌಲಿಕವೆನಿಸುತ್ತವೆ. ಆದರೆ ಯಾಜಮಾನ್ಯ ವ್ಯವಸ್ಥೆ ಜೋಗಿತಿಯೊಬ್ಬಳಿಗೆ ಇಂಥ ಸತೀತ್ವ, ಪಾವಿತ್ರ್ಯ ಕಾಪಾಡಿಕೊಳ್ಳುವುದನ್ನು ಕಷ್ಟವೆಂದೇ ಪ್ರಚಾರ ಮಾಡುತ್ತಿರುತ್ತದೆ. ಝುಲ್ವಾ ಸಂಬಂಧದ ಹೊರಗೆ ಅವಳ ಸಂತಾನಕ್ಕೆ ನ್ಯಾಯಬದ್ಧವೆಂಬ ಮಾನ್ಯತೆ ಸಿಗುವುದಿಲ್ಲ. ಸುಲೀ, ಜಗನ್, ಪಾರು ಇವರುಗಳು 'ಹಾದರ'ದ ಗರ್ಭತಳೆದವರೆಂಬ ಆರೋಪವನ್ನು ಎದುರಿಸುತ್ತಾರೆ. ಅವರ ಗರ್ಭಪಾತದ ಯತ್ನಗಳೂ ನಡೆಯುತ್ತವೆ. ಜಗನ್‌ಳಂತೂ ದೇವರಿಗೆ ಬಿಡುವ ವಿಧಿ ನೆರವೇರುವ ಮೊದಲಲ್ಲೇ ಲೈಂಗಿಕ ಸಂಬಂಧ ಬೆಳೆಸಿ ಗರ್ಭಿಣಿ ಆದಳೆಂದು ಅವಳ ಸ್ಥಿತಿ ಇನ್ನಷ್ಟು ಕಳಂಕಪ್ರಾಯವೆನಿಸುತ್ತದೆ.

ಒಂದು ಸ್ಥಿರವಾದ ಜೀವನೋಪಾಯಕ್ಕಾಗಿ, ಒಂದಿಷ್ಟು ಗೌರವ ಪಡೆಯಲಿಕ್ಕಾಗಿ ಜೋಗಿತಿಯೊಬ್ಬಳು ನಡೆಸಬೇಕಾಗಿ ಬರುವ ಹೋರಾಟವೇ 'ಝುಲ್ವಾ'. ಅವಳು ಎಷ್ಟು ಬಲವಾಗಿ ಇಂಥ ಸಂಬಂಧಕ್ಕೆ ಹಾತೊರೆಯುತ್ತಾಳೋ, ಅವಳ ಲೈಂಗಿಕ ಪಾಲುದಾರ ಗಂಡಸು ಅಷ್ಟೇ ತೀವ್ರವಾಗಿ ಹಿಂಜರಿದು ಸಂಬಂಧ ಮುರಿದು, ಮಾತು ಮುರಿದು ಪಲಾಯನ ಮಾಡುತ್ತಿರುತ್ತಾನೆ. ಹೀಗೆ ಬೇಜವಾಬ್ದಾರಿಯಿಂದ ಪುರುಷರು ವರ್ತಿಸುವುದಕ್ಕೆ ಜೋಗಿತಿ ಮತ್ತು ಅವಳ ಮಕ್ಕಳನ್ನು ತಾನು ಸಾಕಬೇಕಾಗುತ್ತದೆ ಎಂಬ ಆತಂಕ, ಭೀತಿಯಷ್ಟೇ ಕಾರಣವಲ್ಲ; ಆ ಮಕ್ಕಳಿಗೆ ತನ್ನ ಹೆಸರನ್ನು ಕೊಡಬೇಕಾಗುವುದೇ ಮೂಲಭೂತ ಹಿಂಜರಿಕೆಯ ಕಾರಣ. ಜೋಗಿತಿ 'ಉಂಡಗಿ' ಎಂದೇ ಜನ ನೋಡುವುದರಿಂದ ಅವಳ ಮಕ್ಕಳಿಗೆ ತಂದೆ ತಾನು ಎಂದು ಬಹಿರಂಗಗೊಳಿಸುವುದು ಅವನ ಮರ್ಯಾದೆಗೆ ಕಳಂಕ ತರುವಂಥದು. ಹೀಗೆ ಜೋಗಿತಿಯೊಬ್ಬಳ ಸತೀತ್ವ, ಪಾವಿತ್ರ್ಯಗಳ ಹಾಗೆ ಅವಳ ಸಂತಾನದ ಪಿತೃತ್ವದ ಪ್ರಶ್ನೆ ಕೂಡ ಯಾವತ್ತೂ ಸಂದೇಹಾಸ್ಪದವಾಗುತ್ತದೆ.

ಹೀಗಿದ್ದರೂ ಜೋಗಿತಿಗೆ ಸತೀತ್ವ ಅವಶ್ಯಕವಾಗಿ ನಡೆಸಲೇಬೇಕಾದ ಮೌಲ್ಯ ಹಾಗಾಗಿ ತಮ್ಮ ಮಗಳು ಸುಲೀಯು ಬಾಬ್ಯಾನ ಜೊತೆ ಇಟ್ಟುಕೊಂಡ ಸಂಬಂಧದ ಬಗ್ಗೆ ಊರವರು ಆಡಿಕೊಳ್ಳಲು ತೊಡಗಿದಾಗ ಸುಲೀಯ ತಾಯಿ ತಂದೆಯರು ಕುಟುಂಬದ ಹೆಸರು ಕೆಡಿಸಿ ಅವಮಾನಕ್ಕೆ ಗುರಿ ಮಾಡಿದಳೆಂದು ಅವಳನ್ನು ಹಿಡಿದು ಹೊಡೆಯುತ್ತಾರೆ. ಅವಳ ಹಾದಿ ತಪ್ಪಿಸಿ, ವಂಚಿಸಿದ್ದಕ್ಕಾಗಿ ಬಾಬ್ಯಾನ ಮೇಲೆ ಪ್ರತೀಕಾರಕ್ಕೂ ಯತ್ನಿಸುತ್ತಾರೆ. ಒಂದು ಮರ್ಯಾದಸ್ತ ಕುಟುಂಬದಲ್ಲಿ ಹುಟ್ಟಿದ್ದರೂ ಸತೀತ್ವವನ್ನು ಉಳಿಸಿಕೊಳ್ಳಲಿಲ್ಲ ಎಂದು ಹಳ್ಳಿಯವರೆಲ್ಲ ಸುಲೀಯನ್ನ

ನಿಂದಿಸುತ್ತಾರೆ. ಅವಳ ತಾಯಿ ಈ ಅವಮಾನದ ದುಃಖದಿಂದಲೇ ತೀರಿಕೊಂಡರೆ, ಅವಳ ತಂದೆಗೆ ಪಾರ್ಶ್ವವಾಯು ಬಡಿಯುತ್ತದೆ.

'ಚೌಂಡ್‌ಕಾ' ಕಾದಂಬರಿಯಲ್ಲಿ ವಯಸ್ಸಾದ ಜೋಗ್ತಿಯೊಬ್ಬಳನ್ನು ನೋಡುವುದಕ್ಕೆಂದು ಅವಳ ಹಿಂದಿನ ಯಜಮಾನ ಮನೆಗೆ ಬಂದದ್ದು ತಿಳಿದಾಗ ಆಕೆಯ ಅಣ್ಣನ ಮಗ ದಿಗ್ಭ್ರಮೆಗೊಂಡು ಆ ಜೋಗ್ತಿಯನ್ನು ಹೊಡೆಯುವುದರ ಚಿತ್ರಣವಿದೆ. ಮಹರ್ ಜಾತಿಯ ಒಬ್ಬ ಜೋಗಿತಿ ಅನೇಕ ಗಂಡಸರೊಂದಿಗೆ ಸಂಬಂಧ ಇಟ್ಟುಕೊಂಡಿದ್ದಕ್ಕಾಗಿ ಅವಳ ತಾಯಿ–ತಂದೆಗಳು ತಮ್ಮಿಂದ ದೂರವಾಗಿ ಪ್ರತ್ಯೇಕವಾಗಿ ಪಕ್ಕದ ಮನೆಯಲ್ಲಿ ವಾಸಿಸುವಂತೆ ಮಾಡುತ್ತಾರೆ. 'ಭಂಡಾರ್ ಭೋಗ್' ಕಾದಂಬರಿಯಲ್ಲಿ ಒಬ್ಬ ಮಹರ್ ಜಾತಿಯ ಜೋಗಿತಿ ಒಬ್ಬನ ಜೊತೆ ಮಾಡಿಕೊಂಡ ಝುಳ್ವಾ ಸಂಬಂಧ ಮುರಿದು ಮತ್ತೊಬ್ಬನೊಂದಿಗೆ ಅಂಥ ಸಂಬಂಧವನ್ನು ರೂಪಿಸಿಕೊಳ್ಳುತ್ತಾಳೆ. ಆದರೆ ಇದರಿಂದಾಗಿ ಮೀಸಲು ಬಿಟ್ಟ ಜೋಗಿತಿ ಬದುಕು ಅಸಹನೀಯ ಎಂಬಂತೆ ವರ್ತಿಸಿದಳೆಂಬ ಆಪಾದನೆಯನ್ನು ಅವಳ ಮೇಲೆ ಹೊರಿಸಲಾಗುತ್ತದೆ.

ಪಾರುವು ತನಗೆ ಮಾತುಕೊಟ್ಟಿದ್ದಂತೆ ರಾವ್‌ಸಾಹೇಬ ಝುಳ್ವಾ ಸಂಬಂಧಕ್ಕೆ ಒಪ್ಪದೆ ಉಳಿದಾಗ, ತಮ್ಮ ಸಂಬಂಧಕ್ಕೆ ಸಾಮಾಜಿಕ ಮಾನ್ಯತೆ ನೀಡದೆ ಮನೆತನಕ್ಕೆ ಕಳಂಕ ಉಂಟುಮಾಡಿದನೆಂದು ಅವನನ್ನು ದೂಷಿಸುತ್ತಾಳೆ. ಹಳಿಯುವವರಷ್ಟೇ ಅಲ್ಲದೆ ಅವರ ಜಾತಿಬಂಧುಗಳೂ ಜೋಗಿತಿಯಿಂದ ಮಗಳ ಪಾವಿತ್ರ್ಯವನ್ನು ಕಾಪಾಡದೆ ಬಿಟ್ಟಿದ್ದಕ್ಕಾಗಿ ಅವಹೇಳನ ಮಾಡಿದಾಗ ಪಾರುವಿನ ತಂದೆ ವಿಪರೀತ ನೊಂದು ಕೊಳ್ಳುತ್ತಾನೆ. ರಾವ್ ಸಾಹೇಬನ ತಂದೆ ಹತ್ತಿರ ನ್ಯಾಯಕೇಳಲು ಹೋದರೆ ಅವನು ಇವನನ್ನೇ ಹಣದಾಸೆಯಿಂದ ತನ್ನ ಮಗನಿಗೆ ಬಲೆ ಬೀಸಿ ಅವನಿಗೆ ಅಪಕೀರ್ತಿ ತರಲು ಯತ್ನಿಸಬೇಡ ಎಂದು ಗದರಿಸುತ್ತಾನೆ. ಎಲ್ಲೆಲ್ಲೂ ಅವಮಾನಿತನಾದ ಪಾರುವಿನ ತಂದೆ ದುಡಿಯಲು ಹೊರಗೆ ಹೋಗುವುದನ್ನೂ ನಿಲ್ಲಿಸಿ, ಯಾರಿಗೂ ಮುಖ ತೋರಿಸಲು ಇಚ್ಛೆ ಇಲ್ಲದೆ ಮನೆಯೊಳಗೇ ಅಡಗಿಕೊಳ್ಳುತ್ತಾನೆ.

ಮನೆತನದ ಮರ್ಯಾದೆ, ಸತೀತ್ವದ ರಕ್ಷಣೆ ಮತ್ತು ಪಾವಿತ್ರ್ಯ ಉಳಿಸಿಕೊಳ್ಳುವ ಪ್ರಶ್ನೆಗಳು ಜೋಗಿತಿ ಮತ್ತು ಅವಳ ಕುಟುಂಬಕ್ಕೆ ಸೀಮಿತವಲ್ಲ. ಇಡೀ ಜಾತಿಗೆ, ಕುಲಕ್ಕೆ ಅವು ಪ್ರತಿಷ್ಠೆಯ ಸಂಗತಿಗಳಾಗುತ್ತವೆ. 'ನಾಪಟ್'ನಲ್ಲಿ ಮೇಲ್ಜಾತಿಯವರು ಮಹರರನ್ನು ತಮ್ಮ ಹೆಂಗಸರನ್ನು ಅಪವಿತ್ರ ಜೋಗಿತಿಯರನ್ನಾಗಿ ಮಾಡುವವರು ಎಂದು ತೆಗಳುತ್ತಾರೆ. ತಮ್ಮ ಹೆಣ್ಣುಮಕ್ಕಳನ್ನು ಮೇಲ್ಜಾತಿಯವರ ಭೋಗಕ್ಕೆ ಬಿಟ್ಟು ಅವರ ಸೂಳೆಗಾರಿಕೆಯ ಗಳಿಕೆಯಿಂದ ಬದುಕುತ್ತಾರೆಂದು ಮಹರರನ್ನು ಹೀನೈಸುತ್ತಾರೆ. ಕ್ಷುದ್ರರಾದ ಮಹರರು, ಮೇಲ್ಜಾತಿಯವರು ತಮ್ಮ ಹೆಂಗಸರನ್ನು ಪರಿಶುದ್ಧವಾಗಿ ಉಳಿಸಿಕೊಂಡು ಕೆಳಜಾತಿಯ ಜೋಗಿತಿಯರ ಜೊತೆ ಸ್ವೇಚ್ಛಾಚಾರ ನಡೆಸಿ, ಅವರನ್ನು ಅಪವಿತ್ರಗೊಳಿಸಿ ಶೋಷಿಸುತ್ತಾರೆಂದು ಪ್ರತ್ಯಾರೋಪ ಮಾಡುತ್ತಾರೆ. ಮೇಲ್ಜಾತಿಯವರ ಮೇಲೆ ಸೇಡು ತೀರಿಸಿಕೊಳ್ಳಲು, ದೇವರ ಉತ್ಸವದಲ್ಲಿ ಪರಂಪರೆಯಿಂದ ತಾವು ನಡೆಸಿಕೊಂಡು ಬಂದಿದ್ದ ಡೋಲುಬಾರಿಸುವ ಸೇವೆಯನ್ನೇ ನಿಲ್ಲಿಸುತ್ತಾರೆ.

ಹಣಕ್ಕೆ ಬದಲಾಗಿ ದೇಹವನ್ನು ವಿನಿಮಯ ಮಾಡಬೇಕಾದ ಸ್ಥಿತಿ ಜೋಗಿತಿಯರದು ಮಾತ್ರವೇ ಅಲ್ಲ, ಜೋಗ್ತರಾಗಿ ದೇವರಿಗೆ ಮೀಸಲಿಡಲ್ಪಟ್ಟ ಗಂಡುಗಳೂ ಹಳ್ಳಿಯ ಮೇಲ್ಜಾತಿ ಗಂಡಸರೊಡನೆ ಹೀಗೆಯೇ ನಡೆದುಕೊಳ್ಳಬೇಕಾದ ಅಸಹಾಯಕ ಪರಿಸ್ಥಿತಿಯಲ್ಲಿರುತ್ತಾರೆ. ಮರ್ಯಾದೆ, ಪಾವಿತ್ರ್ಯಗಳು ಜೋಗ್ತನಿಗೂ ಅನ್ವಯಿಸುವ ಮೌಲ್ಯಗಳು. 'ಭಂಡಾರ್ ಭೋಗ್' ಕಾದಂಬರಿ ಇಂತಹ ಜೋಗ್ತನ ಬದುಕನ್ನು ಕುರಿತದ್ದಾಗಿದೆ. ಆರೋಗ್ಯವಂತ ಗಂಡಾಗಿದ್ದ ತಾಯಪ್ಪನನ್ನು ಜೋಗ್ತನನ್ನಾಗಿ ಬಿಡಲಿಕ್ಕಾಗಿ ಅವನ ಪೌರುಷಹರಣ ಮಾಡಲಾಗುತ್ತದೆ. ಆಮೇಲೆ ಅವನನ್ನು ಬುಳ (ಹೆಣ್ಣಿಗ) ಎಂದು ನೋಡಲಾಗುತ್ತದೆ. ಅವನಿಗೆ ಲೈಂಗಿಕವಾಗಿ ಸ್ತ್ರೀ ಸಂಬಂಧ ನಿಷಿದ್ಧ, ಪಡ್ಡೆ ಹುಡುಗರೊಂದಿಗೆ ಪೋಲಿ ಜೋಕಿನ ಮಾತು ಕೇಳುತ್ತಾ ಕಾಲ ಕಳೆಯುತ್ತಾನೆ. ಬೇರೆ ಗಂಡಸರು ಕಾಮಕ್ಕಾಗಿ ತನ್ನನ್ನು ಬಳಸ ತೊಡಗಿದಾಗ ಅವನು ತೀರ ಜಿಗುಪ್ಸೆ, ಹಿಂಜರಿಕೆ ಅನುಭವಿಸಿದರೂ ಅವರ ಚೆಲ್ಲಾಟಗಳನ್ನು ವಿರೋಧಿಸಲಾರ. ತಾನಾಗಿ ಗಂಡಸರೊಂದಿಗೆ ಲೈಂಗಿಕ ಸಂಬಂಧಕ್ಕೆ ತೊಡಗದೆ ಇರುವುದರಿಂದ ತಾಯಪ್ಪನನ್ನು ಸತೀತ್ವವುಳ್ಳ ಪರಿಶುದ್ಧ ಜೋಗ್ತನೆಂದು ಜನ ಭಾವಿಸುತ್ತಾರೆ. ಅವನ ಮೇಲೆ ಸೆರೆಯಂಗಡಿ ಕುಡುಕರು ಅತ್ಯಾಚಾರ ನಡೆಸುತ್ತಾರೆ.

ಹೀಗೆ ಒಬ್ಬ ಜೋಗಿತಿ/ಜೋಗ್ತ ಬದುಕುವ ಸಾಮಾಜಿಕ ಜಾಗವು ಅನೇಕ ಒಳವಿರೋಧಗಳಿಂದ ಕೂಡಿದ್ದಾಗಿರುತ್ತದೆ. ಗರತಿಯರಿಗೆ ಹೋಲಿಸಿ ಇವರನ್ನು 'ಉಂಡಗಿ'ಗಳೆಂದು ಹೀನೈಸುವ ಮೂಲಕ ದಾಂಪತ್ಯದ ಹೊರಗಿನ ಹಲವು ರೀತಿಯ ಲೈಂಗಿಕ ವಿನಿಮಯಗಳಿಗೆ ಇವರು ಸುಲಭವಾಗಿ ದಕ್ಕುವಂತೆ ಮಾಡಲಾಗುತ್ತದೆ. ಈ ಬಗೆಯ ವಿನಿಮಯ ಸಂಬಂಧಗಳಲ್ಲಿ ಬಲಾತ್ಕಾರ ಹಿಂಸೆಗಳು ಇದ್ದಾಗಲೂ ಅವು ಸ್ವಯಿಚ್ಛೆಯಿಂದ ಹೊಂದಿದ್ದೆಂಬಂತೆ ತೋರಿಕೆ ಇರುತ್ತದೆ. ದೇವರಿಗೆ ಮುಡಿಪಾದವಳಾದ ಜೋಗಿತಿಗೆ 'ಸೂಳೆ' ಎಂಬ ಹಣೆಪಟ್ಟಿಯನ್ನು ನೇರವಾಗಿ ಅಂಟಿಸಲಾಗದು. ಆದರೆ ದೇವದಾಸಿತನದಿಂದಾಗಿಯೇ ಆರ್ಥಿಕಾದಿ ಐಹಿಕ/ಭೌತಿಕ ಆಸಕ್ತಿಗಳನ್ನಾಗಲಿ, ಲೈಂಗಿಕವಾದ ಇಚ್ಛೆ/ಆಯ್ಕೆಗಳನ್ನಾಗಲೀ ಹೊಂದಿರುವ ಹಕ್ಕು ಅವಳಿಗಿರುವುದಿಲ್ಲ.

ಮೀಸಲಾದವಳೆಂಬ ನೆಲೆಯು ಅವಳನ್ನು ಗೃಹಸ್ಥರ ಸಾಮಾನ್ಯ ಜೀವನಕ್ಕೆ ಹೊರಗಿನದಾದ ಲೈಂಗಿಕ ವಲಯಕ್ಕೆ ತಳ್ಳುತ್ತದೆ. ದಾಂಪತ್ಯೇತರ ಲೈಂಗಿಕ ಸಂಬಂಧ ಮಾತ್ರ ಅವಳಿಗೆ ಲಭ್ಯ. ಅದರಲ್ಲಿ ದಾಂಪತ್ಯದ ಒಳಗಿರುವವರಿಗೆ ಸಿಗುವ ಆರ್ಥಿಕ ಭದ್ರತೆ, ಗೌರವಾರ್ಹತೆ ಯಾವುದೂ ಜೋಗಿತಿಗೆ ದೊರಕುವುದಿಲ್ಲ. ಅವಳಿಗೆ ಬೇಡವಾಗಿದ್ದರೂ ಮೇಲ್ಜಾತಿ ಪುರುಷರ ಅಪೇಕ್ಷೆಗಳನ್ನು ನಡೆಸಲೇಬೇಕಾದ ಅವಸ್ಥೆ. ಅವಳ ಮಕ್ಕಳ ಜವಾಬ್ದಾರಿಗೆ ಸ್ವತಃ ಅವರ ಜನ್ಮದಾತನಾದ ಪುರುಷನೂ ಕಡ್ಡಾಯವಾಗಿ ಬಾಧ್ಯನಾಗಿರಬೇಕಿಲ್ಲ. ಒಬ್ಬ ವಿವಾಹಿತ ಪತ್ನಿ ತನ್ನ ಪತಿಗೆ ಸಲ್ಲಿಸಬೇಕಾದ ಸಂತಾನೋತ್ಪಾದನೆ ದುಡಿಮೆಗಳು ಇವಳಿಗೆ ಅನಿವಾರ್ಯವಲ್ಲ. ಇವಳ ಲೈಂಗಿಕ ದುಡಿಮೆಯ ಕ್ಷೇತ್ರವು ಸತೀತ್ವ, ಪಾವಿತ್ರ್ಯಗಳಿಗೆ ಹಕ್ಕೊತ್ತಾಯಿಸುವ ನಿವೇಶನವೊಂದನ್ನು ಅವಳಿಗೆ ಒದಗಿಸುತ್ತದೆ ಆದರೆ ಈ 'ಮರ್ಯಾದೆ'ಯು ಬಹುಸ್ತರಗಳುಳ್ಳದ್ದಾಗಿರುತ್ತದೆ.

ಗಾವ್‌ಗಡದ ಚೌಕಟ್ಟಿನೊಳಗೆ ಹಳ್ಳಿಯ ಜಾತಿವ್ಯವಸ್ಥೆಯು ಶ್ರೇಣೀಕೃತ ಕಸಬುಗಳನ್ನು ನಿರ್ಧರಿಸಿರುತ್ತದೆ. ಈ ಔದ್ಯೋಗಿಕ ಸಂರಚನೆಗಳು ದೇವದಾಸಿ ಪದ್ಧತಿಯ ಮೂಲಕವಾಗಿ ದಾಂಪತ್ಯೇತರ ಲೈಂಗಿಕ ದುಡಿಮೆಗಾಗಿ ಕೆಳಜಾತಿಯ ಮುಡಿಪಿಟ್ಟ ಮಹಿಳೆಯರ ಜೀವನವನ್ನು ಸಂಘಟಿಸುತ್ತವೆ. ಹಳ್ಳಿಯ ಸಾಮಾಜಿಕ ಜೀವನದ ಅಂಚಿನಲ್ಲೇ ಬದುಕಬೇಕಾಗಿರುವ ಸಂನ್ಯಾಸಿಗಳು, ಭಿಕ್ಷೆ ಬೇಡುವುದರಿಂದಲೇ ಜೀವಿಸುವ ಕೆಳಜಾತಿ ಕಲೆಗಾರರು, ಅಲೆಮಾರಿಗಳು ಮುಂತಾದವರ ರೀತಿಯಲ್ಲೇ ಈ ಜೋಗ್ತಿಯರೂ ಜೋಗ್ತರೂ ಸಾಮಾಜಿಕ ಪರಪುಟ್ಟಗಳೆಂದು ತಿರಸ್ಕಾರಕ್ಕೆ ಒಳಗಾಗುವುದರ ಚಿತ್ರಣ 'ಝುಳ್ವಾ'ದಲ್ಲಿದೆ.

'ಗಾವ್ ಚೆ ಪೀಕ್' (ಹಳ್ಳಿಯ ಫಸಲು) ಎಂದು ಜೋಗಿತಿಯನ್ನು ನಿರ್ವಚಿಸಲಾಗುತ್ತದೆ. ಹಳ್ಳಿಯ ಎಲ್ಲ ಗಂಡಸರಿಗೆ, ವಿಶೇಷವಾಗಿ ಮೇಲ್ಜಾತಿಯವರಿಗೆ ಲೈಂಗಿಕವಾಗಿ ಅವಳು ಲಭ್ಯಳು ಎಂಬುದನ್ನು ಈ ಮಾತು ಸೂಚಿಸುತ್ತದೆ. 'ನಾಪಟ್'ನಲ್ಲಿ ರಾವ್ ಸಾಹೇಬ ಪಾರುವನ್ನು

ತಾನು ಭೋಗಿಸುವು ದನ್ನು ನ್ಯಾಯುತವಾದದ್ದೆಂದು ಸಮರ್ಥಿಸಿಕೊಳ್ಳಲು ಜೋಗಿತಿಯಾದವಳು ಹರಿವ ಬರುವ ಎಲ್ಲರನ್ನೂ ಸ್ವೀಕರಿಸಬೇಕಾದ್ದೇ ಅವಳ ಧರ್ಮ, ಇದನ್ನು ಅವಳ ತಂದೆ ಕೂಡ ವಿರೋಧಿಸಲಾರನೆಂದು ವಾದಿಸುತ್ತಾನೆ.

ಸುಲೀ ಬಾಬ್ಯಾನಿಂದ ಗರ್ಭಿಣಿಯಾದಾಗ ಊರವರು ಬಾಬ್ಯಾಗೆ ಫಲವತ್ತಾದ ಹೊಲಸಿಕ್ಕಿತೆಂದೂ, ಯಾರು ಬೇಕಾದರೂ ಅಲ್ಲಿ ಹೋಗಬಹುದೆಂದೂ ಬೆಳೆ ಬೆಳೆಸಲು ಅದು ಸಿದ್ಧವೆಂದೂ ಅವಳನ್ನು ಅಪಹಾಸ್ಯ ಮಾಡುತ್ತಾರೆ. ಜಗನ್‌ಳಿಗೆ ಹತ್ತಿರ ಬಂದ ಗಂಡಸು ಯಾರಾದರೂ ಗಂಡನಂತೆ ಅವನನ್ನ ಒಪ್ಪಿಕೊಳ್ಳಬೇಕೆಂದೂ, ಹಳ್ಳಿಯಲ್ಲಿ ಬದುಕಿರಲು ಅವರ ಬೆಂಬಲ ಬೇಕಾಗುವುದರಿಂದ ಯಾರನ್ನೂ ತಿರಸ್ಕರಿಸಿ ಅವಳು ನೋಯಿಸಬಾರದೆಂದೂ ಪೂಜಾರಿಯು ಉಪದೇಶಿಸುತ್ತಾನೆ. ಇಂತಹ ಗಂಡಸರಿಗೆ ತನ್ನನ್ನು ಒಪ್ಪಿಸಿಕೊಳ್ಳುವುದಕ್ಕೆ ದೇವರ ಅನುಗ್ರಹವೆಂದು ಭಾವಿಸು ಎಂದು ಉಪದೇಶಿಸಲಾಗುತ್ತದೆ. 'ದೇವನಾರಿ' ನಾಟಕದಲ್ಲಿ ಇನಾಂದಾರನು ದೇವಸ್ಥಾನಕ್ಕೆ ತಾನು ಆರ್ಥಿಕ ನೆರವು ನೀಡಿರುವುದರಿಂದ ಆ ದೇವರಿಗೆ ಬಿಡಲಾಗಿರುವ ದ್ರೌಪದಿ ಜೋಗಿತಿಯ ಮೇಲೆ ತನಗೆ ಹಕ್ಕು ಇದೆ ಎಂದು ವಾದ ಹೂಡುತ್ತಾನೆ. ಆದರೆ ದೇವಾಲಯದ ಪೂಜಾರಿ ದೇವರೇ ತನ್ನ ಮೈಮೇಲೆ ಬಂದು ದ್ರೌಪದಿಯನ್ನು ತನಗೆ ಮೀಸಲಾಗಿರುವಂತೆ ಆದೇಶಿಸಿರುವುದಕ್ಕಾಗಿ ಹೇಳಿ ವಂಚಿಸುತ್ತಾನೆ.

'ದೇವನಾರಿ' ನಾಟಕದಲ್ಲಿ ಒಬ್ಬ ಜೋಗಿತಿ ತೀವ್ರವಾದ ಕಾಯಿಲೆಯಿಂದ ಮಗನು ನರಳುತ್ತಿದ್ದರೂ ಗಂಡನೊಬ್ಬನಿಗೆ ಲೈಂಗಿಕ ಸೇವೆ ಒದಗಿಸಲೇಬೇಕಾದ ನಿರ್ಬಂಧಕ್ಕೆ ತನ್ನ ಮಗನನ್ನೇ ಕಳೆದುಕೊಂಡ ದಾರುಣ ಚಿತ್ರವಿದೆ. ಜೋಗಿತಿಯನ್ನು ನಗರದ ವೇಶ್ಯಾವಾಟಿಕೆಗೆ ಮಾರುವುದಕ್ಕೂ ಇದೇ ಬಗೆಯ ಒತ್ತಡ, ನಿರ್ಬಂಧಗಳ ಅಸ್ತ್ರವು ಬಳಕೆಯಾಗುತ್ತದೆ. ಹಾಗೆ ವೇಶ್ಯಾವಾಟಿಕೆ ಸೇರಿದ ಒಬ್ಬ ಜೋಗಿತಿ ಆರಂಭದಲ್ಲಿ ತನ್ನ ಸವಲತ್ತಿನಿಂದ ಅಲ್ಲಿನ ಇತರ ಹೆಂಗಸರನ್ನು ಬೆರಗಿಗೆ ಗುರಿಮಾಡಿದರೂ ಕೊನೆಯಲ್ಲಿ ಗುಹ್ಯ ರೋಗದ ಸೋಂಕಿಗೆ ಬಲಿಯಾಗಿ ನರಳಿ ಪ್ರಾಣಬಿಡುವುದನ್ನು ಆ ನಾಟಕವು ನಿರೂಪಿಸುತ್ತದೆ.

ಹೀಗೆ ಮೀಸಲು ಹೆಣ್ಣಾಗಿರುವ ಸ್ಥಿತಿ ಒಬ್ಬ ಜೋಗಿತಿಯನ್ನು ಬಹುಸಂಖ್ಯೆಯ ಪುರುಷರಿಗೆ ಬಲಾತ್ಕಾರವಾಗಿ ಲೈಂಗಿಕಸೇವೆ ನೀಡುವ ಜಾಗದಲ್ಲಿ ಇರಿಸಿರುತ್ತದೆ. ಬದುಕಿಗೆ ಬೇರೆ ದಾರಿಗಳಾವುದೂ ಇಲ್ಲ; ಬೇರೆ ವೃತ್ತಿಗಳ ಆಯ್ಕೆಗೆ ಆಸ್ಪದವಿಲ್ಲ. ಒಬ್ಬ ಮನುಷ್ಯನನ್ನು ಮದುವೆಯಾಗಿ ಬೆಂಬಲ ಪಡೆಯಲು ಅಥವಾ ಗೌರವಾರ್ಹವಾದ ಬೇರೆ ಯಾವುದೇ ದುಡಿಮೆಗೂ ಅವಳಿರುವ ಸಮಾಜ ಅವಳಿಗೆ ಅವಕಾಶ ನೀಡುವುದಿಲ್ಲ, ಅದಕ್ಕೆ ಪ್ರೋತ್ಸಾಹಿಸುವುದೂ ಇಲ್ಲ. ಸುಲೀ ಇತರರೊಂದಿಗೆ ಹೊಲದ ಕೂಲಿ ಕೆಲಸಕ್ಕೆ ಹೊರಟರೆ, ಅವಳ ಲೈಂಗಿಕ ಅಂಕಿತವೇ ಗೇಲಿಯ ವಿಷಯವಾಗಿ, ಅವಳಿಗೆ ದುಡಿಯಲು ಕೆಲಸ ಸಿಗುವುದಿಲ್ಲ. ಜಗನ್‌ಳಿಗೆ ದುಡಿದು ಕೂಲಿ ಗಳಿಸ ಹೊರಟರೆ ಗರತಿಯಂತೆ ವೇಷ ಧರಿಸಿದ್ದಾಳೆಂದು, ದೈಹಿಕ ಶ್ರಮದ ಕೆಲಸ ಅವಳಿಗೆಲ್ಲಿ ಸಾಧ್ಯವೆಂದು, ಸೂಳೆಗಾರಿಕೆಯಷ್ಟೇ ಅವಳಿಂದಾಗುವ ಕೆಲಸವೆಂದೂ ಬಗೆಬಗೆಯಾಗಿ ಅವಳನ್ನು ಆಡಿಕೊಂಡು ಹಂಗಿಸುತ್ತಾರೆ. ಅವಳಂಥವಳೊಂದಿಗೆ ದುಡಿಯಲು ಗರತಿಯರು ಸಿದ್ಧರಿಲ್ಲ, ಅವಳು ಬಂದರೆ ಗಂಡಸರ ಲಕ್ಷ್ಯ ಸೆಳೆದಾಳೆಂದು ನೆಪಹೇಳಿ ಅವಳಿಗೆ ಕೂಲಿ ಕೆಲಸವನ್ನು ನಿರಾಕರಿಸಲಾಗುತ್ತದೆ.

ಜೋಗ್ತನೊಬ್ಬ ಮೀಸಲಿಟ್ಟ ಬದುಕುಬಿಟ್ಟು ಓಡಿಹೋದದ್ದು ತಿಳಿದು ಜಗನ್, ತನಗೆ ಜೋಗಿತಿ ದೀಕ್ಷೆ ಕೊಡಲು ನೆರವಾಗಿದ್ದಾಕೆಯೇ ತನ್ನನ್ನು ವೇಶ್ಯಾವಾಟಿಕೆಗೆ ಮಾರಲು ಯೋಜನೆ ಮಾಡಿದ್ದಾಳೆಂಬುದು ಗೊತ್ತಾದಾಗ, ತಾನೂ ಆ ಬದುಕಿನಿಂದ ಪಲಾಯನಕ್ಕೆ ಯತ್ನಿಸುತ್ತಾಳೆ. ಆದರೆ ಅದರಲ್ಲಿ ಸೋಲುತ್ತಾಳೆ. ಜೋಗ್ತ ತಾಯಪ್ಪ ಹೆಣ್ಣಿನಂತೆ ವೇಷ ತೊಡಲು ಹೇಸುತ್ತಾನೆ. ಗಂಡಸರಂತೆ ಬಟ್ಟೆ ಹಾಕಲು, ಅವರ ಹಾಗೆ ಕೆಲಸಗಳಲ್ಲಿ ತೊಡಗಲು ಆಸೆ ಪಡುತ್ತಾನೆ. ಆದರೆ ಹಾಗೆ ಬದುಕಲು ಜನ ತನ್ನನ್ನು ಬಿಡುತ್ತಾರೆ ಎಂಬ ಬಗ್ಗೆ ಅವನಿಗೇ ಅನುಮಾನವಿದೆ. ಬೇರೆ ಜೋಗ್ತರೆಲ್ಲ ತಮ್ಮ ನಿಗದಿತ ಜೀವನ ಕ್ರಮದಲ್ಲೇ ಬದುಕುವಾಗ ಮಾಯಪ್ಪ ಎಂಬ ಜೋಗ್ತನೊಬ್ಬ ಮಾತ್ರ ಪೌಲ್ಟ್ರಿ ಫಾರಂ ಅನ್ನು ನಡೆಸತೊಡಗಿದ್ದನ್ನೂ ಅವನನ್ನು ಸಮಾಜ ಹೇಗೆ ಬಹಿಷ್ಕೃತನಂತೆ ಕಾಣುತ್ತಿತ್ತು ಎಂಬುದನ್ನೂ 'ಭಂಡಾರ್ ಭೋಗ್' ಚಿತ್ರಿಸುತ್ತದೆ.

ಮರ್ಯಾದೆ ಸಿಗುವ ಜೀವನೋಪಾಯಗಳೂ, ಸ್ತ್ರೀಯ ಜೊತೆಗಿನ ಲೈಂಗಿಕ ಸಂಬಂಧಗಳೂ ಜೋಗ್ತನಿಗೆ ನಿರಾಕೃತವಾಗಿರುತ್ತವೆ. ಪರಿಣಾಮವಾಗಿ ಹಣ ಮತ್ತು ಲೈಂಗಿಕತೆಯ ವಿನಿಮಯದ ದುಡಿಮೆಗೆ ಅವನಿಗೆ ದೀಕ್ಷೆ ನೀಡಲಾಗುತ್ತದೆ. ಸೀಮಾಂತದ ನೆಲೆಯ, ಕಳಂಕಿತವೆನಿಸುವ ದುಡಿಮೆಯಿಂದ ಪಾರಾಗಲು ಜೋಗಿತಿಯರು ಮದುವೆ ಆಗುವೆ ಎನ್ನುವ ಮೇಲ್ಜಾತಿಯ ಪುರುಷನೊಬ್ಬನ ಜೊತೆ ಝುಳ್ವಾ ಸಂಬಂಧಕ್ಕೆ ಒಪ್ಪುತ್ತಾರೆ. ಅವನಿಂದ ನ್ಯಾಯಯುತವಾಗಿ ಮಕ್ಕಳನ್ನು ಪಡೆದು ಸಂಸಾರ ನಡೆಸಲು ಯತ್ನಿಸುತ್ತಾರೆ. ಆದರೆ ಇವರು ಗರ್ಭಿಣಿ ಯಾದುದೇ ತಡ ಇವರ ಸಂಗಾತಿಗಳು ಕೊಟ್ಟ ಭಾಷೆ ಮುರಿದು, ಇವರನ್ನು ವಂಚಿಸಿ, ಜೀವನಕ್ಕೆ ಯಾವುದೇ ನೆರವನ್ನೂ ನೀಡದೆ, ಪಲಾಯನ ಮಾಡುವುದನ್ನು ಈ ಸಾಹಿತ್ಯ ಪಠ್ಯಗಳು ಬೆಳಕಿಗೆ ತರುತ್ತವೆ.

ಮದುವೆ ಸಾಧ್ಯವಾಗದ್ದರಿಂದ ತುಲನಾತ್ಮಕವಾಗಿ ಸ್ಥಿರವಾದ ಝುಳ್ವಾ ಸಂಬಂಧದ ಯತ್ನಕ್ಕೆ ಜೋಗಿತಿಯರು ಕೈಹಾಕುತ್ತಾರೆ. ಈ ಸಂಬಂಧ ಅವರಿಗೆ ಸತೀತ್ವದ ಹಕ್ಕನ್ನೂ ಅವಳ ಜೀವನಕ್ಕೆ ಭದ್ರತೆ, ಮಕ್ಕಳಿಗೆ ತಂದೆಯ ಹೆಸರನ್ನೂ ದೊರಕಿಸಿಕೊಡಬಲ್ಲದು. ಎಲ್ಲ ಗಂಡಸರನ್ನೂ ಸಂತೃಪ್ತಿಪಡಿಸಬೇಕಾದ ಸ್ಥಿತಿಗಿಂತ ಇದೆಷ್ಟೋ ಮರ್ಯಾದೆಯ ಜಾಗವೂ ಹೌದು. ಆದರೆ ಈ ಅವಕಾಶ ಜೋಗಿತಿಗೆ ದೊರಕಲು ಎಷ್ಟೆಷ್ಟೋ ಹೋರಾಟ ಆಕೆ ಮಾಡಬೇಕಾಗುವುದನ್ನು ಸಾಹಿತ್ಯ ಸಂಕಥನಗಳು ಎತ್ತಿ ತೋರಿಸುತ್ತವೆ.

ಜೋಗಿತಿಯೊಂದಿಗಿನ ಝುಳ್ವಾ ಸಂಬಂಧ ಕೂಡ ಗಾವಿಗಡದ ಒಳಗೆ ವ್ಯವಸ್ಥೆಯ ನಿಯಂತ್ರಣಕ್ಕೆ ಒಳಪಟ್ಟದ್ದು. ಮೇಲ್ಜಾತಿ ಗಂಡಸರು ಜೋಗಿತಿಯಂಥ ಕೆಳಜಾತಿ ಹೆಣ್ಣಿನೊಂದಿಗೆ ಸ್ಥಿರ ಸಂಬಂಧವನ್ನು ಹೊಂದುವುದು ಆ ವ್ಯವಸ್ಥೆಗೆ ಖಂಡನಾರ್ಹವೆಂದು ಕಾಣುತ್ತದೆ. ಬಾಬ್ಯಾ, ಜಯಂತ, ರಾವ್‌ಸಾಹೇಬರಂಥ ಎಷ್ಟೋಜನ ಮೇಲ್ಜಾತಿಯ



ಗಂಡಸರನ್ನು ಅವರ ಮನೆ ಜನರೂ, ಜಾತಿ ಬಂಧುಗಳೂ ಜೋಗ್ತಿಯರ ಜೊತೆ ಸಂಬಂಧವನ್ನು ಕಡಿದುಕೊಳ್ಳುವುದಕ್ಕಾಗಿ ಆಗ್ರಹಿಸಿ ಒತ್ತಡ ಹೇರುತ್ತಾರೆ.

ಹೀಗೆ ಅನ್ಯಾಯ, ವಂಚನೆಗೆ ಒಳಗಾದ ಜೋಗ್ತಿಗೆ ಗಾವಗಡದ ಚೌಕಟ್ಟಿನಲ್ಲಿ ಇತರ ಮೇಲ್ಜಾತಿ ಪುರುಷರ ಬಳಿ ದೂರು ಕೊಂಡೊಯ್ಯಲು ಅವಕಾಶವಿದೆ. ಆದರೆ ಸಿಕ್ಕುವ ತೀರ್ಪು ಮೇಲ್ಜಾತಿ ಪುರುಷರ ಪರವಾಗಿರುವ ಸಾಧ್ಯತೆಯೇ ಹೆಚ್ಚು. ತಮ್ಮದೇ ಜಾತಿಯ ಪುರುಷ ರೊಂದಿಗೆ ಝುಳ್ವಾಕ್ಕೆ ಯತ್ನಿಸಿ ಅನ್ಯಾಯಕ್ಕೆ ಒಳಗಾಗಿದ್ದರೆ, ಆ ಜಾತಿ ಪಂಚಾಯಿತಿಯ ಮೂಲಕ ಸಂಬಂಧಿತ ವ್ಯಕ್ತಿಯ ಮೇಲೆ ಒತ್ತಡ ತರಲು ಸಾಧ್ಯವಿರುತ್ತದೆ. ಆದರೆ ಯಾಜಮಾನ್ಯ, ಪುರೋಹಿತಶಾಹಿ, ಮೇಲ್ಜಾತಿ ಹಿತಾಸಕ್ತಿ ಮುಂತಾದ ಸಂರಚನೆಗಳು ಜೋಗಿತಿಯ ಇಂಥ ಮರ್ಯಾದಸ್ಥ ಜೀವನದ ಪ್ರಯತ್ನವನ್ನು ಮುರಿಯಲಿಕ್ಕೆ ಒತ್ತು ಕೊಡುತ್ತವೆ ಎನ್ನುವುದು ಸಾಹಿತ್ಯ ಪಠ್ಯಗಳಿಂದ ವ್ಯಕ್ತವಾಗುತ್ತದೆ.

ತಾಯಪ್ಪ ಮತ್ತು ಜೋಗಿತಿಯೊಬ್ಬಳ ಸಂಬಂಧವನ್ನು ಮುರಿದು ಆಕೆಯ ಲೈಂಗಿಕ ದುಡಿಮೆ ಎಲ್ಲ ಗಂಡಸರಿಗೂ ಲಭ್ಯವಾಗುವಂತೆ ಮಾಡುವುದು; ಶಿಂಗಾರಿ ಮೀಸಲು ಬದುಕನ್ನು ಬಿಟ್ಟು ಸಾಮಾನ್ಯರಂತೆ ಸಂಸಾರ ನಡೆಸಲು ಯತ್ನಿಸಿದ್ದನ್ನು ಹಳ್ಳಿಯ ಜನರೇ ತಪ್ಪಿಸುವುದು, ಕೆಳಜಾತಿಯ ಎಳೆಯ ವಯಸ್ಸಿನ ಹುಡುಗಿಯರನ್ನು ದೇವರಿಗೆ ಬಿಡಿರೆಂದು ಪೂಜಾರಿಗಳೂ ಮೇಲ್ಜಾತಿ ಪುರುಷರೂ ಪ್ರಚೋದಿಸುವುದು ಮುಂತಾದುವೆಲ್ಲ ಇಂತಹ ಉದಾಹರಣೆಗಳು. ಒಂದು ಕಾಲಕ್ಕೆ ಜ್ಯೋತಿಬಾಫುಲೆಯವರಿಂದ ಗೌರವಾನ್ವಿತವಾಗಿದ್ದ ಸತ್ಯಶೋಧಕ ಗ್ರಾಮದಲ್ಲಿ ಇನಾಂದಾರನೊಬ್ಬ ಎಲ್ಲಮ್ಮ ದೇವಿಯ ಆರಾಧನೆಯನ್ನು ಪ್ರಾರಂಭಿಸಿ ದೇವದಾಸಿ ಪದ್ಧತಿಯನ್ನು ಪ್ರೋತ್ಸಾಹಿಸುವುದನ್ನು 'ನಾಪಟ್' ವಿಡಂಬಿಸಿ ಚಿತ್ರಿಸುತ್ತದೆ. 'ದೇವದಾಸಿ' ನಾಟಕದಲ್ಲಿ ಶಿವಮಹರನನ್ನು ಅವನ ಮಗಳು ಶಿಂಗಾರಿಯನ್ನು ದೇವದಾಸಿಯನ್ನಾಗಿ ಮಾಡಲು ಒತ್ತಾಯಿಸಬೇಕೆಂದು ಹೇಳಿ ಊರ ಪಾಟೀಲನು ಪೂಜಾರಿಗೆ ಲಂಚ ಕೊಡುವುದರ ಚಿತ್ರಣವಿದೆ. ಇಂತಹ ವ್ಯವಸ್ಥೆಯೊಳಗೆ ವಂಚನೆ, ದ್ರೋಹಕ್ಕೆ ಬಲಿಯಾಗುವ ಜೋಗಿತಿಯರು ದೂರು ಕೊಂಡೊಯ್ಯಲು ಇರುವ ಅವಕಾಶ ತೀರ ಕಿರಿದು.

ಧಾರ್ಮಿಕ ವಿಧಿ, ಸಾಂಸ್ಕೃತಿಕ ದುಡಿಮೆ, ಲೈಂಗಿಕ ದುಡಿಮೆಯ ಒಳನೇಯ್ಗೆ

ಹಳ್ಳಿಯಲ್ಲಿ ಜೋಗಿತಿ ಕಳಂಕಿತ ಪದಾರ್ಥವೆಂದು ತಿರಸ್ಕಾರಕ್ಕೆ ಬಲಿಯಾಗಿದ್ದರೂ ಧಾರ್ಮಿಕವಾದ ವಿಶಿಷ್ಟ ವಿಧಿಯ ತಜ್ಞೆಯಾಗಿ, ದೇವಿಯ ಪ್ರತಿನಿಧಿ ಎಂಬ ಗೌರವವೂ ಅವಳಿಗೆ ಸಲ್ಲುತ್ತದೆ. ಈ ವಿಧಿಯನ್ನು ನೆರವೇರಿಸುವ ಅವಕಾಶ ಅವಳಿಗೆ ಸಿಗುವುದು ಅವಳ ಸತೀತ್ವ ಮತ್ತು ಪರಿಶುದ್ಧತೆಯನ್ನು ಅವಲಂಬಿಸಿರುತ್ತದೆ. ಆ ಧಾರ್ಮಿಕ ವಿಧಿಯ ಅಂಗವಾಗಿ ಅವಳು ಜೋಗ್ವಾಕ್ಕೆ ಹೋಗುವುದು, ಹಾಡುವುದು, ಕುಣಿಯುವುದೇ ಮುಂತಾದ ದೇವಿಯ ಪ್ರೀತ್ಯರ್ಥವಾದ ಕ್ರಿಯೆಗಳನ್ನೂ ನಡೆಸಬೇಕಾಗುತ್ತದೆ. ಇಲ್ಲಿರುವ ವಿರೋಧಾಭಾಸ ಎಂದರೆ ಈ ಧಾರ್ಮಿಕ-ಸಾಂಸ್ಕೃತಿಕ ಕೆಲಸಗಳೇ ಅವಳನ್ನು 'ಉಂಡಗಿ' ಸ್ವೈರಿಣಿ ಯನ್ನಾಗಿ ಮಾಡಿ ಲೈಂಗಿಕ ದುರ್ಬಳಕೆಗೆ ಸುಲಭವಾಗಿ ಲಭ್ಯಳಾಗುವಂತೆ ಮಾಡುತ್ತವೆ. ಇಂಥ ಸ್ಥಿತಿಯಲ್ಲಿ ಅವಳ ಸತೀತ್ವ, 'ಪಾವಿತ್ರ್ಯ'ಗಳನ್ನು ಕಾಯ್ದುಕೊಳ್ಳುವುದು ಕಠಿಣವಾಗುತ್ತದೆ.

ನಿಷ್ಠೆಯಿಂದ ಸತೀತ್ವದೊಂದಿಗೆ ಬದುಕುತ್ತಿರುವವರೆಗೆ ಅವಳಿಗೆ ಗೌರವ ಸಿಗುತ್ತದೆ. ಅವಳ ಸಲಹೆ, ಉಪದೇಶಗಳನ್ನು ಜನ ಭಯಭಕ್ತಿ ಗಳಿಂದ ಒಪ್ಪಬಹುದು, ಅವಳಿಗೆ ವಿಶೇಷ ದೈವಿಕ ಶಕ್ತಿಯಿದೆಯೆಂದೂ ಅವಳು ಯಾರಿಗೂ ಕೇಡು ಮಾಡಬಲ್ಲಳೆಂದೂ, ಗಂಡಸರ ಗಂಡಸ್ತನ ವನ್ನು ನಾಶ ಮಾಡಿಬಿಡಬಹುದೆಂಬ ಹೆದರಿಕೆ ಆತಂಕಗಳೂ ಅವಳನ್ನು ಭಯಭಕ್ತಿಗಳಿಂದ ನೋಡಲು ಕಾರಣವಾಗಿರುತ್ತವೆ. ಹೀಗೆ ಮರ್ಯಾದೆ ಯಿಂದ ಬಾಳಿಹೋದ ಜೋಗಿತಿಯರನ್ನು ಧಾರ್ಮಿಕ ಸಂದರ್ಭಗಳಲ್ಲಿ ಸ್ಮರಿಸಿ, ಕೊಂಡಾಡಿ ಪೂಜಿಸುವುದೂ ಇದೆ.

ಹೀಗಿದ್ದರೂ ಜೋಗಿತಿಯರೂ ಜೋಗ್ತರೂ ಎಷ್ಟು ನಿಕೃಷ್ಟರೆನಿಸಿರು ತ್ತಾರೆ ಎಂದರೆ ಅವರು ತೀರಿಕೊಂಡಾಗ ಗೌರವಯುತವಾದ ಅಂತ್ಯಸಂಸ್ಕಾರಕೂಡ ಅವರಿಗೆ ದುರ್ಲಭವಾಗಬಹುದು. 'ಚೌಂಡ್‌ಕಾ' ಕಾದಂಬರಿಯಲ್ಲಿ ಒಬ್ಬ ವೃದ್ಧ ಜೋಗಿತಿ ಸತ್ತಾಗ ಅವಳನ್ನು ಎಲ್ಲಿ ಮಣ್ಣು ಮಾಡಬೇಕು ಎಂಬ ಬಗ್ಗೆ ಬಲವಾದ ವಾದವಿವಾದ ಹುಟ್ಟಿದರೂ ಏನೂ ತೀರ್ಮಾನವಾಗುವುದಿಲ್ಲ. 'ಭಂಡಾರ್ ಭೋಗ್'ದಲ್ಲಿ ಒಬ್ಬ ಜೋಗ್ತ ತೀರಿಕೊಂಡಾಗ ರಾತ್ರಿಯ ವೇಳೆಯಲ್ಲಿ ಪ್ರಾಣಿಗಳನ್ನು ಹೂಳುವ ಸ್ಥಳದಲ್ಲಿ ಅವನ ಶವಕ್ಕೆ ಕೆಲವೇ ಜೋಗ್ತರು ಸೇರಿ ಮಣ್ಣು ಕಾಣಿಸುವುದರ ಚಿತ್ರಣವಿದೆ.

ಹಳ್ಳಿಗಳಲ್ಲಿ ತಂದೆ-ತಾಯಿಯರು ತಮ್ಮ ಮಕ್ಕಳನ್ನು ದೇವರಿಗೆ ಮೀಸಲು ಬಿಡುವಂಥ ನಿರ್ಧಾರಕ್ಕೆ ಬರುವ ಸಂದರ್ಭಗಳು ಅವರಿಗೆ ಅತ್ಯಂತ ಯಾತನೆಯದಾಗಿರುತ್ತವೆ. ದೇವರಲ್ಲಿ ಅಪಾರ ನಂಬಿಕೆ, ಶ್ರದ್ಧೆಯುಳ್ಳ ಅವರು ಬದುಕಿನಲ್ಲಿ ಬಲವಾದ ಕಷ್ಟಕಾರ್ಪಣ್ಯಗಳು ಎಡೆಬಿಡದೆ ಕಾಡತೊಡಗಿದಾಗ, ಅವುಗಳನ್ನು ಪರಿಹರಿಸಲು ಆರ್ಥಿಕ ಶಕ್ತಿಯಿಲ್ಲದೆ ಮಕ್ಕಳನ್ನು ದೇವರಿಗೆ ಒಪ್ಪಿಸಿದರೆ ಪರಿಹಾರ ಸಿಗಬಹುದೆಂದು ನಂಬಿರುತ್ತಾರೆ. 'ಭಂಡಾರ್ ಭೋಗ'ದಲ್ಲಿ ತಾಯಪ್ಪನಿಗೆ ಬಾಲ್ಯದಲ್ಲಿ ತೀವ್ರವಾಗಿ ಕಾಯಿಲೆಯಾಗಿದ್ದಾಗ, ಬಡತನವಿದ್ದರೂ ಔಷಧಿ-ಚಿಕಿತ್ಸೆ ಕೊಡಿಸಿರುತ್ತಾರೆ. ಆದರೆ ಅವೆಲ್ಲ ನಿಷ್ಫಲವಾದಾಗ ಒಬ್ಬ ಜೋಗಿತಿ ಆ ಹುಡುಗನನ್ನು ದೇವಿಗೆ ಮೀಸಲು ಬಿಡಲು ಸಲಹೆ ಕೊಡುತ್ತಾಳೆ. ದೇವಿ ತಾಯಪ್ಪನಿಗೂ ಕನಸಿನಲ್ಲಿ ಕಂಡಂತೆ ಅನ್ನಿಸಿದಾಗ ತಂದೆ-ತಾಯಿಯರು ಆಕೆಯ ಕೋಪವನ್ನು ಯೋಚಿಸಿ, ತಡಮಾಡದೆ ಮಗನನ್ನು ಮೀಸಲು ಬಿಡುವ ನಿರ್ಧಾರ ಮಾಡುತ್ತಾರೆ. ಅವರ ಜಂಟಿ ಕುಟುಂಬದ ಇತರ ಸದಸ್ಯರು ಈ ಬಗ್ಗೆ ವಿರೋಧ, ಭಿನ್ನಮತ ವ್ಯಕ್ತಪಡಿಸಿದರೂ ಅವರ ನಿರ್ಧಾರ ಬದಲಾಗುವುದಿಲ್ಲ.

'ಚೌಂಡ್‌ಕಾ'ದಲ್ಲಿ ಸುಬನ ಮಗಳು ಸುಲೀಯನ್ನು ದೇವಿಗೆ ಮೀಸಲು ಬಿಡುವಾಗ ಅಪ್ಪ-ಅಮ್ಮಂದಿರು ಹಲವು ಬಗೆಯ ಭೀತಿ, ಆತಂಕಗಳನ್ನು ಹೊಂದಿರುತ್ತಾರೆ. ದೇವದಾಸಿ ಸಂಪ್ರದಾಯದ ಮನೆತನ ಅವರದ್ದಲ್ಲ. ಹಾಗೆ ಬಿಟ್ಟರೆ ಮಗಳ ಭವಿಷ್ಯ ಗತಿಗೆಡುವ ಭೀತಿ. ಆದರೆ ಕಷ್ಟಗಳು ಒಂದಾದ ಮೇಲೆ ಒಂದರಂತೆ ನಿರಂತರ ಕಾಡತೊಡಗಿದಾಗ ಬೇರೆ ದಾರಿ ಕಾಣದೆ, ದೇವಿಯ ಕೆಟ್ಟ ನೋಟವನ್ನು ತಪ್ಪಿಸಲೆಂದು ಮಗಳನ್ನು ಜೋಗಿತಿಯಾಗಿ ಮಾಡುತ್ತಾರೆ. ದ್ರೌಪದಿಯ ತಂದೆ ತಾಯಿಯರು ತಮಗೆ ದೇವಿ ಗಂಡು ಮಗುವನ್ನು ಕೊಟ್ಟರೆ ಮಗಳನ್ನು ಆಕೆಗೆ ಒಪ್ಪಿಸುವುದಾಗಿ ಹರಕೆ ಹೊತ್ತಿದ್ದರು. ಪೂಜಾರಿಯೂ ಮಗಳು ಬೆಳೆದಂತೆಲ್ಲ ತಾಯ್ತಂದೆ ಗಳಿಗೆ ಹೊರೆಯೇ ಎಂದು ಅವರಿಗೆ ತಿಳಿಯ ಹೇಳುತ್ತಾನೆ. ದ್ರೌಪದಿಯ ತಂದೆ ತೀರಿಹೋದದ್ದನ್ನು ಹರಕೆ ನಡೆಸದೆ ಇರುವುದಕ್ಕೆ ದೇವಿ ಕೊಟ್ಟ ಶಿಕ್ಷೆ ಎಂದು ಅರ್ಥೈಸುತ್ತಾರೆ. ಪಾರುವಿನ ತಂದೆ ತಮ್ಮ ಮನೆತನದ ಸಂಪ್ರದಾಯ ಉಳಿಸಿಡಲೆಂದೇ ಮಗಳನ್ನು ಜೋಗಿತಿಯಾಗಿಸುತ್ತಾನೆ. ಜಗನ್ ಸ್ವತಃ ಜೋಗಿತಿಯ ಮಗಳು. ಹಾಗಾಗಿ ಬೇರೆರೀತಿ ಬದುಕುವ ದಾರಿ ಇಲ್ಲದೆಯೇ ಜೋಗಿತಿಯಾಗುತ್ತಾಳೆ. 'ದೇವನಾರಿ'ಯಲ್ಲಿ ಚಿತ್ರಸಿರುವ ರೀತಿಯಲ್ಲಿ ಕಷ್ಟಗಳು, ರೋಗ ರುಜಿನಗಳು ಸಾವು ನೋವುಗಳ ಸಂಕಟಗಳೆಲ್ಲಕ್ಕೂ ಜನರು ದೇವಿಗೆ ಹರಕೆ ಹೊತ್ತುಕೊಳ್ಳುವುದು ಮೇಲ್ಜಾತಿಗಳಲ್ಲೂ ಇದ್ದರೂ ಅವರಾರೂ ತಮ್ಮ ಮಕ್ಕಳನ್ನು ಅರ್ಪಿಸುವುದಿಲ್ಲ. ಕುರಿ, ಕೋಳಿ ದನ ಅಥವಾ ಹಣದ

ಕಾಣಿಕೆ ನೀಡಿ ಹರಕೆ ತೀರಿಸುತ್ತಾರೆ. ಆದರೆ ಕೆಳಜಾತಿಯ ಜನರು ಮಾತ್ರವೇ ತಮ್ಮದೇ ಮಕ್ಕಳನ್ನು ದೇವಿಗೆ ಅರ್ಪಿಸುವ ಮೂಲಕ ಅವಳನ್ನು ತೃಪ್ತಿಪಡಿಸುತ್ತೇವೆಂದು ನಂಬಿ ನಡೆಯುವವರು.

ಧಾರ್ಮಿಕ ವಿಧಿಗಳ ವಿಶೇಷತಜ್ಞೆಯಾಗುವ ಪಾತ್ರ ದೇವದಾಸಿಯ ಮುಖ್ಯ ಪಾತ್ರ, ಪ್ರತಿವಾರವೂ ಹಳ್ಳಿಯೊಳಗೆ ಜೋಗ್ವಾ ಪಡದು ಜನರನ್ನು ಹರಸುವ ಇವಳು ದೇವಿಯ ಪ್ರತಿನಿಧಿಯೆನಿಸುತ್ತಾಳೆ. ಜನರಿಗೆ ಸಲಹೆ, ಮಾರ್ಗದರ್ಶನ, ಉಪದೇಶ, ಮನೋರಂಜನೆಗಳನ್ನು ನೀಡುತ್ತಾಳೆ. ಸೌಂದತ್ತಿಯ ಎಲ್ಲಮ್ಮನ ದರ್ಶನಕ್ಕೆ ಯಾತ್ರೆ ಹೊರಟಾಗ ಜೋಗಿತಿಯೊಬ್ಬಳು ತಮ್ಮ ಜೊತೆಗಿರುವುದನ್ನು ಗೌರವಾರ್ಹವೆಂದು ಮೇಲ್ಜಾತಿಯವರೂ ಆಕೆಯನ್ನು ಆಹ್ವಾನಿಸುತ್ತಾರೆ.

ಜೋಗ್ವಾಅನ್ನು ಕೇವಲ ದೇವಿಯ ಪವಿತ್ರ ದಿನಗಳಂದು ಮಾತ್ರ ಪಡೆಯಬೇಕು, ಅದೂ ಕೇವಲ ಐದು ಮನೆಗಳಿಂದ, ಈ ನಿಯಮ ಮೀರಿದರೆ ಹೊಟ್ಟೆಪಾಡಿಗಾಗಿ ಭಿಕ್ಷೆ ಬೇಡುವ ರೀತಿಯ ಅಪಚಾರವೆಂದು, ಅದು ಅವಮಾನಕರವೆನಿಸುತ್ತದೆ. ದೇವಿಯ ಕೋಪವನ್ನು ಉಪಶಮನಗೊಳಿಸುವ ಪ್ರಾಯಶ್ಚಿತ್ತ ವಿಧಿಯಾಗಿ ಹಳ್ಳಿಯಿಡೀ ಭಿಕ್ಷೆಗಾಗಿ ಸುತ್ತಲಾಗುವುದನ್ನು ಸಾಹಿತ್ಯ ಪಠ್ಯಗಳು ನಿರೂಪಿಸುತ್ತವೆ.

ಧಾರ್ಮಿಕ ಸಂದರ್ಭಗಳಲ್ಲಿ ದೇವಿ ಮೈಮೇಲೆ ಬರುವ ಹಲವು ಸನ್ನಿವೇಶಗಳನ್ನು ಈ ಸಾಹಿತ್ಯ ಚಿತ್ರಿಸುತ್ತದೆ. 'ಜಾಗರಣ' ಎಂದರೆ ದೇವಿಯನ್ನು ಕೊಂಡಾಡುತ್ತಾ ಹಾಡಿ-ಕುಣಿಯುವ ಆರಾಧನಾ ವಿಧಾನ. ಇದರಲ್ಲಿ ಜೋಗಿತಿಯರು ತಮ್ಮ ಮೇಳದ ಜೊತೆ ಭಾಗವಹಿಸುವರು. ಅದಕ್ಕಾಗಿ ಮೇಳದ ಮ್ಯಾನೇಜರನ ಮರ್ಜಿಯನ್ನು ಇವರು ಅನುಸರಿಸಬೇಕು. ಅವನು ಇವರ ಜೊತೆ ಲೈಂಗಿಕ ಸಂಬಂಧಕ್ಕೆ ಯತ್ನಿಸಬಹುದು. ಅಥವಾ ದೈಹಿಕವಾಗಿ ಇವರು ದುರ್ಬಲರಾದಾಗ, ಮೇಳದಿಂದ ಇವರನ್ನು ಕಿತ್ತೊಗೆಯಬಹುದು. ಹಾಡಿ, ನರ್ತಿಸುವಾಗ ಭಕ್ತಿ, ಆವೇಶಗಳಿಂದ ಮೈಮರೆಯುವ ಜೋಗಿತಿ/ಜೋಗ್ತರನ್ನು ದೇವಿಯ ಜೊತೆ ತಮ್ಮ ಪರವಾಗಿ ಕೆಲಸಮಾಡಬಲ್ಲವರೆಂದು ತಿಳಿಯುವುದುಂಟು. ಕೆಲವು ಸಲ ತಮ್ಮ ಜೋಗಿತಿತನದ ವಿಷಮತೆ, ಸಂಕಟಗಳನ್ನು ಮರೆಯಲೂ ಹಾಡಿ-ಕುಣಿದು ಮೈಮರೆಯುವುದೂ ಅವರಿಗೆ ನೆರವಿಗೆ ಬರಬಹುದು. ಜಗನ್‌ಳಿಗೆ ಜೋಗ್ವಾಕ್ಕೆ ಹೋದಾಗ ಗಂಡಸರು ತನ್ನಲ್ಲಿ ತೋರುವ ಆಸಕ್ತಿ ಅಸಹನೀಯ. ಹಾಗಾಗಿ ಅವಳು ಭಕ್ತಿ ಭಾವದಿಂದ ಹಾಡಿನಲ್ಲಿ ಮೈಮರೆಯುತ್ತಿರುತ್ತಾಳೆ. ತಾಯಪ್ಪನಿಗೆ ತನ್ನ ಹೆಣ್ಣುವೇಷ ಹೇಸಿಗೆ ಹಾಗೂ ಮುಜುಗರ ತರುವಂಥದು. ಅವನು ಕುಣಿಯುವ ಕಲೆಯಲ್ಲಿ ಆವೇಶ ತಳೆದು ಜನರ ಮೆಚ್ಚುಗೆ ಪಡೆದು ತನ್ನ ಕಲೆಯಲ್ಲೇ ತಲ್ಲೀನನಾಗುತ್ತಾನೆ.

ದೇವಿಯೊಂದಿಗೆ ಜೋಗಿತಿ ಹೊಂದಿರುವ ಸಂವಾದಿಸಬಲ್ಲ ಶಕ್ತಿಯನ್ನು ಹೊಂದಿಕೊಂಡಂತೆ ಅವಳ ಧಾರ್ಮಿಕ ಮಹತ್ವವಿರುತ್ತದೆ. ಈ ಅಧಿಕಾರ ಪಡೆಯಲು ಸತೀತ್ವ, ಪಾವಿತ್ರ್ಯಗಳನ್ನು ಆಕೆ ರಕ್ಷಿಸಿಕೊಳ್ಳಬೇಕು. ಆ ಎರಡು ಸುಭದ್ರವಿರುವವರೆಗೆ ಅವಳಿಗೆ ಮರ್ಯಾದೆ ಗೌರವಗಳು ಸಲ್ಲುತ್ತಿರುತ್ತವೆ. ಸುಲೀ 'ಸ್ವೈರಿಣಿ' ಎಂದು ಕಳಂಕ ಹೊಂದುವ ಮೊದಲು ಧಾರ್ಮಿಕ ವಿಧಿಗಳನ್ನು ನೆರವೇರಿಸಲು ಜನ ಆಕೆಯನ್ನು ಕರೆಯುತ್ತಿರುತ್ತಾರೆ. ಪಾರು ಕೂಡ ಅಪವಿತ್ರತೆಯ ಮುದ್ರೆ ಬೀಳುವ ಮೊದಲು ಇನಾಂದಾರರು, ಮನೆಯವರ ಯಾತ್ರೆಗಳಲ್ಲಿ ಆಕೆಗೂ ಜೊತೆಗೂಡಲು ಅವಕಾಶವಿತ್ತು. ಈ ಗೌರವದ ಜಾಗದಿಂದ ಜೋಗಿತಿಯರು ನೀಡುವ ಸಲಹೆ, ತಿಳಿವಳಿಕೆಗಳೂ ಮಾನ್ಯವಾಗಿರುತ್ತವೆ. ಪವಿತ್ರಳಾದ ಜೋಗಿತಿಗೆ ಕೆಡಕು ಮಾಡುವ ಶಕ್ತಿ ಇರುವುದೆಂಬ ನಂಬಿಕೆ ಕೂಡ ಪ್ರಚಲಿತವೇ.

ಹೀಗೆ ಧಾರ್ಮಿಕ ವಿಧಿಯ ದುಡಿಮೆಯ ಜಾಗವೊಂದು ಜೋಗಿತಿ/ಜೋಗ್ತರಿಗೆ ಸತೀತ್ವ ಪಾವಿತ್ರ್ಯ ಗೌರವಗಳಿಗೆ ಅನುಗುಣವಾಗಿ ಸೃಷ್ಟಿಗೊಂಡಿದ್ದಾಗಿರುತ್ತದೆ. ಈ ಧಾರ್ಮಿಕ ಅಧಿಕಾರ ಪಡೆಯಲು ಪರಸ್ಪರ ಸೆಣಸಾಡುವುದು, ಮೈಮೇಲೆ ದೇವಿ ಆವೇಶವಾಗಿಸಿಕೊಂಡು ಜನರ ಲಕ್ಷ್ಯ ತನ್ನತ್ತ ಸೆಳೆಯುವುದು ಮುಂತಾದ ಅವರಲ್ಲಿ ಸಾಮಾನ್ಯ ಎನ್ನುವುದನ್ನು ಪಠ್ಯಗಳು ತೋರಿಸಿಕೊಡುತ್ತವೆ. ಜನರು ದೇವಿಗಾಗಿ ತರುವ ಕಾಣಿಕೆ, ಬಲಿ, ಹರಕೆಯ ವಸ್ತುಗಳನ್ನು ದೇವಿಗೆ ತಲುಪಿಸುವುದೂ ಜೋಗಿತಿಯ ಕೆಲಸವೇ. ಜಾಗರಣದಲ್ಲಿ ಗಾಯನ-ನರ್ತನ ವಿಧಿಯ ಸಮಾಪನವೂ ಇವರದೇ ಹೊಣೆ.

ಮೇಲುಜಾತಿಯ ಮರ್ಯಾದಸ್ಥ ಮಹಿಳೆಯರಾರೂ ಇವರ ಜೊತೆ ವ್ಯವಹರಿಸುವುದಿಲ್ಲ. ಹೀಗಾಗಿ ಜೋಗಿತಿಯರು, ತಮ್ಮೆಲ್ಲ ಜಾತಿ ಸಂಬಂಧಿತ ಶ್ರೇಣೀಕೃತ ಲಕ್ಷಣಗಳ ಸಮೇತವಾಗಿ ತಮ್ಮ ತಮ್ಮ ನಡುವೆಯೇ ಅಂತರ್ಜಾಲವೊಂದನ್ನು ರೂಪಿಸಿಕೊಂಡಿರುತ್ತಾರೆ. ಪರಸ್ಪರ ಬೆಂಬಲ, ನವದೀಕ್ಷಿತರಿಗೆ ಸಲಹೆ, ತರಬೇತಿ, ಸಹಕಾರಗಳನ್ನು ಒದಗಿಸುತ್ತಿರುತ್ತಾರೆ. ಗುರುಪೂಜೆ, ದೇವಿದರ್ಶನಾದಿ ಧಾರ್ಮಿಕ ನಿಯಮಿತ ವಿಧಿಗಳಿಗೆ ಒಟ್ಟಾಗಿ ಹೋಗಿ ನಡೆಸುವುದು ಸಾಮಾನ್ಯ. ಸಮಾಜ ಒಂದೇ ನಿರ್ದಿಷ್ಟ ಜೀವನಕ್ರಮವನ್ನು ಇವರಿಗೆ ವಿಧಿಸಿರುವುದರಿಂದ ಧಾರ್ಮಿಕ ಗೌರವ ಹಾಗೂ ಸಾಮಾಜಿಕವಾಗಿ ಅಂಚಿಗೊತ್ತರಿಸಲ್ಪಟ್ಟ ದಮನಿತ ಸ್ಥಿತಿಗಳು ಎರಡರಲ್ಲೂ ಇವರೆಲ್ಲರೂ ಸಮಾನರಾಗಿರುತ್ತಾರೆ.

ವೇಶ್ಯಾಗಾರಿಕೆ, ಗೌರವಾರ್ಹತೆ ಮತ್ತು ಬ್ರಾಹ್ಮಣೀಯ ಪಿತೃಸಂಸ್ಕೃತಿ

ಆಧುನಿಕ ಕಾಲದಲ್ಲಿ ವೇಶ್ಯಾಗಾರಿಕೆ ಎಂಬುದನ್ನು ವ್ಯಾಪಾರಾತ್ಮಕ ಲೈಂಗಿಕ ಹಿಂಸಾಚಾರವೆಂದು ಇಲ್ಲವೆ ಸ್ವಾಯತ್ತತೆ, ಸ್ವಾತಂತ್ರ್ಯವುಳ್ಳ ಲೈಂಗಿಕವೃತ್ತಿ ಎಂದು ಎರಡು ಧ್ರುವಗಳ ಪರಿಕಲ್ಪನೆಗಳಿಂದ ಗ್ರಹಿಸಲಾಗುತ್ತಿದೆ. ಈ ಎರಡು ಜಾಗಗಳೂ ವಿವಾಹದ ಮೂಲಕ ಸಿದ್ಧವಾಗುವ ಪತ್ನಿಯ ಹಕ್ಕಿನ ಜಾಗದೊಂದಿಗೆ ಅದಕ್ಕೆ ವಿರುದ್ಧವಾದದ್ದೆಂದೇ ಗೃಹೀತವಾಗಿರುತ್ತವೆ. 'ಕಳಂಕಿತ ಸೂಳೆ' ಅಥವಾ 'ಗೌರವಾರ್ಹ ಗರತಿ' ಎಂಬ ವಿರೋಧಿ ದ್ವಂದ್ವದಲ್ಲೇ ಈ ವೇಶ್ಯಾಗಾರಿಕೆ ನಿರ್ವಚಿತವಾಗುತ್ತದೆ. ಇವು ವಿರುದ್ಧಜಾಗಗಳಾದ್ದರಿಂದ ಒಂದಕ್ಕೊಂದು ಪರಕೀಯವೆಂದು ಭಾವಿಸಲಾಗುತ್ತದೆ. ಅಂದರೆ ಒಂದು ಜಾಗದಲ್ಲಿರುವ ಭದ್ರತೆ ಸವಲತ್ತುಗಳನ್ನು ಮತ್ತೊಂದರಲ್ಲಿ ಇರುವುದಿಲ್ಲವೆಂದು ಈ ದೃಷ್ಟಿಯಲ್ಲಿ ಭಾವಿಸಲಾಗುತ್ತದೆ. ಆದರೆ ಹಳ್ಳಿಗಳಲ್ಲಿನ ದೇವದಾಸಿ ಪದ್ಧತಿಯ ಆಚರಣೆಯ ಇದುವರೆಗಿನ ವಿಶ್ಲೇಷಣೆಯಿಂದ ಗುರುತಿಸಿರುವಂತೆ ಜಾತಿ ಸಂರಚನೆಗಳು ವೇಶ್ಯಾಗಾರಿಕೆಯನ್ನು ಸಂಘಟಿಸುವಲ್ಲಿ ತುಂಬ ನಿರ್ಣಾಯಕ ಪಾತ್ರ ವಹಿಸುತ್ತವೆ. ಈ ಅಂಶವನ್ನು ಮುಂಚೂಣಿಗೆ ತಂದದ್ದಾದರೆ ವೇಶ್ಯಾಗಾರಿಕೆ ಕುರಿತ ಪ್ರಚಲಿತ ತಿಳಿವಳಿಕೆಗೆ ಅದು ಸವಾಲೊಡ್ಡಬಲ್ಲದು.

ಜಾತಿ ಮತ್ತು ಪಿತೃಪ್ರಾಧಾನ್ಯಗಳು ಜಾತಿ-ಲಿಂಗ ಆಧರಿತ ಶ್ರಮ ವಿಭಜನೆಯ ಸಂಘಟನೆಗಾಗಿ ಪರಸ್ಪರ ಪೂರಕವಾಗಿ ಕೈಜೋಡಿಸಿರುತ್ತವೆ ಎಂಬುದನ್ನು ಸ್ತ್ರೀವಾದಿ ಅಧ್ಯಯನಗಳು ತೋರಿಸಿಕೊಟ್ಟಿವೆ. ಪಿತೃಪ್ರಾಧಾನ್ಯವು ಮಹಿಳೆಯರನ್ನು ಪತ್ನಿ-ವೇಶ್ಯೆ ಎಂದು ಧ್ರುವೀಕರಿಸಿರುವುದು ಮಾತ್ರವಲ್ಲ, ಅವರನ್ನು ಜಾತಿ ಶ್ರೇಣಿಗೆ ತಕ್ಕಂತೆ ಶ್ರೇಣೀ ಕರಿಸಿರುತ್ತವೆ. ಹೀಗಾಗಿ ಅವರ ಲೈಂಗಿಕ ದುಡಿಮೆ ಕೂಡ ಮೇಲು ಕೀಳಿನ ಮೌಲ್ಯಮಾಪನಕ್ಕೆ ಒಳಗಾಗಿರುತ್ತವೆ. ಮೇಲ್ಜಾತಿ ಪತಿಯರು ಮನೆಯೊಳಗಿನ ಸಂತಾನೋತ್ಪಾದನೆ ಮತ್ತು ಗೃಹ ದುಡಿಮೆಗೆ ಮೀಸಲಾಗಿದ್ದ, ಮನೆಯ ಹೊರಗಿನ ಉತ್ಪಾದಕ ದುಡಿಮೆ ಮತ್ತು ಗೃಹ ದುಡಿಮೆಗೆ ಮೀಸಲಾಗಿದ್ದ, ಮನೆಯ ಹೊರಗಿನ ಉತ್ಪಾದಕ ದುಡಿಮೆ ಮತ್ತು ದಾಂಪತ್ಯೇತರ ಲೈಂಗಿಕತೆಗಳಿಗೆ ಅವರ ಮೇಲೆ ನಿರ್ಬಂಧಗಳನ್ನು ಹೇರಲಾಗಿರುತ್ತದೆ. ಈ ಸ್ತ್ರೀಯರದು ಆರ್ಥಿಕ ಹಾಗೂ

ಸಾಂಕೇತಿಕ ರೂಪಗಳಲ್ಲಿ ಗೌರವಾರ್ಹವೆನಿಸುವ, ಸಾಮಾಜಿಕ ಮಾನ್ಯತೆಯುಳ್ಳ ಸವಲತ್ತಿನ ನೆಲೆಯೆಂದು ನೋಡಲಾಗುತ್ತದೆ.

ಇದಕ್ಕೆ ವಿರುದ್ಧವಾಗಿ ಕೆಳಜಾತಿಗಳ ಮಹಿಳೆಯರು (ಜೋಗಿತಿಯರು) ಪತ್ನಿಯರಾಗದ, ಲೈಂಗಿಕತೆಯನ್ನು ಧಾರ್ಮಿಕ–ಆರ್ಥಿಕ ಕಾರಣಗಳೊಂದಿಗೆ ವಿನಿಮಯ ಮಾಡುವ ದುಡಿಮೆಯ ಜಾಗಗಳಿಗೆ ಸಲ್ಲುತ್ತಾರೆ. ಆರ್ಥಿಕ ಭದ್ರತೆ, ಸಾಮಾಜಿಕ ಗೌರವಗಳೆರಡೂ ಇವರಿಗೆ ನಿರಾಕೃತವಾಗಿರುತ್ತವೆ. ಯಾವ ರೀತಿಯ ಬದುಕಿನ ಸವಲತ್ತಿನ ಜಾಗ ಇದಲ್ಲ. ಮೇಲ್ಜಾತಿಯ ಪುರುಷರ ಲೈಂಗಿಕ ಅಪೇಕ್ಷೆಗೆ ಸದಾ ಬಲಿಬೀಳುವ ಸ್ಥಿತಿಯನ್ನು ಪಿತೃಸಂಸ್ಕೃತಿಯ ಯಾಜಮಾನ್ಯ ವ್ಯವಸ್ಥೆ ಅವರಿಗೆ ರೂಪಿಸಿರುತ್ತದೆ. ಈ ಜಾಗದಲ್ಲಿ ಲೈಂಗಿಕ ಸ್ವಾತಂತ್ರ್ಯ, ಸ್ವಾಯತ್ತತೆ ಅಥವ ಸ್ವಯಿಚ್ಛೆಯ ಆಯ್ಕೆಯಾಗಲಿ, ಇದರಿಂದ ಲಭ್ಯವಾಗುವ ಆನಂದವಾಗಲಿ ಅಸಾಧ್ಯವೇ ಸರಿ.

ದೇವದಾಸಿ ಆಚರಣೆ ಸೃಷ್ಟಿಸುವ ವೇಶ್ಯಾಗಾರಿಕೆಯಲ್ಲಿ ಮರ್ಯಾದೆ ಅಥವಾ ಗೌರವಾರ್ಹತೆ ಕೂಡ ಮೇಲು–ಕೀಳುಗಳೆಂದು ಶ್ರೇಣೀಕರಣ ಗೊಂಡಿರುತ್ತದೆ. ಗಾವಗಡದ ಚೌಕಟ್ಟಿನೊಳಗೆ ಕೆಳಜಾತಿಗಳೂ, ಪತ್ನಿಯರಲ್ಲಿನ ಮಹಿಳೆಯರ ಲೈಂಗಿಕ ಸಂಬಂಧಗಳು ಮೂಲದಲ್ಲೇ ಕಳಂಕ ಹೊತ್ತಿರುವಂಥವಲ್ಲ. ಮೇಲ್ಜಾತಿ ಧರ್ಮಪತ್ನಿಯರ ಪಾವಿತ್ರ್ಯ ಗೌರವಗಳಿಗೆ ವಿರುದ್ಧವಾಗಿ ಇವರನ್ನು ಅಪವಿತ್ರರು, ಮರ್ಯಾದೆ ಗೇಡಿಗಳು ಎಂದು ಕಲ್ಪಿಸಿರುವುದೂ ಇಲ್ಲ. ಆದರೆ ಬ್ರಾಹ್ಮಣೀಯ ಪಿತೃಸಂಸ್ಕೃತಿ ಸ್ತ್ರೀ–ಪುರುಷರನ್ನು ಅವರ ಜಾತಿಗನುಗುಣವಾಗಿ ವಿಭಿನ್ನ ಲೈಂಗಿಕ ವಿನಿಮಯದ ಸಂಬಂಧಗಳಲ್ಲಿ ಇರಬೇಕಾದವರು ಎಂದು ಶ್ರೇಣೀಕರಿಸಿದ್ದು, ಇಂಥ ಶ್ರೇಣೀಕರಣದಿಂದಾಗಿ ಎಂದೂ ಬದಲಾಗದ್ದು ಅಥವಾ ತಾತ್ಕಾಲಿಕ, ಬಹುಸಂಗಾತಿಗಳುಳ್ಳದ್ದು ಅಥವಾ ಏಕವ್ಯಕ್ತಿನಿಷ್ಠ ವಾದದ್ದು ದ್ವಿಲಿಂಗಾತ್ಮಕ ಇಲ್ಲವೆ ಸಲಿಂಗ ಸಂಬಂಧಗಳೆಂದು ಮನೆಯ ಒಳಗಿನ ದುಡಿಮೆ ಅಥವಾ ಹೊರಗಿನ ಬಹುರೂಪಿ ದುಡಿಮೆ ಗಳ್ಳುಳ್ಳದ್ದೆಂದು ತಾರತಮ್ಯದಲ್ಲಿ ಸ್ತ್ರೀಯರ ಲೈಂಗಿಕ ದುಡಿಮೆ ಜಾಗಗಳು ಶ್ರೇಣಿಗಳಲ್ಲಿ ವಿಭಕ್ತವಾಗಿರುತ್ತವೆ. ಇದೇ ಕಾರಣಕ್ಕಾಗಿ 'ಗೌರವಾರ್ಹತೆ' 'ಮರ್ಯಾದೆ' ಎಂಬುದು ಮೇಲ್ಜಾತಿ ಮಹಿಳೆಯರ ಮೌಲ್ಯಗಳಾಗಿದ್ದರೆ, ಅದರ ಪರ್ಯಾಯಗಳಾದ ಸತ್‌ಪನ್ (ಸತೀತ್ವ), ಪಾವಿತ್ರ್ಯಗಳು ಕೆಳಜಾತಿ ಜೋಗಿತಿಯರಿಗಾಗಿ ಸೃಷ್ಟಿಗೊಂಡ ಮೌಲ್ಯಗಳಾಗಿರುತ್ತವೆ. ಈ ಕೆಳಜಾತಿಯ ಮೀಸಲುಗೊಂಡ ಮಹಿಳೆಯರು ಎಂದೆಂದೂ ಪತ್ನಿಯ ರಾಗದವರು. ಹೆಚ್ಚೆಂದರೆ 'ಝುಳ್ವಾ'ದ ಸಂಬಂಧದಲ್ಲಿ ತಮ್ಮ ಸತೀತ್ವ, ಗೌರವಾರ್ಹತೆಗಳನ್ನು ಅವರು ಹಕ್ಕೊತ್ತಾಯಿಸಬಹುದು. ಆದರೆ ಈ 'ಝುಳ್ವಾ' ದ ಸಂಬಂಧದ ಜಾಗಕ್ಕೆ ಅವರು ತಲುಪುವುದೂ ತುಂಬ ಪ್ರಯಾಸದ್ದು. ಆದ್ದರಿಂದ 'ಉಂಡಗಿ'ಯರೆಂದು ಮುದ್ರಿತರಾಗಿ ಅಪವಿತ್ರತೆ, ಸ್ವೇಚ್ಛಾಚಾರಗಳ ಕಳಂಕಿತ ಸ್ಥಿತಿಗಳಿಗೆ ಅಸಹಾಯಕರಾಗಿ ಒತ್ತರಿಸಲ್ಪಡುವವರು.

'ದೇವರ ಪತ್ನಿ' ಎಂಬ ಅಮೂರ್ತ ಧಾರ್ಮಿಕ ಗೌರವವೊಂದು ಜೋಗಿತಿಯರಿಗೆ ಅವರ ಧಾರ್ಮಿಕ ದುಡಿಮೆಗೆ ಹೊಂದಿಕೊಂಡಂತೆ ನೀಡಲಾಗುತ್ತದೆ. ಅದೇ ಹೊತ್ತಿನಲ್ಲಿ ಇಡೀ ಹಳ್ಳಿಯ ಪತ್ನಿಯೆಂದು ಹೀನೈಸುತ್ತಲೂ ಇರಲಾಗುತ್ತದೆ. ಹೀಗೆ ಗೌರವಾರ್ಹತೆ ಮರ್ಯಾದಸ್ಥ ಸ್ಥಿತಿಗಳು ಜಾತಿಗಳ ಮೂಲಕ ಶ್ರೇಣೀಕೃತವಾಗಿರುವುದರಿಂದಾಗಿ ಮಹಿಳೆಯರ ಲೈಂಗಿಕತೆಯೂ ಅವರ ದುಡಿಮೆಗಳೂ ಶ್ರೇಣೀಕೃತ ವಾಗಿರುತ್ತವೆ. ಯಜಮಾನ ವ್ಯವಸ್ಥೆಯಲ್ಲಿ ಮೇಲ್ಜಾತಿಗಳ ಧರ್ಮಪತ್ನಿಯರಿಗೆ ಗೌರವಾರ್ಹತೆ ಪಟ್ಟ ಸಿಗುವುದಾದರೆ ಇತರ ಜಾತಿಗಳ ಪತ್ನಿಯರು, ಪತ್ನಿಯರಲ್ಲದವರಿಗೆ ಬೇರೆ ಬೇರೆ ರೀತಿಯ ಗೌರವ ಮರ್ಯಾದೆಯ ಮಾದರಿಗಳಿರುತ್ತವೆ.

ಕೆಳಜಾತಿಯ ಜೋಗಿತಿಯರಿಗೆ ಜ್ಞಾನವು ನಿರಾಕೃತವಾಗಿರುತ್ತದೆ. ಉದ್ಯೋಗ ಭದ್ರತೆಯೂ ಅವರಿಗಿರುವುದಿಲ್ಲ. ತಂದೆ ತಾಯಿಗಳು ಮಗಳನ್ನು ಬಸವಿಯನ್ನಾಗಿ ಬಿಡಲು ಬಹುರೀತಿಯ ಹಿಂಜರಿಕೆ, ಆತಂಕ, ಆರ್ಥಿಕಾದಿ ಒತ್ತಡಗಳಿಂದಾಗಿ ಅಂಥ ನಿರ್ಧಾರ ಕೈಗೊಂಡಿರುತ್ತಾರೆ. ಜೀವನದ ಸಂಕಷ್ಟಗಳಿಂದ ಪಾರಾಗಲು ದೈವಶ್ರದ್ಧೆ, ಭೀತಿಗಳ ಕಾರಣ ದೇವದಾಸಿ ಪದ್ಧತಿಯನ್ನು ಉಳಿಸಿಡಲಾಗುತ್ತಿದೆ. ಈ ಸ್ಥಿತಿಯಲ್ಲಿ ಈ ಜೋಗಿತಿಯರ ವೇಶ್ಯಾಗಾರಿಕೆಯನ್ನು sex traficking ಎಂದೋ ಅಥವಾ sex work ಎಂದೋ ಸರಳೀಕರಿಸಿ ನೋಡುವುದು ಸಾಧ್ಯವಾಗುವುದಿಲ್ಲ. ಇವರ



ವೇಶ್ಯಾತನ ಸದಾ ಬಲಾತ್ಕಾರದ ವ್ಯಾಪಾರದ ಲೈಂಗಿಕ ಹಿಂಸೆ, ಶೋಷಣೆ ವ್ಯವಹಾರ ವೆನ್ನಲಾಗದು. ಏಕೆಂದರೆ ದೇವರಿಗೆ ಬಿಡುವುದೆಂಬ ಧಾರ್ಮಿಕ ನಂಬಿಕೆ, ಯಜಮಾನ ವ್ಯವಸ್ಥೆ ವಿಧಿಸಿದ ಸಾಮಾಜಿಕ ಅಪ್ಪಣೆಗಳು, ವಿಧಿನಿಷೇಧ ಗಳು ಅವರನ್ನು ಅನಿವಾರ್ಯವಾಗಿ ವೇಶ್ಯೆಯರಾಗುವಂತೆ ಮಾಡಿರುತ್ತವೆ.

ಒಮ್ಮೆ ಜೋಗಿತಿಯಾಗಿ ದೀಕ್ಷೆ ಪಡೆದರೆ ಮುಗಿಯಿತು. ಅವರಿಗೆ ಮದುವೆಗೆ, ಸ್ವತಂತ್ರ ಲೈಂಗಿಕ ಜೀವನಕ್ಕೆ, ಲೈಂಗಿಕೇತರ ದುಡಿಮೆಯ ಉದ್ಯೋಗಗಳಿಗೆ ದ್ವಾರವು ಮುಚ್ಚಿಹೋಗುತ್ತದೆ. ಸಮಾಜದ ಎಲ್ಲ ಪುರುಷರಿಗೂ ಸುಲಭ ಲಭ್ಯರಾಗಿ ದೇಹವನ್ನು ಒಪ್ಪಿಸುವಲ್ಲಿ ಸಾಮಾಜಿಕ ತೀರ್ಮಾನಗಳೇ ನಿರ್ಣಾಯಕವಾಗಿರುತ್ತವೆ. ಇಂಥಾದ್ದನ್ನು ಅವರೇ ಇಚ್ಛಿಸಿ, ಆಯ್ದುಕೊಂಡ ಸ್ವತಂತ್ರ, ಸ್ವಾಯತ್ತವಾದ ವೃತ್ತಿ ಎಂದು ಹೇಗೆ ತಾನೆ ಕರೆಯಬಹುದು?

ಸಮಾಜ ಮತ್ತು ಧರ್ಮ ಅವರನ್ನು ಸೇವೆಗೆ ಮೀಸಲಾದ ಜಾತಿಯವರೆಂದು ಸಾರಿರುತ್ತವೆ. ಜೋಗಿತಿ ಯರು ನಿರ್ವಹಿಸುವ ಧಾರ್ಮಿಕ ವಿಧಿಗಳೂ ಹೀಗೆಯೇ ಕೀಳುಜಾಗಕ್ಕೆ ಸಲ್ಲುತ್ತವೆ. ಸಾಮಾಜಿಕವಾಗಿ ಕೀಳು ಎನಿಸಿಕೊಂಡಿರುವ ದುಡಿಮೆಗಳಲ್ಲಿ ಉಳಿದಿರುವ, ಸಾಂಸ್ಕೃತಿಕ ದುಡಿಮೆ, ಭಿಕ್ಷಾಟನೆಗಳೇ ಬದುಕುವ ದಾರಿಗಳಾಗಿರುವಂಥ ಕೆಳಜಾತಿಯವರ ರೀತಿಯ ಪರಾವಲಂಬಿತ ಸ್ಥಾನವೇ ಜೋಗಿತಿಯರದೂ ಆಗಿರುತ್ತದೆ. ಇವರ ಲೈಂಗಿಕ ದುಡಿಮೆಯಲ್ಲಿ ಲೈಂಗಿಕ ಸ್ವಾತಂತ್ರ್ಯವಾಗಲಿ, ಸ್ವಾಯತ್ತತೆ, ಆನಂದಗಳಾಗಲಿ ಎಲ್ಲಿರಲು ಸಾಧ್ಯ? ಆದ್ದರಿಂದ ವೇಶ್ಯಾಗಾರಿಕೆ ಎಂಬುದರ ತಾತ್ತ್ವಿಕ ಪರಿಕಲ್ಪನೆ ಯನ್ನು ಧೃವೀಕರಿಸಿ ಸೈದ್ಧಾಂತೀಕರಿಸುವ ಯತ್ನಗಳು ಮರುಪರೀಕ್ಷೆಗೆ ಒಳಗಾಗಬೇಕಾದ ಅವಶ್ಯಕತೆ ಇದೆ. ಈ ಸಮಸ್ಯೆಯು ಸಂಕೀರ್ಣ ಸ್ವರೂಪವುಳ್ಳದ್ದಾಗಿದ್ದು ವಿರೋಧಿ ದ್ವಂದ್ವಗಳ ಮೂಲಕ ಅರ್ಥಮಾಡಲು ಹೊರಟರೆ ಈ ಸಂಕೀರ್ಣತೆಯನ್ನೇ ಅದು ಮರೆಸಿಬಿಡುವ ಅಪಾಯವಿದೆ. ಎಂಬುದನ್ನು ದೇವದಾಸಿಪದ್ಧತಿಯನ್ನು ಕುರಿತ ಸಾಹಿತ್ಯ ಸಂಕಥನಗಳಿಂದ ಅರಿಯಬಹುದಾಗಿದೆ. ❑

ನೀವೂ ಓದಿ

ಡಾ. ಚಂದ್ರಮತಿ ಸೋಂದಾ ಅವರ 'ನಾರಿಭಾವ'


● *ಬಿ.ಎನ್. ಸುಮಿತ್ರಾಬಾಯಿ*

'ಮೈಸೂರು ಮಿತ್ರ' ದಿನಪತ್ರಿಕೆಯಲ್ಲಿ ಚಂದ್ರಮತಿ ಸೋಂದಾ ಅವರು ಬರೆಯುತ್ತಿದ್ದ 'ನಾರಿಮಿಡಿತ' ಎಂಬ ಅಂಕಣದಲ್ಲಿ ಪ್ರಕಟವಾದ ಲೇಖನಗಳಲ್ಲಿ 50 ಲೇಖನಗಳ ಸಂಕಲನ 'ನಾರಿಭಾವ'. ನಮ್ಮ ಸಾಮಾಜಿಕ, ವೈಯಕ್ತಿಕ ಬದುಕುಗಳಲ್ಲಿ ಹಾಸುಹೊಕ್ಕಾಗಿರುವ ಅಸಮಾನತೆಗಳಲ್ಲಿ ಜಾತಿ, ವರ್ಗ, ವರ್ಣ, ಧರ್ಮ ಮುಂತಾದವುಗಳನ್ನು ಗ್ರಹಿಸುವಷ್ಟು ಸುಲಭವಾಗಿ ಲಿಂಗವ್ಯವಸ್ಥೆಯ ಅಸಮಾನತೆಯನ್ನು ಗ್ರಹಿಸಲಾಗುವುದಿಲ್ಲ. ಆದರೆ ಪ್ರೀತಿ, ಸವಲತ್ತು, ಬಾಂಧವ್ಯಗಳ ಹೆಸರಿನಲ್ಲಿ ದಿನದಿನವೂ ಮಹಿಳೆಯರು ತಾರತಮ್ಯಕ್ಕೆ ಒಳಗಾಗುತ್ತಲೇ ಇದ್ದರೂ ಪುರುಷಕೇಂದ್ರಿತ ಚಿಂತನೆಯೊಂದೇ ಸಾರ್ವತ್ರಿಕ ಎಂದು ಒಪ್ಪುವ ಸಮಾಜಕ್ಕೆ ಈ ತಾರತಮ್ಯ ಗಮನಕ್ಕೇ ಬರುವುದಿಲ್ಲ. ಆದರೆ ಸೂಕ್ಷ್ಮವಾಗಿ ಗಮನಿಸಿದರೆ ಜೀವನದ ದಿನನಿತ್ಯದ ಸಣ್ಣ ಪುಟ್ಟ ಘಟನೆಗಳೂ ಪುರುಷಪ್ರಧಾನ ಸಮಾಜದ ಕೊಡುಗೆಯೇ ಆಗಿರುತ್ತವೆ. ಈ ಅಂಶವನ್ನು ಗಮನಿಸಿ ಅದಕ್ಕೆ ಪ್ರತಿಕ್ರಿಯಿಸುವ ಅನಿವಾರ್ಯ ಸ್ಥಿತಿ ಇಂದು ಇದೆ. ವಿಶೇಷತಃ ಲೇಖಕಿಯರು ಆಕ್ಟಿವಿಸ್ಟರೂ ಆಗಿರುವಾಗ ಹೀಗೆ ಸ್ಪಂದಿಸದೆ ಉಳಿಯುವುದು ಅಸಾಧ್ಯ. ಈ ಎಚ್ಚರದಿಂದ ಲೇಖಕಿ ಚಂದ್ರಮತಿಯವರು ತಮ್ಮ ಸಾಮಾಜಿಕ ಎಚ್ಚರವನ್ನು ಈ ಲೇಖನಗಳಲ್ಲಿ ದಾಖಲಿಸಿದ್ದಾರೆ.


ಕಾಲೇಜಿಗೆ ಹೋಗುವ ವಿದ್ಯಾರ್ಥಿನಿ ವತ್ಸಲಾಳ ಕೊಲೆಯಿಂದ ಹಿಡಿದು ಹೆರಿಗೆಯ ಸಮಯದಲ್ಲೇ ಮರಣವಪ್ಪುವ ಮಹಿಳೆಯರವರೆಗೆ, ದೇಶದ ಮೊಟ್ಟಮೊದಲ ಮಹಿಳಾ ಐಪಿಎಸ್ ಅಧಿಕಾರಿ ಎಂದು ಖ್ಯಾತರಾದ ಕಿರಣ್ ಬೇಡಿಯಂಥ ಪ್ರತಿಷ್ಠಿತ ಮಹಿಳೆಯಿಂದ ಹಿಡಿದು ತಮ್ಮ ಸಹಜ ಜೀವನಾಧಾರವಾಗಿದ್ದ ಕಾಡುಗಳಿಂದ ಹೊರತಳ್ಳಲ್ಪಟ್ಟು ನೆಲೆಗೆಟ್ಟ ಆದಿವಾಸಿ ಮಹಿಳೆಯರವರೆಗೆ ಸಮಾಜದ ಎಲ್ಲ ಸ್ತರಗಳಲ್ಲಿ ಲಿಂಗಭೇದ ಹೇಗೆ ಕೆಲಸ ಮಾಡುತ್ತದೆ ಎಂಬುದನ್ನು ಲೇಖಕಿ ಇಲ್ಲಿ ಗುರುತಿಸಿಕೊಡುತ್ತಾರೆ. 'ಕೊಟ್ಟಂತೆ ಮಾಡಿ ಕಸಿಯುವುದೇಕೆ?' ಎಂಬ ಲೇಖನದಲ್ಲಿ ದಕ್ಷ ಅಧಿಕಾರಿ ಎಂದು ಹೆಸರು ಗಳಿಸಿ, ಮ್ಯಾಗ್ಸೆಸೆ ಪ್ರಶಸ್ತಿ ಪಡೆದ ಕಿರಣ್‌ಬೇಡಿಯವರನ್ನು ಪೊಲೀಸ್ ಕಮಿಷನರ್ ಆಗಿ ಆಯ್ಕೆ ಮಾಡದೆ ಅವರಿಗಿಂತ ಕಿರಿಯ ಅಧಿಕಾರಿಯಾದ ದಧವಾಲಾ ಅವರನ್ನು ಆಸ್ಥಾನಕ್ಕೆ ಆರಿಸಿದಂಥ ಪೊಲೀಸ್ ಇಲಾಖೆಯ ಲಿಂಗತಾರತಮ್ಯ ಧೋರಣೆಯನ್ನು ಚರ್ಚಿಸಿದ್ದಾರೆ ಚಂದ್ರಮತಿ. 'ಮಧ್ಯರಾತ್ರಿಯ ಪಾರ್ಟಿಗಳಲ್ಲಿ ಭಾಗವಹಿಸದಿರುವುದು, ವೃತ್ತಿಗೆ ಸಂಬಂಧಿಸದ ಕೆಲಸಗಳನ್ನು ಮಾಡದಿರುವುದೇ ನನ್ನ ದೋಷ' ಎಂದು ಕಿರಣ್‌ಬೇಡಿ ತಮಗಾದ ಅನ್ಯಾಯದ ವಿರುದ್ಧ ಪ್ರತಿಭಟಿಸಿ ರಾಜೀನಾಮೆ ನೀಡಿ ಹೊರಬಂದದ್ದು ಮೆಚ್ಚುಗೆ ಗಳಿಸಿದರೂ, ಲಿಂಗವ್ಯವಸ್ಥೆಯ ವೈಖರಿಯು ವಿಷಾದವನ್ನು ಹುಟ್ಟಿಸುವಂಥದು. ಅಂತಹ ಪ್ರತಿಷ್ಠಿತರ ಮಟ್ಟದಲ್ಲೇ ಈ ಸ್ಥಿತಿ ಇರುವಾಗ ಇನ್ನು ಸಾಮಾನ್ಯರ ಪಾಡೇನು ಎಂದು ಲೇಖಕಿ ಸಹಜವಾಗಿ ತಮ್ಮ ಆತಂಕವನ್ನು ದಾಖಲಿಸುತ್ತಾರೆ.

'ನಾರಿಭಾವ'ದ ಹಲವಾರು ಲೇಖನಗಳು ಮಹಿಳೆಯರಿಗೆ ವಿವಿಧ ಕ್ಷೇತ್ರಗಳಲ್ಲಿ ಮಹಿಳೆಯರ ಸಾಧನೆಗಳ ಮಾದರಿಗಳನ್ನು ತಿಳಿಸಿಕೊಡುವ ಯತ್ನ ಮಾಡುತ್ತವೆ. ರಾಷ್ಟ್ರಪತಿ ಪಟ್ಟಕ್ಕೇರಿದ ಪ್ರತಿಭಾ ಪಾಟೀಲ್, ಗಗನಯಾತ್ರಿ ಸುನೀತಾ ವಿಲಿಯಮ್ಸ್, ಒಡಿಯಾದ ಪ್ರತಿಭಾನ್ವಿತ ಲೇಖಕಿ ಪ್ರತಿಭಾ, ಪದ್ಮವಿಭೂಷಣ ಪ್ರಶಸ್ತಿ ಪಡೆದ ಮಹಾಶ್ವೇತಾದೇವಿ, ಕಾರ್ಗಿಲ್ ಯುದ್ಧದ ವರದಿಗಾರರಾಗಿ ಖ್ಯಾತಿ ಪಡೆದು ಪದ್ಮಶ್ರೀ ಪ್ರಶಸ್ತಿ ಪಡೆದಂಥ ಬರ್ಖಾದತ್ತ, ಭಾರತದ ಸ್ವಾತಂತ್ರ್ಯಕ್ಕಾಗಿ ಶ್ರಮಿಸಿದ ವಿದೇಶೀ ಮಹಿಳೆಯರು, ವಿಶ್ವ ಟೆನಿಸ್ ಮಹಿಳಾ ಛಾಂಪಿಯನ್ ವೀನಸ್ ವಿಲಿಯಮ್ಸ್, ಸ್ತ್ರೀವಾದಿ ಲೇಖಕಿ ಕಾರ್ಯಕರ್ತೆ ವಿಜಯಾದಬ್ಬೆ ಮುಂತಾದ ಅನೇಕ ಮಹಿಳಾ ಸಾಧಕಿಯರ ಪರಿಚಯ ನೀಡುವ ಲೇಖನಗಳು ಇಲ್ಲಿ ಕುತೂಹಲಕರವಾಗಿ ಮಹಿಳಾ ಚರಿತ್ರೆಯೊಂದನ್ನು ಕಟ್ಟಲು ಹವಣಿಸುತ್ತವೆ.

ದಿನಪತ್ರಿಕೆಯೊಂದಕ್ಕೆ ಅಂಕಣಕ್ಕಾಗಿ ನಿಯಮಿತವಾಗಿ ಲೇಖನಗಳನ್ನು ನಿರಂತರವಾಗಿ ಬರೆಯುವುದು ತುಂಬ ಒತ್ತಡದ ಕಾರ್ಯ. ಆದರೂ ಶ್ರೀಮತಿ ಚಂದ್ರಮತಿ ಸೋಂದಾ ಈ ಹೊಣೆಯನ್ನು ಸಮರ್ಥವಾಗಿಯೇ ನಿರ್ವಹಿಸಿದ್ದಾರೆ ಎಂದು ಈ ಲೇಖನಗಳಿಂದ ಅರಿಯಬಹುದಾಗಿದೆ. ಪೊಲೀಸ್ ಇಲಾಖೆಯಲ್ಲಿ ಮಹಿಳೆಯರಿಗೆ ಸರಿಯಾದ ಪ್ರಮಾಣದಲ್ಲಿ ಪ್ರಾತಿನಿಧ್ಯ ಸಿಕ್ಕದಿರುವ ಬಗ್ಗೆ, ಅಂಗನವಾಡಿ ಕಾರ್ಯಕರ್ತೆಯರ ದುಡಿಮೆ ಹಾಗೂ ವೇತನದ ನಡುವಿನ ಕಂದರಗಳ ಬಗ್ಗೆ, ಸುರಿವ ಮಳೆಯನ್ನೂ ಲೆಕ್ಕಿಸದೆ ಸಿರಸಿ ಸಮೀಪದ ಗ್ರಾಮೀಣ ಜನತೆ ವಿದ್ಯಾರ್ಥಿನಿಯೊಬ್ಬಳು ಕೊಲೆಯಾದಾಗ ಪ್ರತಿಭಟಿಸಿದ ರೀತಿಯ ಬಗ್ಗೆ, ಸರ್ಕಾರಿ ಆಡಳಿತಶಾಹಿಯ ಮೈತುಂಬ ಲಂಚವೇ ರಕ್ತವಾಗಿರುವ ಬಗ್ಗೆ, ಅಭಿವೃದ್ಧಿಯ ಹೆಸರಿನಲ್ಲಿ ಕೃಷಿಭೂಮಿಯನ್ನು ಸರ್ಕಾರ ಆಕ್ರಮಿಸಿ ರೈತಮಹಿಳೆಯರನ್ನು ಜೀವಿಸಗೊಡದಂತೆ ಮಾಡಿರುವ ಬಗ್ಗೆ – ಹೀಗೆ ಹಲವು ಹದಿನೆಂಟು ಸಾಮಾಜಿಕ ರಾಜಕೀಯ, ಆರ್ಥಿಕ, ಧಾರ್ಮಿಕಾದಿ ವಿಚಾರಗಳ ಬಗ್ಗೆ ಲೇಖಕಿ ಚಿಂತಿಸಿದ್ದಾರೆ. ಅಗತ್ಯವಿದ್ದೆಡೆ ಅವರು ಖಾರವಾಗಿ ಪ್ರತಿಕ್ರಿಯಿಸುವುದಕ್ಕೆ 'ಚಿಗುರಿನಲ್ಲೇ ಚಿವುಟಬೇಕು' ಎಂಬ ಲೇಖನವೊಂದು ನಿದರ್ಶನ. ಅಂಕಣ ಲೇಖನ ಒಂದು ವಿಶಿಷ್ಟ ಕಲೆ. ವಿಷಯ ಎಷ್ಟೇ ಗಂಭೀರವಾದರೂ ಅದನ್ನು ಹೇಳುವ ಕ್ರಮ ಭಾರವಾದರೆ ಓದುಗರಿಗೆ ತಲುಪದೆ ಹೋಗಬಹುದು. ಹೇಳುವ ಭಾಷೆ ಸರಳ, ಭಾವಪೂರ್ಣ. ಆದರೆ ವೈಚಾರಿಕತೆಗೆ ಎರವಾಗದ ಹಾಗೆ ಸಮತೋಲನ ವಹಿಸಿರುವುದು ಸೋಂದಾ ಅವರ ಈ ಕೃತಿಯ ವೈಶಿಷ್ಟ್ಯವಾಗಿದೆ. ❑



ನಾರಿಭಾವ
(ಅಂಕಣ ಲೇಖನ ಸಂಕಲನ)
ಲೇ : ಡಾ. ಚಂದ್ರಮತಿ ಸೋಂದಾ
ಪ್ರ : ಸಾಹಿತ್ಯ ಚಂದನ, ಬೆಂಗಳೂರು, 2009
ಪುಟ : 168 : ಬೆಲೆ : ರೂ. 85/-



ಹೆಣ್ಣಿಗೆ ನ್ಯಾಯ ಎಲ್ಲಿದೆ?

■ ಎಸ್. ವಿದ್ಯಾ

ಕುಸುಮ ದೂರದ ಶಿರಸಿಯಲ್ಲಿ ಹುಟ್ಟಿ ಬೆಳೆದ ಹೆಣ್ಣುಮಗಳು. ಆಕೆಯನ್ನು ಕಾರ್ಕಳಕ್ಕೆ ಮದುವೆ ಮಾಡಿಕೊಟ್ಟರು. ಇಬ್ಬರು ಮಕ್ಕಳಿದ್ದಾರೆ. ಮದುವೆಯಾಗಿ ಹತ್ತು ವರ್ಷಗಳಾಯಿತು. ಮನೆಯಲ್ಲಿ ದಿನಾಲೂ ಗಂಡನಿಂದ ಹಿಂಸೆ, ಕುಟುಂಬದ ಹಿರಿಯರಿಂದ ಪಂಚಾಯ್ತಿ, ಪೊಲೀಸ್ ಕಂಪ್ಲೇಂಟ್, ಮುಚ್ಚಳಿಕೆ ಎಲ್ಲಾ ನಡೆಯಿತು. ಆದರೆ ಹಿಂಸೆ ತಪ್ಪಿಲ್ಲ. ಕೊನೆಗೆ ಆಕೆ ಬೇಸತ್ತು ಕೌಟುಂಬಿಕ ದೌರ್ಜನ್ಯ ಕಾಯ್ದೆಯಡಿಯಲ್ಲಿ CDPO ರವರಿಗೆ ದೂರನ್ನು ನೀಡಿದರು. ಅಲ್ಲಿಯೂ ಮತ್ತೆ ಆಕೆಗೆ ಹೊಂದಿಕೊಳ್ಳಲು ತಿಳಿಸಿದರು. ಮನೆಗೆ ಬಂದ ಬಳಿಕ ಗಂಡನ ಹಿಂಸೆ ಅಧಿಕವಾಯ್ತು. CDPO ರಿಗೆ ತಿಳಿಸಿದ್ರೆ ಇವಳ ಬಾಯಿ ಸ್ವಲ್ಪ ಜೋರು ಹೆಂಗಸು ತಗ್ಗಿ ಬಗ್ಗಿ ಇರಬೇಕು ಅಂತ ಹೇಳ್ತಾರೆ. 10 ವರ್ಷಗಳಿಂದ ಸತತವಾಗಿ ಹಿಂಸೆ ಅನುಭವಿಸಿ ಈಗ ತನಗೆ ನೆಮ್ಮದಿಬೇಕು. ತಾನು ಪ್ರತ್ಯೇಕವಾಗಿ ಹಿಂಸೆ ರಹಿತವಾಗಿ ಬದುಕುತ್ತೇನೆಂದು ಹೇಳುವುದು ತಪ್ಪೇ? ಹೊಂದಿಕೊಳ್ಳಬೇಕಾಗಿರುವುದು ಹೆಣ್ಣು ಮಾತ್ರವೇ? ಇದು ಕುಸುಮಳ ವ್ಯಥೆ ಮಾತ್ರ ಅಲ್ಲ; ಎಲ್ಲಾ CDPO ಕಛೇರಿಗೆ ದೂರು ನೀಡಿದ ಮಹಿಳೆಯರ ವ್ಯಥೆ.

ವಿನುತಳಿಗೆ (22ವರ್ಷ) ಮದುವೆಯಾಗಿ 2 ವರ್ಷವಾಯ್ತು. 1 ಲಕ್ಷ ವರದಕ್ಷಿಣೆ 15 ಪವನು ಚಿನ್ನ ನೀಡಿ ಮದುವೆ ಮಾಡಿಕೊಡಲಾಯ್ತು. 3 ತಿಂಗಳು ಗಂಡ ಹೆಂಡತಿ ಅನ್ಯೋನ್ಯವಾಗಿದ್ದರು. ಬಳಿಕ ಗಂಡ ತನ್ನ ಹಳೆ ಪ್ರೇಯಸಿ ಜೊತೆಗೆ ಸರಸ ಪ್ರಾರಂಭಿಸಿದಾಗ ಈಕೆ ಅದನ್ನು ವಿರೋಧಿಸಿದಳು. ಆಗ ಈಕೆಯ ಚಾರಿತ್ರ್ಯದ ಬಗ್ಗೆ ಇಲ್ಲ ಸಲ್ಲದ ಅಪವಾದ ಹಾಕಿದರು. ಆಗ ಆಕೆ ಆತ್ಮಹತ್ಯೆಗೆ ಪ್ರಯತ್ನಿಸಿದಳು. ವಿಷಯ ತಿಳಿದ ಆಕೆಯ ಹೆತ್ತವರು ಆಕೆಗೆ ಸಮಾಧಾನ ಪಡಿಸಿ, ಹಿರಿಯರ ಸಮಕ್ಷಮದಲ್ಲಿ ಪಂಚಾಯ್ತಿ ಮಾಡಿಸಿ ಗಡನ ಮನೆಗೆ ಕಳುಹಿಸಿದರು. ಪರಿಸ್ಥಿತಿ ಸುಧಾರಿಸಲಿಲ್ಲ. ಆಕೆ ಈಗ ವಿವಾಹ ವಿಚ್ಛೇದನ ಮತ್ತು ಜೀವನಾಂಶ ಕೋರಿ ಕೋರ್ಟಿಗೆ ಅರ್ಜಿ ಸಲ್ಲಿಸಿರುತ್ತಾಳೆ. ಆಕೆಯ ಪರಿಸ್ಥಿತಿ "ಬೆಂಕಿಯಿಂದ ಬಾಣಲೆಗೆ" ಎಂಬಂತಾಗಿದೆ. ಕೋರ್ಟಿನಲ್ಲಿ ವಿಚಾರಣೆ ಸಂದರ್ಭದಲ್ಲಿ ವಕೀಲರ ಸವಾಲು "ನೀನು ಬಡವಳು, ಜೀವನಾಂಶ ಕೋರಿ ಅರ್ಜಿ ಹಾಕಿದ್ದೀಯಲ್ಲಾ. ಕೋರ್ಟಿಗೆ ಪ್ರತಿಬಾರಿ ಬರುವಾಗಲೂ ಮ್ಯಾಚಿಂಗ್ ಸೀರೆ, ಬ್ಲೌವ್ಸ್ ಹಾಕಿ ಬರುತ್ತೀ ಅದಕ್ಕೆಲ್ಲಾ ಹಣ ಎಲ್ಲಿಂದ ಬರುತ್ತೆ" ಎಂದಾಗ ಹುಡುಗಿ ಗೊಳೋ ಎಂದು ಅಳುತ್ತಾ ಕುಸಿದು ಬಿದ್ದಳು. ಮದುವೆ ಸಂದರ್ಭದಲ್ಲಿ ಆಕೆಗೆ 20 ಸೀರೆ, 15 ಚೂಡಿದಾರ, 8 ನೈಟಿ ಉಡುಗೊರೆಯಾಗಿ ಬಂದಿತ್ತಂತೆ. ಅಂದರೆ ಹೆಣ್ಣು ಅಚ್ಚುಕಟ್ಟಾಗಿ ಉಡುಗೆ ತೊಟ್ಟು ಬಂದಲ್ಲಿ ಆಕೆಯ ಶೀಲವನ್ನೇ ಶಂಕಿಸಿ ಕೋರ್ಟಿನಲ್ಲಿ ಕೇಸನ್ನು ಗೆಲ್ಲಲು ವಕೀಲರು ತಮ್ಮ ನಾಲಿಗೆಯನ್ನು ಹೀಗೆ ಹರಿಯಬಿಡುವುದು ನ್ಯಾಯವೇ? ಅಲ್ಲಿ ಆಕೆಗೆ ಎಷ್ಟು ನ್ಯಾಯ ಸಿಗಬಹುದು. ನ್ಯಾಯಾಲಯದಲ್ಲಿ ಹೆಣ್ಣು ನ್ಯಾಯ ಅರಸಿ ಹೋಗಬಲ್ಲಳೇ?

ಸುಧಾ (26 ವರ್ಷ) ಮದುವೆಯಾಗಿ 4 ವರ್ಷವಾಯ್ತು 2ವರ್ಷದ ಮಗುವಿದೆ. ದೂರದ ಕೇರಳಕ್ಕೆ ಮದುವೆ ಮಾಡಿಕೊಡಲಾಯ್ತು. ಗಂಡನ ಹಿಂಸೆತಾಳಲಾರದೆ ತವರಿಗೆ ಬಂದಳು. ಗಂಡನನ್ನು ಕೌನ್ಸೆಲಿಂಗ್‌ಗೆ ಕರೆದಾಗ ಆತ ಸಹಕರಿಸಲಿಲ್ಲ. ಹಾಗೆ ಜೀವನಾಂಶ ಮತ್ತು ವಿಚ್ಛೇದನಕ್ಕಾಗಿ ಕೋರ್ಟಿಗೆ ಹಾಕಲಾಯ್ತು. ಕೋರ್ಟಿನಲ್ಲಿ ನ್ಯಾಯಾಧೀಶರು ಆತನಲ್ಲಿ "ನಿನಗೆ ಹೆಂಡ್ತಿ ಬೇಕಾ? ಆಕೆಯನ್ನು ಕರೆದುಕೊಂಡು ಹೋಗ್ತಿಯಾ?" ಎಂದು ವಿಚಾರಿಸಿದಾಗ ಆತ ನನಗೆ ಹೆಂಡ್ತಿ ಬೇಕು. ಕರೆದುಕೊಂಡು ಹೋಗುವುದಾಗಿ ತಿಳಿಸಿದ. ಸುಧಾಳ ಅಹವಾಲನ್ನು ಆಲಿಸಲೇ ಇಲ್ಲ. ಉಟ್ಟಬಟ್ಟೆಯಲ್ಲಿ ಮಗುವಿನೊಂದಿಗೆ ಆಕೆಯನ್ನು ಗಂಡನೊಂದಿಗೆ ಕಳುಹಿಸಿಕೊಡಲಾಯ್ತು. ಒಂದು ತಿಂಗಳ ಬಳಿಕ ಮತ್ತೆ ಸುಧಾ ವಾಪಸ್ ತವರಿಗೆ ಬಂದಿದ್ದಾಳೆ!

ಮಹಿಳಾಪರ ಚಿಂತನೆಇಲ್ಲದ, ಪಿತೃಪ್ರಧಾನ ವ್ಯವಸ್ಥೆ, ಮದುವೆಯೇ ಹೆಣ್ಣಿನ ಸರ್ವಸ್ವ ಎಂದು ನಂಬಿರುವ ಈ ಜನರು ನೊಂದ ಮಹಿಳೆಗೆ ಎಂತಹ ನ್ಯಾಯ ನೀಡಬಲ್ಲರು. ಕೌಟುಂಬಿಕ ದೌರ್ಜನ್ಯ ಕಾಯ್ದೆ, ವರದಕ್ಷಿಣೆ ತಡೆ ಕಾಯ್ದೆ, ಮಹಿಳಾ ದೌರ್ಜನ್ಯ ತಡೆ ಎಲ್ಲವೂ ಕನ್ನಡಿಯೊಳಗಿನ ಗಂಟೇ ಹೊರತು ನಿಜವಾಗಿ ಆಕೆಗೆ ನ್ಯಾಯ ದೊರೆಯುತ್ತಿಲ್ಲ. ನಿಜವಾಗಿಯೂ ಈ ಕಾನೂನಿಗೆ ಹಾಗೂ ಆಡಳಿತ ಯಂತ್ರಕ್ಕೆ ಆಗಬೇಕಾಗಿದೆ ಶೀಘ್ರ ಕಾಯಕಲ್ಪ. ❑

Registered with Registrar of Newspapers of India under No. KARKAN/2007/22289
'NAMMA MANASA', REGD. No. : MAG(3) NPP/399(A) / 2006-07 KA/BGS/2074/2010-12

ನಮ್ಮ ಮಾನಸ

- ಮಹಿಳೆಯರಿಗೆ ಸಂಬಂಧಿಸಿದ ಲೇಖನಗಳು, ವರದಿಗಳು ವಿಶ್ಲೇಷಣೆಗಳು, ವಿಮರ್ಶೆಗಳು, ಅನುಭವಗಳು, ಕತೆ-ಕವನಗಳನ್ನು ನಮ್ಮ ಪತ್ರಿಕೆಯಲ್ಲಿ ಪ್ರಕಟಿಸಲಾಗಿದೆ.
- ಪತ್ರಿಕೆಯು ವಿಷಯಾಧರಿತವಾಗಿದ್ದು, ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಮಹಿಳೆಯರ ಬದುಕಿನ ಮೇಲೆ ಪರಿಣಾಮ ಬೀರುವ ಸಾಮಾಜಿಕ, ರಾಜಕೀಯ, ಆರ್ಥಿಕ ವಿಚಾರಗಳನ್ನು ಚರ್ಚಿಸಲಾಗಿದೆ.
- ವಿವಾಹ, ಕುಟುಂಬದಂತಹ ಸಾಮಾಜಿಕ ಸಂಸ್ಥೆಗಳು, ಮನೆಗೆಲಸ, ಸಂಬಳರಹಿತ ದುಡಿಮೆ, ಆರ್ಥಿಕ ನೀತಿ, ಜಾತಿ, ವರ್ಗ, ಸೌಂದರ್ಯ, ಲಿಂಗ, ಹೆಣ್ತನ ಮುಂತಾದ ವಿಷಯಗಳನ್ನು ಚರ್ಚೆಗೊಳಪಡಿಸಿ ಪ್ರಕಟಿಸಲಾಗಿದೆ. ಗುತ್ತಿಗೆ ಪೌರಕಾರ್ಮಿಕರ ಹೋರಾಟಗಳಿಗೆ ಸ್ಪಂದಿಸಿ ಲೇಖನಗಳನ್ನು ಪ್ರಕಟಿಸಿದೆ.
- ಆರೋಗ್ಯ, ಲೈಂಗಿಕತೆ, ಅಪಾಯಕಾರೀ ಗರ್ಭ ನಿರೋಧಕ ಗಳು, ಆರ್ಥಿಕತೆ ಮತ್ತು ಅಭಿವೃದ್ಧಿ, ಅಭಿವೃದ್ಧಿ ಯೋಜನೆ ಗಳು ಮುಂತಾದ ವಿಚಾರಗಳನ್ನು ವಿಮರ್ಶೆಗೊಳ ಪಡಿಸಲಾಗಿದೆ.
- ಅಣ್ವಸ್ತ್ರೀಕರಣ, ಮಿಲಿಟರೀಕರಣ, ಜಾಗತೀಕರಣದಂಥ ಬೆಳವಣಿಗೆಗಳನ್ನು ಮಹಿಳಾ ದೃಷ್ಟಿಕೋನದಿಂದ ಪ್ರಶ್ನಿಸಲಾಗಿದೆ.
- ಇತರ ಪ್ರಜಾಸತ್ತಾತ್ಮಕವಾದ ಸಂಘಟನೆಗಳೊಡನೆ ಕೋಮುವಾದ, ಸಮಾನ ನಾಗರಿಕ ಸಂಹಿತೆ, ಮೀಸಲಾತಿ, ಲೈಂಗಿಕತೆ, ಪರಿಸರ, ಸ್ಥಳಾಂತರ ಮುಂತಾದ ವಿವಾದಗಳನ್ನು ಕುರಿತ ಚರ್ಚೆಗಳಲ್ಲಿ, ಆಂದೋಲನಗಳಲ್ಲಿ ಪಾಲ್ಗೊಳ್ಳಲಾಗಿದೆ.
- ಸ್ವಸಹಾಯ ಸಂಘಗಳನ್ನು ರಚಿಸುವ ಮೂಲಕ ಮಹಿಳೆಯರ ಸಬಲತೆಗೆ ಪ್ರೋತ್ಸಾಹ ನೀಡಲಾಗಿದೆ.
- ನಮ್ಮದೇ ಮಿತಿಯಲ್ಲಿ ತೊಂದರೆಗೊಳಗಾದ ಮಹಿಳೆಯರಿಗೆ ಸಲಹೆ, ನೈತಿಕ ಬೆಂಬಲಗಳಲ್ಲದೆ ಕಾನೂನಿನ ನೆರವನ್ನು ನೀಡುತ್ತಿದ್ದೇವೆ.
- ಮಹಿಳೆಯರು ತಾವಿದ್ದೆಡೆಯಲ್ಲಿ ಮಹಿಳಾ ಪತ್ರಿಕೆಗಳನ್ನು ಹೊರತರಲು ಪ್ರಯತ್ನಿಸಿದಲ್ಲಿ, ಗುಂಪುಗಳನ್ನು ರಚಿಸಬೇಕಾದಲ್ಲಿ ಸಹಕರಿಸಲು ಉದ್ದೇಶಿಸಿದ್ದೇವೆ.

Registered Magazine

Posted on 9th of every month at MBC, Bangalore GPO
Total No. of Pages: 24

ವಿಳಾಸ :
ನಮ್ಮ ಮಾನಸ
114/5, 9ನೇ ತಿರುವು, 2ನೇ ಮುಖ್ಯರಸ್ತೆ
ಚಾಮರಾಜಪೇಟೆ
ಬೆಂಗಳೂರು - 560 018